ಶೂದ್ರ

ಈ ಸಂಚಿಕೆಯಲ್ಲಿ :

ಬಿಳುಮನೆ ರಾಮದಾಸ್–ಆರ್.ವಿ. ಭಂಡಾರಿ–ಧರಣೇಂದ್ರ ಕುರಕುರಿ
ಎಸ್. ಮಂಜುನಾಥ್ – ಎಚ್. ಪಟ್ಟಾಭಿರಾಮ ಸೋಮಯಾಜಿ
ಪಿ.ವಿ. ಸುಬ್ರಾಯ–ಬಳಗುಳಿ ರವೀಂದ್ರಭಟ್–ನಾಗಣ್ಣ–ಒಳನೋಟ
ಕನಸಿಗೊಂದು ಕಣ್ಣು

ಬೆಲೆ : 5-00 ರೂ. ದೂರವಾಣಿ : 643337

ಮುಕ್ತಚರ್ಚೆಗಾಗಿ 'ಶೂದ್ರ' ತಿಂಗಳ ಪತ್ರಿಕೆ

ಸಂಚಿಕೆ : 3 ಜನವರಿ 1991 ಸಂಪುಟ : 17

ಸಹಾಯಕ ಸಂಪಾದಕರು : ನಿರ್ಮಲಾ ರೆಡ್ಡಿ – ಉತ್ತನೂರು ರಾಜಮ್ಮ ವಿ. ಶೆಟ್ಟಿ
ಕೆ. ಎನ್. ಅರುಣ್ – ಸ. ರಘುನಾಥ್
ಜರಗನಹಳ್ಳಿ ಶಿವಶಂಕರ್–ಎಲ್. ಎನ್. ಮುಕುಂದರಾಜ್

ಶೂದ್ರಕ್ಕೆ ಚಂದಾ ಕಳಿಸಿ. ಆಜೀವ ಚಂದಾ ಬಾಬ್ತು ಕಂತುಗಳಲ್ಲಿ ಕೊಡುವವರು ಸ್ವಲ್ಪ ಜಾಗ್ರತೆ ಕೊಟ್ಟರೆ ಒಳಿತು. ಚಂದಾದ ರೀತಿಯಲ್ಲಿ ನಾಲ್ಕೈದು ವರ್ಷ ಕೊಟ್ಟರೆ ನಿಜವಾಗಿಯೂ ತೊಂದರೆಯಾಗುತ್ತದೆ. ಶೂದ್ರ ಬರದಿದ್ದರೆ ಪತ್ರ ಬರೆಯಿರಿ. ಚಂದಾವನ್ನು ಎಂ. ಓ. ಮೂಲಕ ಕಳುಹಿಸುವವರು ದಯವಿಟ್ಟು ಕೌಂಟರ್ ಭಾಗದಲ್ಲಿ ವಿಳಾಸ ಬರೆಯಿರಿ. ಲೇಖನ ಮತ್ತು ಕವನ ಕಳುಹಿಸುವವರು ರಿಪ್ಲೈ ಕಾರ್ಡಿಡಿ. ಚೆಕ್ ಮೂಲಕ ಕಳುಹಿಸುವವರು 10 ರೂ. ಹೆಚ್ಚುವರಿ ತುಂಬಿ.

ನೀವು ಕಳಿಸುವ ಚಂದಾ ಶೂದ್ರದ ಬೆಳವಣಿಗೆಯ ಸಂಕೇತ

ವಾರ್ಷಿಕ ಚಂದಾ : 50-00 ರೂ. ಪುಸ್ತಕ ಭಂಡಾರಗಳಿಗೆ 55-00 ರೂ.
ಆಜೀವ ಚಂದಾ : 400-00 ರೂ. (ನಾಲ್ಕು ಕಂತುಗಳಲ್ಲಿ) 450–00 ರೂ.

ಶೂದ್ರ ಶ್ರೀನಿವಾಸ್, ನಂ. 1, 3 ನೇ ಕ್ರಾಸ್, ಬಾಲಾಜಿನಗರ, ಸುದ್ದುಗುಂಟೆಪಾಳ್ಯ
ಡಿ. ಆರ್. ಕಾಲೇಜ್ ಅಂಚೆ, ಬೆಂಗಳೂರು-560 029

ಶಿಕಾರಿ

— ಬಿಳುಮನೆ ರಾಮದಾಸ್

— ೧ —

ಗದ್ದೆಯಂಚಿನ ಮೇಲೆ ನಿಂತು ಹಸಿರಾಗಿ ಬೆಳೆದು ತೆನೆಬಿಟ್ಟ ಭತ್ತದ ಸಸಿಗಳನ್ನು ನೋಡುತ್ತಿರುವಾಗ ಕಾಡುಹಂದಿಯ ಹೆಜ್ಜೆಗಳು ಕಣ್ಣಿಗೆ ಬಿದ್ದಿತು. ಕುತೂಹಲದಿಂದ ಹೆಜ್ಜೆಗಳನ್ನು ಹಿಂಬಾಲಿಸಿಕೊಂಡು ಹೋದೆ. ಗದ್ದೆಯಿಂದ ಕಾಡಿಗೆ ಹತ್ತುವಲ್ಲಿ ಭತ್ತದ ಸಸಿಗಳನ್ನು ಅಗಿದು ಲೂಟಿ ಮಾಡಿ ಕಾಡುಹಂದಿ ಮಲಗೆದ್ದು ಹೋದದ್ದು ಕಂಡಿತು. ಹಾಲು ತುಂಬಿದ ತೆನೆಗಳನ್ನು ಅಗಿದು ನಷ್ಟ ಮಾಡಿದ್ದುದನ್ನು ನೋಡಿ ಹೊಟ್ಟೆಗೆ ಬೆಂಕಿ ಬಿದ್ದಿತು. ಕೆಲವು ದಿನಗಳಿಂದ ಗದ್ದೆ ಕಾಯುವುದಕ್ಕಾಗಿ ಮಾಡಿದ ಹಕ್ಕೆ ಮನೆಯಲ್ಲಿ ಮಲಗಿ ರಾತ್ರಿ ಗದ್ದೆಗಿಳಿಯುವ ಕಾಡುಹಂದಿ ದೊಡ್ಡುಗಳನ್ನು ಕೂಗಿ ಗಲಾಟೆ ಮಾಡಿ ಹೆದರಿಸುತ್ತಿದ್ದೆ. ನಿನ್ನೆ ಭೂಮಿಹುಣ್ಣಿಮೆ ಹಬ್ಬದ ಪ್ರಯುಕ್ತ ಗದ್ದೆಯಲ್ಲಿ ಮಲಗಲು ಉದಾಸೀನವಾಗಿ ಮನೆಯಲ್ಲೇ ಮಲಗಿದ್ದೆ. ಅದರ ಪರಿಣಾಮ ಗದ್ದೆಯಲ್ಲಿ ಕಂಡಿತ್ತು. ನನ್ನ ಸೋಮಾರಿತನಕ್ಕೆ ನಾನೇ ಶಪಿಸಿಕೊಳ್ಳುತ್ತಿರುವಾಗ ದೂರದಲ್ಲಿ ಹೊರಕಡೆಗೆ ಕೂತಿದ್ದ ನನ್ನ ತಮ್ಮ ತಮ್ಮಯ್ಯ ಕೂಗಿದ :

"ಅಣ್ಣಯ್ ಯಾತದೂ ಬಾಳ ನೋಡತ ನಿಂತಿದೆಯಲ್ಲ ?"

"ಹಂದಿ ಲೂಟಿ ಮಾಡೆವೆ ಕಣೋ" ನಾನೆಂದೆ.

"ಏನು ?"

"ಹಂದಿ, ಕಾಡಂದಿ ಲೂಟಿ ಮಾಡೆವೆ ಅಂದೆ."

"ಓಹೋ ! ನೋಡದಿಯಾ ನೀನು ನಿನ್ನೆ ರಾತ್ರಿಕೆ ಗದ್ದೆ ಕಾಯಲಿಲ್ಲ. ನೀನು ಹೇಳಿದ್ದರೆ ನಾನಾದರೂ ಗದ್ದೆ ಕಾಯುತಿದ್ದೆ. ಯಂತ ಕೆಲಸ ಆಗಿಹೋಯ್ತು. ಬಾಳ ಲೂಟಿ ಮಾಡೆವಾ ?"

"ಹೌದು."

ಗದ್ದೆಬದಿಯಲ್ಲಿ ಹರಿಯುವ ಹಳ್ಳದ ಕಡೆಗೆ ಹೋಗಿ ತಮ್ಮಯ್ಯ ಆತುರದಲ್ಲಿ ನನ್ನ ಕಡೆಗೆ ಬಂದ. ಹಂದಿ ಮಲಗಿ ಕೆಸರಿನಲ್ಲಿ ಹೊರಳಾಡಿ ಭತ್ತದ ಸಸಿಗಳು ನೆಲಸಮವಾದುದನ್ನು ನೋಡಿ "ಓಹೋಹೊ" ಎಂದು ಉದ್ಗಾರ ತೆಗೆದ. ನಾನು ಹಂದಿಯ ಹೆಜ್ಜೆಗಳನ್ನು ನೋಡುತ್ತ ಕಾಡುಹಂದಿಗಳು ಯಾವ ದಿಕ್ಕಿನಿಂದ ಗದ್ದೆಗೆ ಬಂದವು, ಹೋಗುವಾಗ ಎತ್ತಕಡೆಗೆ ಹೋದವು ಎಂದು ಹಂದಿಯ ಹೆಜ್ಜೆಗಳನ್ನು ಹಿಂಬಾಲಿಸಿ ಹೋದೆ. ಹೆಜ್ಜೆಗಳನ್ನು ನೋಡಿದರೆ ಒಂದೆರಡು ಹಂದಿಗಳು ಇದ್ದಂತೆ ಕಾಣಲಿಲ್ಲ. ಒಂದು ಹಿಂಡೇ ಇದ್ದಂತೆ ತೋರಿತು. ಗದ್ದೆಯ ಮೂಲೆಯಲ್ಲಿ ಕಾಡಿಗೆ ಮೇಲೆ ಹತ್ತಿ ಹೋಗಿದ್ದವು.

ಬಿಳುಮನೆ ರಾಮದಾಸ್, ವಾಣಿಜ್ಯಾಧಿಕಾರಿ, ವಾಣಿಜ್ಯ ಕಛೇರಿ, ಗಾಂಧಿನಗರ, ಬೆಂಗಳೂರು-9

ಅದೇ ದಿಕ್ಕಿನಿಂದ ಬಂದುದಕ್ಕೆ ಹೆಜ್ಜೆಗಳ ದಾಖಲೆ ಇತ್ತು. ಗದ್ದೆ ದಾಟಿ ಕಾಡಿಗೆ ಹತ್ತಿದೆ. ನಿನ್ನೆ ಬೈಗಿನ ಹೊತ್ತಿನಲ್ಲಿ ಕಾಡಿನಿಂದ ಗದ್ದೆಗೆ ಇಳಿಯುವಲ್ಲಿ ಪೊದೆಗಳ ಮರೆಯಲ್ಲಿ ಕುಳಿತು ಹೊರಕಡೆ ಮಾಡಿದ್ದೆ. ನಾನು ವಿಸರ್ಜಿಸಿದ ಹೊರಕಡೆಯ ಅಂಶ ಅಲ್ಲಿ ಕಾಣಲಿಲ್ಲ. ಹಂದಿಗಳು ಸ್ವಚ್ಛಗೊಳಿಸಿದ್ದವು. ಅಲ್ಲೆಲ್ಲ ಹಂದಿಗಳು ನೆಲವನ್ನು ಉತ್ತಿ ಉತ್ತಿ ಹಾಕಿದ್ದವು. ನೆಲ ಅಗೆದುಹಾಕಿದ್ದನ್ನು ನೋಡಿದರೆ ಅದು ಬೆಳಗಿನ ಜಾವದಲ್ಲಿ ಉತ್ತುಹಾಕಿದ್ದು ಎನ್ನಿಸಿತು. ನೆಲವಿನ್ನೂ ಹಸಿಹಸಿಯಾಗಿತ್ತು. ನನಗೆ ಹಂದಿ ಶಿಕಾರಿ ಮಾಡುವ ಬಯಕೆ ಆಯಿತು. ತಮ್ಮಯ್ಯನನ್ನು ಕೂಗಿದೆ:

"ತಮ್ಮಾಯ್-ಏ ತಮ್ಮಯ್ಯಾ...."

"ಓ...."

"ಇಲ್ಲಿ ಬಾರೊ."

ಗದ್ದೆಯಲ್ಲಿ ಹಂದಿಗಳು ಲೂಟಿ ಮಾಡಿದ್ದುದನ್ನು ಸಂಶೋಧನಾ ರೀತಿಯಲ್ಲಿ ತಮ್ಮಯ್ಯ ನೋಡುತ್ತಿದ್ದ. ಶಿಕಾರಿ ಬಾಡು ಎಂದರೆ ಹಲ್ಲು ಗಿಂಜುವ ಅವನು ನಾನು ಕರೆದ ಕೂಡಲೆ ಓಡೋಡಿ ಬಂದ. ಅವನ ಮುಖದಲ್ಲಿ ಭೀತಿ ಇತ್ತು. ನಾವು ಶಿಕಾರಿಗೆ ನುಗ್ಗದೆ ಬಹಳ ದಿನಗಳಾಗಿತ್ತು. ನನಗೆ ನೆನಪಿದ್ದಂತೆ ಈ ಸಾರಿಯ ಮಳೆ ಹಿಡಿದ ಮೇಲೆ ಶಿಕಾರಿಗೆ ನುಗ್ಗಿರಲಿಲ್ಲ.

"ಏನಣ್ಣಯ್ ?" ಹತ್ತಿರ ಬಂದು ಕೇಳಿದ.

"ನೋಡು ಇಲ್ಲಿ ಹಂದಿ ಉತ್ತಿ ಹಾಕಿದ್ದು. ಆ ಮಣ್ಣು ನೋಡದರೆ ಬೆಳಗಿನ ಜಾವ ಹಂದಿ ಗದ್ದಿಗೆ ಬಂದಂಗಿದೆ. ಏನು ಹೇಳತಿಯಾ ?"

"ಹೌದು. ಒಹೋಹೊ ಏನು ಗದ್ದೆ ಹೂಟಿ ಮಾಡದಂಗೆ ಆಗೆದೆ."

"ನೋಡದಿಯಾ ರಾತ್ರೆ ಮಲಗಾಕೆ ಉದಾಸೀನ ಮಾಡಿದ್ದಕ್ಕೆ ಏನು ಕತೆ ಆಗಿ ಹೋಯಿತು."

"ಹೌದು. ಇವತ್ತು ನಾನು ಮಲಗತೀನಿ. ಕೋವಿ ತಂದು ಕಾಯಂತೀನಿ. ಇವತ್ತು ರಾತ್ರಿ ಹಂದಿ ಮತ್ತೆ ಬಂದರೆ ಶಿಕಾರಿ ಮಾಡೇಬಿಡತೀನಿ."

ನಾನು ಹಂದಿ ಗದ್ದೆಗಿಳಿಯುವ ಮತ್ತು ಕಾಡಿಗೆ ಹತ್ತಿದ ಜಾಗವನ್ನು ನೋಡುತ್ತ ಇಲ್ಲೇ ಎಲ್ಲಾದರೂ ರಾತ್ರಿ ಹಂದಿ ಶಿಕಾರಿಗೆ ಮರಸು ಕೂತರೆ ಹೇಗೆ ಎಂದು ಯೋಚಿಸುತ್ತಿದ್ದೆ. ಸೂಕ್ತ ಸ್ಥಳಕ್ಕಾಗಿ ಹುಡುಕಾಡುತ್ತಿದ್ದವು ನನ್ನ ಕಣ್ಣುಗಳು. ಕಾಡಿಗೆ ಹತ್ತುವಲ್ಲಿದ್ದ ಒಂದು ಚಿಕ್ಕ ಕುನ್ನೇರಲು ಮರ ಕಣ್ಣಿಗೆ ಬಿದ್ದಿತು.

"ನೋಡು ನೀನೊಬ್ಬನೆ ಇವತ್ತು ಹಕ್ಕಿಮನೆಗೆ ಗದ್ದೆ ಕಾಯಾಕೆ ಬರಾದು ಬ್ಯಾಡ. ಮುದು ಕೆಲ್ಸ ಮಾಡಾನ. ಹಂದಿ ಗದ್ದಿಗೆ ಇಳದಿದ್ದು ವಾಪಾಸು ಹತ್ತಿದ್ದು ಇಲ್ಲೆ."

"ಹೌದು, ನಾನು ಹೆಜ್ಜೆಪೆಂಟ್ಟು ನೋಡದೆ."

"ಹೌದಾ? ನೋಡು, ಆ ಕುನ್ನೇರಲ ಮರದ ಮೇಲೆ ಇವತ್ತು ರಾತ್ರಿ ಇಬ್ಬರು ಶಿಕಾರಿಗೆ ಕೂರಾನ. ನಾವು ಹಕ್ಕೆಮನೇಲಿ ಕೂತು ದಬ್ಬ ಬಡಿಯಾದರಿಂದ ಪ್ರಯೋಜನ ಇಲ್ಲ. ಶಿಕಾರಿಯಾಗಲಿ ಆಗದೆ ಇರಲಿ ಹಂದಿ ಕಂಡರೆ ಈಡು ಹಾರಿಸಿ ಹೆದರಸಬೇಕು. ಒಂದು ಸಾರಿ ಈಡಿನ ಸದ್ದು ಕೇಳಿದರೆ ಮತ್ತೆ ಈ ಕಡೆ ಸದ್ಯಕ್ಕೆ ಬರಾದಿಲ್ಲ. ಏನಂತಿಯಾ?"

"ಹೌದು, ನೀನು ಹೇಳಾದು ಸರಿ. ಹಾಂಗೆ ಮಾಡಾನ."

ವಾಸ್ತವಿಕವಾಗಿ ನನಗೂ ನನ್ನ ತಮ್ಮನಿಗೂ ಪೈರು ಹಾಳಾದುದಕ್ಕೆ ಅಷ್ಟು ದುಃಖವಾಗಿರಲಿಲ್ಲ. ಕಾಡುಹಂದಿ ಶಿಕಾರಿ ಮಾಡದೆ ಬಹಳ ದಿನವಾಗಿತ್ತು. ಯಾವ ನೆಪದಲ್ಲಾದರೂ ಕಾಡುಹಂದಿ ಶಿಕಾರಿ ಮಾಡಿ ಅದರ ಮಾಂಸ ಜಗಿಯಬೇಕೆಂಬ ಆಸೆಯಾಗಿತ್ತು. ಇಬ್ಬರೂ ಆ ವಿಷಯವನ್ನು ಬಯಲು ಮಾಡದೆ ಮೇಲುನೋಟಕ್ಕೆ ಪೈರು ಲೂಟಿ ಮಾಡಿದ್ದಕ್ಕೆ ಹಂದಿ ಶಿಕಾರಿಗೆ ಹೊರಟಿದ್ದೆವು. ಪ್ರತಿ ವರ್ಷವೂ ಮಳೆಗಾಲದಲ್ಲಿ ಗದ್ದೆಗೆ ದೊಡ್ಡ ಕಾಡುಹಂದಿಗಳ ಕಾಟ ಇದ್ದದ್ದೆ. ದಟ್ಟ ಕಾಡಿನ ಮಧ್ಯೆ ಮನೆ ಜಮೀನು ಮಾಡಿಕೊಂಡಿದ್ದರೆ ಕಾಡುಪ್ರಾಣಿಗಳ ಕಾಟವಿಲ್ಲ ಎಂದರೆ ಯಾರಾದರೂ ನಂಬುತ್ತಾರೆಯೆ? ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗೆ ಅಂಜಿದೊಡೆಂತಯ್ಯ ಎಂಬ ವಚನ ನೆನಪಾಯಿತು.

– ೨ –

ಕಾಡುಹಂದಿ ಶಿಕಾರಿಯ ಪೂರ್ವಭಾವಿ ಸಿದ್ಧತೆಯಾಗಿ ನಾನು ತಮ್ಮಯ್ಯ ಇಬ್ಬರೂ ಬೆಳಗ್ಗೆಯಿಂದ ಕುನ್ನೇರಲ ಮರದಲ್ಲಿ ಶಿಕಾರಿಗೆ ಮರಸು ಕೂರಲು ಮರದ ಮೇಲೆ ಅಟ್ಟಣಿಗೆ ಕಟ್ಟುವುದು, ಮಳೆ ಬಂದರೆ ನಾವು ನೆನೆಯದಂತೆ ಬಿಳಿಹುಲ್ಲಿನ ಸೂರು ಮಾಡುವುದು, ನಿದ್ದೆ ಬಂದು ಕೆಳಕ್ಕೆ ಬೀಳದಂತೆ ಅಡ್ಡ ಹಲಗೆ ಕಟ್ಟುವುದು, ಮರ ಹತ್ತಿ ಇಳಿಯುವುದಕ್ಕೆ ಅನುಕೂಲವಾಗುವಂತೆ ಮರದ ಕೊಂಬೆಗಳನ್ನು ಕತ್ತರಿಸುವುದು ಮಾಡಿದೆವು. ಆ ಉತ್ಸಾಹ ನಮ್ಮಿಬ್ಬರಿಗೆ ಮೀಸಲಾದದ್ದಲ್ಲ. ನಮ್ಮ ಕಡೆ ಶಿಕಾರಿಗೆ ಹೋಗುವವರಿಗೆಲ್ಲ ಇರುವ ಉತ್ಸಾಹವದು. ಬೈಗಿನ ತನಕ ಕಾಯುವುದು ನಮಗೆ ದೊಡ್ಡ ಶಿಕ್ಷೆಯಾಗಿ ಹೋಯಿತು. ಕೊನೆಗೂ ಬೈಗಾಗಿ ನಾವು ಶಿಕಾರಿ ಹೊರಡುವ ಸಮಯ ಬಂದೇಬಿಟ್ಟಿತು. ಇಬ್ಬರೂ ಊಟ ಮಾಡಿ ಕೋವಿಗೆ ಈಡು ತುಂಬಿದೆವು. ನಾನು ತೋಟಾ ಕೋವಿಯನ್ನು ತಮ್ಮಯ್ಯ ಕೇಪಿನ ಕೋವಿಯನ್ನು ಹಿಡಿದು ಚಳಿಗೆ ಹೊದ್ದುಕೊಳ್ಳಲು ಕಂಬಳಿಯನ್ನೂ ತೆಗೆದುಕೊಂಡು ಹೊರಟೆವು. ಇನ್ನೂ ಸಂಪೂರ್ಣ ಕತ್ತಲೆಯಾಗಿರಲಿಲ್ಲ. ಮಳೆಗಾಲವಾದ್ದರಿಂದ ಕತ್ತಲೆಯಾದಂತೆ ತೋರುತ್ತಿತ್ತು. ಮಳೆಗಾಲದಲ್ಲಿ ಮಲೆನಾಡಿನಲ್ಲಿ ಎಷ್ಟೋ

ದಿನಗಳು ಸೂರ್ಯನ ದರ್ಶನವೇ ಇರುವುದಿಲ್ಲ. ಹಗಲು ಹೊತ್ತಿನಲ್ಲಿ ಕಾಣದ ಸೂರ್ಯ ಬೈಗಿನ ಹೊತ್ತಿನಲ್ಲಿ ಎಲ್ಲಿ ಕಾಣುತ್ತಾನೆ ?

ಮನೆಯಿಂದ ಹೊರಡುವಾಗ ಅವ್ವ ಜಗುಲಿಗೆ ಬಂದು "ಹುಸಾರ್ ಮಕ್ಕಳರಾ, ದೀವಳಗಿ ಹಬ್ಬ ಹತ್ರ ಬಂತು. ದೀವಳಿಗೆ ಹಬ್ಬ ಅಳವರನ್ನ ಅಳಸತದೆ, ನಗವರನ್ನ ನಗಸ್ತದೆ. ನಿಮ್ಮ ಅಪಯ್ ಕೂಡ ದೀವಳಿಗೆ ಹಬ್ಬ ಹತ್ರ ಬಂತು ಅಂದಾಗ ನಿಮ್ಮ ಚಿಗಪ್ಪನ್ನ ಹಂದಿ ಸಿಕಾರಿ ಮಾಡತೀನಿ ಅಂತ ಕರಕಂಡು ಹೋಗಿ ಆತುರದಲ್ಲಿ ಹಂದಿ ಹೊಡಿತೀನಿ ಅಂತ ನಿಮ್ಮ ಚಿಗಪ್ಪನ್ನೇ ಹೊಡದಾಕಿದ್ದರು. ಅದಕೆ ಕಿವಿಮಾತು ಹೇಳದ" ಎಂದಳು.

"ಆಯಿತು ಅವ್ವ, ನೀನು ಹೇಳಿದ್ದು ಒಳ್ಳೇದಾಯಿತು" ಎಂದೆ.

ಅವ್ವ ಹೇಳಿದ ಎಚ್ಚರಿಕೆ ಮಾತುಗಳನ್ನು ಕೇಳಿಸಿಕೊಳ್ಳುತ್ತ ನಾವು ಗದ್ದೆಯ ಕಡೆಗೆ ನಡೆದೆವು.

– ೩ –

ಶಿಕಾರಿಗೆ ಕೂರಲು ನಾವು ಮರ ಹತ್ತಿ ಕುಳಿತೆವು. ನಮ್ಮಿಬ್ಬರಿಗೂ ಬೀಡಿ ಸೇದುವ ಚಟವಿದ್ದರೂ ಬೀಡಿ ಹಚ್ಚಲಿಲ್ಲ. ಶಿಕಾರಿಯಲ್ಲಿ ಬೀಡಿ–ಸಿಗರೇಟು ಸೇದುವುದು ನಿಶಿದ್ಧ. ಪ್ರಾಣಿಗಳು ಬೀಡಿ ಸಿಗರೇಟಿನ ವಾಸನೆಗೆ ಶಿಕಾರಿಗೆ ಕುಳಿತವರ ಕಡೆಗೆ ಸುಳಿಯುವುದಿಲ್ಲ ವೆಂದು ಅಂತಹ ಕಟ್ಟುಪಾಡು ಇತ್ತು. ಕೆಲವರು ತಿಳಿಯದೆಯೋ, ಶಿಕಾರಿಗೆ ಕೂತು ಕೂತು ಬೇಸರವಾಗಿಯೋ ಬೀಡಿ ಹಚ್ಚಿ ಬಿಲ್ಲಿಗೆ ಕುಳಿತ ಬೇರೆಯವರಿಂದ ಹೀನಾಮಾನಾ ಬೈಸಿಕೊಳ್ಳುವುದುಂಟು. ಹಾಗೆ ಬೈಸಿಕೊಳ್ಳುವವರಿಗೂ ಬೈಯುವವರಿಗೂ ಹಿರಿತನ ಕಿರಿತನದ ಭೇದಭಾವವಿಲ್ಲ. ನನಗೂ ತಮ್ಮಯ್ಯನಿಗೂ ಬೀಡಿ ಸೇದುವ ಆಸೆಯಾಯಿ ತಾದರೂ ಬೀಡಿ ಹೊರತೆಗೆಯಲು ಭಯವಾಯಿತು. ಕತ್ತಲೆಯನ್ನು ನೋಡುತ್ತ ಇಬ್ಬರೂ ಕಂಬಳಿಯನ್ನು ಹೊದ್ದುಕೊಂಡು ಕುಳಿತೆವು. ಗುಂಡು ತುಂಬಿದ ಬಂದೂಕು ಗಳನ್ನು ಮುಂದಕ್ಕೆ ಮುಖ ಮಾಡಿ ಮಲಗಿಸಿದ್ದೆವು. ಶಿಕಾರಿಯಲ್ಲಿ ಗಟ್ಟಿಯಾಗಿ ಮಾತ ನಾಡುವಂತೆಯೂ ಇಲ್ಲ. ನೆಲದ ಮೇಲೆ ಬಿಲ್ಲಿಗೆ ಕೂರುವಾಗಲಂತೂ ಮಾತಿಗೆ ಅವಕಾಶವೆ ಇಲ್ಲ. ಪ್ರಾಣಿ ಒಂದು ಬಿಲ್ಲಿನಿಂದ ತಪ್ಪಿಸಿಕೊಂಡು ಮತ್ತೊಂದು ಬಿಲ್ಲಿಗೆ ಹೋಗುವಾಗ ಮಾತ್ರ ಮತ್ತೊಂದು ಬಿಲ್ಲಿನವನಿಗೆ ಎಚ್ಚರಿಕೆ ಕೊಡಲು ಆತನ ಹೆಸರು ಹೇಳಿ "ನಿನ್ನ ಕಡೆಗೆ ಬಂತು ಬಂತು ಹೊಡಿ ಹೊಡಿ" ಎಂದು ಹೇಳುವುದುಂಟು. ಇಲ್ಲಿ ನಾವಿಬ್ಬರು ಒಟ್ಟಿಗೆ ಕೂತದ್ದರಿಂದ ಹಾಗೆಲ್ಲ ನಡೆದುಕೊಳ್ಳಲು ಅವಕಾಶವಿರಲಿಲ್ಲ. ಬಹಳ ಹೊತ್ತು ಸುತ್ತಮುತ್ತ ನೋಡುತ್ತ ಕೂತೆವು. ಕಾಡು, ಗದ್ದೆ ಬಯಲು ಕತ್ತಲೆಯಲ್ಲಿ ಕರಗಿ

ಹೋದವು. ಕಣ್ಣುಗಳು ಕ್ರಮೇಣ ಕತ್ತಲೆಗೆ ಹೊಂದಿಕೊಂಡು ಸ್ವಲ್ಪಮಟ್ಟಿಗೆ ಮರ ಗಿಡಗಳನ್ನು ಗುರುತಿಸುವಂತಾದವು.

ಶಿಕಾರಿ ಮಾಡಲಿಕ್ಕೆ ಹೋಗುವುದು ಬಹಳ ಆಸಕ್ತಿಯ ವಿಷಯವಾದರೂ ಕಾಯುತ್ತ ಕೂರುವುದು ಬಹಳ ಬೇಸರದ ಕೆಲಸ. ಕೆಲವು ಸಾರಿ ಬೆಳಗಿನ ತನಕ ಕಾಯುತ್ತ ಕೂತರೂ ಒಂದು ಪ್ರಾಣಿಯೂ ಕಣ್ಣಿಗೆ ಬೀಳುವುದಿಲ್ಲ. ಕೆಲವೊಮ್ಮೆ ದೊಡ್ಡ ಪ್ರಾಣಿಗೆ ಈಡು ತುಂಬಿಕೊಂಡಿದ್ದರೆ ಮೊಲ, ಕಬ್ಬೆಕ್ಕು, ಬರ್ಕ ಮುಂತಾದ ಚಿಕ್ಕ ಪ್ರಾಣಿಗಳು ಕಣ್ಣಿಗೆ ಬೀಳುತ್ತವೆ. ಇನ್ನು ಕೆಲವು ಸಾರಿ ಚಿಕ್ಕಪ್ರಾಣಿಗೆ ಈಡು ಹಾಕಿಕೊಂಡು ಕುಳಿತರೆ ಕಡವೆ, ದೊಡ್ಡು, ಹುಲಿ, ಕಾಡುಹಂದಿಯಂತಹ ದೊಡ್ಡ ಪ್ರಾಣಿಗಳು ಕಣ್ಣಿಗೆ ಬೀಳುತ್ತವೆ. ಬಹಳ ಹೊತ್ತು ಇಬ್ಬರೂ ಮೌನವಾಗಿ ಕೂತಿದ್ದಾಗ ತಮ್ಮಯ್ಯ ನನಗೆ ಮುತ್ತು ಕೊಡುವಂತೆ ಅವನ ಬಾಯನ್ನು ನನ್ನ ಕಿವಿಯ ಹತ್ತಿರ ತಂದು “ಅಣ್ಣಯ್ ಹಳ್ಳದ ಕಡೆ ಯಾವುದೋ ಪ್ರಾಣಿ ಬತ್ತಿರಬೇಕು. ಚೊಳಚೊಳ ಸದ್ದಾಗತದ” ಎಂದ. ನಾನು ಅವನಿಗೆ ಸುಮ್ಮನಿರು ಎನ್ನುವಂತೆ ಕೈಸನ್ನೆ ಮಾಡಿದೆ. ಅವನು ಸುಮ್ಮನಾದ. ನನ್ನ ಕಿವಿ ಹಳ್ಳದ ಕಡೆಯ ಸದ್ದಿಗೆ ಹೋಯಿತು. ಹಳ್ಳದಲ್ಲಿ ಯಾವುದೋ ಪ್ರಾಣಿ ನಡೆದುಕೊಂಡು ಬರುತ್ತಿರುವ ಸದ್ದು ಅಸ್ಪಷ್ಟವಾಗಿ ಕೇಳುತ್ತಿತ್ತು. ಹಳ್ಳಕ್ಕೆ ಗುಡ್ಡದಿಂದ ಹರಿದು ಬರುವ ನೀರು ದುಮ್ಮಿಕ್ಕಿ ಜೋರಾಗಿ ಸದ್ದು ಮಾಡುತ್ತಿದ್ದುದರಿಂದ ಪ್ರಾಣಿ ನಡೆದು ಬರುವ ಸದ್ದು ಅಷ್ಟಾಗಿ ಕೇಳಿಸುತ್ತಿರಲಿಲ್ಲ. ಹಳ್ಳ ನಾವು ಕುಳಿತ ಜಾಗದಿಂದ ಸ್ವಲ್ಪ ದೂರವೇ ಇತ್ತು. ಬಹಳ ಹೊತ್ತು ಆ ಸದ್ದಿನ ಕಡೆಗೆ ಕಿವಿಗೊಟ್ಟೆವು. ಸದ್ದು ಮಾಡಿದ ಪ್ರಾಣಿ ಮೇಲೆ ಗದ್ದೆಗೆ ಹತ್ತಲೇ ಇಲ್ಲ. ನನಗೆ ಕಣ್ಣೆಳೆದು ಬರುತ್ತಿತ್ತು. ತೇನೆ ಹಕ್ಕಿಯೊಂದು ಭಯವನ್ನು ಹುಟ್ಟಿಸುವಂತೆ ಒಂದು ದಿಕ್ಕಿನಿಂದ ಮತ್ತೊಂದು ದಿಕ್ಕಿಗೆ ಹಾರುತ್ತ ಕೂಗುವುದನ್ನು ಕಂಡೆ. ಹಳ್ಳದ ದಂಡೆಯಲ್ಲಿ ಕಿಕ್ಕಿರಿದು ಬೆಳೆದ ಮುಂಡುಗನ ಹಿಂಡಲಿನಲ್ಲಿ ಹುಂಟುಕೋಳಿ ಹಕ್ಕಿಗಳು ರಾತ್ರಿಯಾದಾಗಲಿಂದ ‘ಕ್ರಾವ್ ಕ್ರಾವ್’ ಎಂದು ಕೂಗುತ್ತಿದ್ದವು. ನಾನು ಚಿಕ್ಕವನಾಗಿದ್ದಾಗ ಈ ಹುಂಟುಕೋಳಿ ಹಕ್ಕಿಗಳನ್ನು ಚಾಟರ್ ಬಿಲ್ಲಿನಿಂದ ಹೊಡೆದು ಕೊಂದ ದಿನಗಳನ್ನು ಮನಸ್ಸಿನಲ್ಲಿ ಚಿತ್ರಿಸಿಕೊಂಡೆ. ಗದ್ದೆಯಲ್ಲಿ, ಹಳ್ಳದಲ್ಲಿ ಕಪ್ಪೆಗಳು ವಟಗುಟ್ಟುವುದು ನನ್ನ ಕಿವಿಯ ಮೇಲೆ ಬೀಳುತ್ತಿತ್ತು. ನಿದ್ದೆಗೆಟ್ಟು ಮೌನವಾಗಿ ಕುಳಿತಾಗ, ಬೇಸರದ ಸಮಯದಲ್ಲಿ ಇವೆಲ್ಲ ಮನಸ್ಸಿಗೆ ಆನಂದವನ್ನುಂಟು ಮಾಡಿತು.

ಬಹಳ ಹೊತ್ತಿನ ನಂತರ ಮೋಡಗಳು ಸರಿದು ಚಂದ್ರನ ಬೆಳಕು ಕಾಣಿಸಿತು. ಮತ್ತೆ ಚಂದ್ರನ ಮೇಲೆ ಮೋಡ ಬಂದು ಕತ್ತಲೆಯಾಗುವುದೇನೋ ಎಂದು ಕಾಡುಹಂದಿಗಳಿಗಾಗಿ ಸುತ್ತೆಲ್ಲ ಕಣ್ಣಾಡಿಸಿದೆ, ಗದ್ದೆಯಲ್ಲಿ ಹಂದಿಗಳ ಬದಲಿಗೆ ಮರಿಯಾನೆಗಳನ್ನು

ಶೂದ್ರ

ಹೋಲುವ ಕಪ್ಪು ಮೈಬಣ್ಣದ ನಾಲ್ಕಾರು ದೊಡ್ಡುಗಳು ಕಂಡವು. ಕತ್ತಲಲ್ಲಿ ಅವು ಬಂದದ್ದೇ ಕಾಣಲಿಲ್ಲ. ಹಳ್ಳದಲ್ಲಿ ಚೊಳಚೊಳ ಸದ್ದು ಮಾಡಿದವು ಅದೇ ಪ್ರಾಣಿಗಳು. ಗದ್ದೆಯ ಮೂಲೆಯಲ್ಲಿ ಭತ್ತದ ಪೈರು ತಿನ್ನತೊಡಗಿದ್ದವು. ಅದನ್ನು ನೋಡಿ ನನ್ನ ಹೊಟ್ಟೆಗೆ ಬೆಂಕಿ ಬಿದ್ದಿತು. ಹಂದಿ ಶಿಕಾರಿಯಾಗದಿದ್ದರೆ ಚಿಂತೆ ಇಲ್ಲ. ದೊಡ್ಡುಗಳನ್ನು ಓಡಿಸುವುದು ಮುಖ್ಯವಾಗಿದ್ದಿತು. ನನ್ನ ತಮ್ಮ ಎತ್ತಲೋ ನೋಡುತ್ತಿದ್ದ. ಅವನಿಗೆ ತಿವಿದು ಅತ್ತಕಡೆಗೆ ತೋರಿಸಿದೆ. ಅವನು ಕಂಗಾಲಾಗಿ ಈಗೇನು ಮಾಡುವುದು ಎಂದ. ಹಂದಿ ಶಿಕಾರಿಗಾಗಿ ನಾನು ಪೈರನ್ನು ನಾಶಮಾಡಿಕೊಳ್ಳಲು ಸಿದ್ಧನಿರಲಿಲ್ಲ. ಅವನಿಗೆ ಸುಮ್ಮನಿರಲು ಹೇಳಿ ಬಂದೂಕನ್ನೆತ್ತಿಕೊಂಡು ದೊಡ್ಡುಗಳು ಮೇಯುವ ಕಡೆಗೆ ಗುಂಡು ಹಾರಿಸಿಯೇಬಿಟ್ಟೆ. ದೊಡ್ಡುಗಳನ್ನು ಕೊಲ್ಲುವುದು ನನ್ನ ಉದ್ದೇಶವಾಗಿರಲಿಲ್ಲ. ಬೆದರು ಗುಂಡು ಹಾರಿಸಿ ಅವು ಮತ್ತೆ ಸದ್ಯಕ್ಕೆ ಗದ್ದೆಯ ಕಡೆ ಮುಖ ಹಾಕದಂತೆ ಮಾಡಬೇಕಾಗಿತ್ತು. ಕಾಡುಪ್ರಾಣಿಗಳೇ ಹಾಗೆ. ಒಮ್ಮೆ ಗುಂಡಿನ ಸದ್ದು ಕೇಳಿದ ಕಡೆ ಮತ್ತೆ ಸದ್ಯಕ್ಕೆ ಅತ್ತಕಡೆ ತಲೆ ಚಾಚುವುದಿಲ್ಲ. ಗುಂಡು 'ಚಟ್ಟಾಲ್' ಎಂದು ಸಿಡಿದು ನೀರವ ಮೌನವನ್ನು ಕಲಕಿತು. ದೂರದ ಕಾಡಿನಲ್ಲಿ ಮಾಲೆಮಾಲೆಯಾಗಿ ಪ್ರತಿಧ್ವನಿಸಿತು. ದೊಡ್ಡುಗಳು ದಡದಡ ಸದ್ದು ಮಾಡಿ ಗದ್ದೆಯಿಂದ ಹಳ್ಳಕ್ಕೆ ಹಾರಿ ಓಡಿದವು. ಯಾವುದಕ್ಕಾದರೂ ಏಟು ಬಿದ್ದಿತೊ ಏನೋ ತಿಳಿಯಲಿಲ್ಲ.

ಗುಂಡಿನ ಸದ್ದು ಕೇಳಿದ ಮೇಲೆ ಕಾಡುಹಂದಿಗಳಾಗಲಿ, ಮತ್ತೊಂದು ಪ್ರಾಣಿಯಾಗಲಿ ಗದ್ದೆಯ ಕಡೆಗೆ ಬರುವ ಸೂಚನೆ ಇರಲಿಲ್ಲ. ಇನ್ನು ಗದ್ದೆ ಕಾಯುವುದರಲ್ಲಿ, ಶಿಕಾರಿಗೆ ಕೂರುವುದರಲ್ಲಿ ಅರ್ಥವಿರಲಿಲ್ಲ. ಇಬ್ಬರು ಮಾತಾಡಿಕೊಂಡು ಮನೆಗೆ ಹೋಗುವುದೆಂದು ನಿಶ್ಚಯಿಸಿ ಮರದಿಂದ ಇಳಿದೆವು. ಆಗಲೇ ಮಧ್ಯರಾತ್ರಿ ಕಳೆದಿರಬಹುದು. ಎಷ್ಟೋ ಸಾರಿ ಹೀಗೆ ಶಿಕಾರಿಯಾಗದೆ ವಾಪಸು ಮನೆಗೆ ಹಿಂದಿರುಗುವ ಸಂದರ್ಭಗಳಿವೆ. ಕೆಲವು ಸಾರಿ ಕೈಯಲ್ಲಿ ಬಂದೂಕು ಇಲ್ಲದಾಗ ಪ್ರಾಣಿಗಳು ಕಣ್ಣಿಗೆ ಬೀಳುವುದುಂಟು.

ಇಬ್ಬರು ಕಂಬಳಿ ಹೊದ್ದುಕೊಂಡು ಹೆಗಲ ಮೇಲೆ ಬಂದೂಕು ಏರಿಸಿಕೊಂಡು ಗದ್ದೆಕೋಡಿಯಲ್ಲಿ ಹೋಗುತ್ತಿದ್ದೆವು. ಚಳಿ ಮೈ ನಡುಗಿಸುತ್ತಿತ್ತು, ಹಲ್ಲು ಕಟಕಟಿಸುತ್ತಿತ್ತು. ನಮ್ಮ ಮನೆಗೂ ಗದ್ದೆ ಕೋಡಿಗೂ ಮಧ್ಯೆ ಒಂದು ಸಣ್ಣ ಕಾಡು. ಕಾಡು ದಾಟಿದ ಕೂಡಲೆ ಕೆಸರು ತುಂಬಿದ ಬಯಲು ಸಿಗುತ್ತದೆ. ಬಯಲಿಗೆ ಕಾಲಿಟ್ಟಾಗ ಮೂರು ನಾಲ್ಕು ಕರಿಯ ಕಲ್ಲುಗುಂಡುಗಳು ನಿಧಾನವಾಗಿ ಉರುಳಾಡುತ್ತಿರುವುದು ಕಂಡಿತು. ನಾನು ಗಕ್ಕನೆ ನಿಂತು ವಿಸ್ಮಯದಿಂದ ಆ ಕಲ್ಲುಗುಂಡುಗಳನ್ನು ನೋಡಿದೆ. ನನ್ನ ಬಂದೂಕಿನಲ್ಲಿ ಈಡು ಮುಗಿದುಹೋಗಿತ್ತು. ನಾನು ನಿಂತದು ನೋಡಿ ತಮ್ಮಯ್ಯ ಏನೋ ಎಂದು ಗೊಣಗಿದ. ನಾನು ಆತುರದಿಂದ ನನ್ನ ಬಂದೂಕನ್ನು ಕೆಳಗಿಟ್ಟು 'ಹಂದಿ

ಹಂದಿ" ಎಂದು ಪಿಸುಗುಟ್ಟಿ ತಮ್ಮಯ್ಯನ ಕೈಯಿಂದ ಬಂದೂಕು ಕಿತ್ತುಕೊಂಡೆ. ನಮ್ಮ ಪಿಸು ಮಾತುಗಳು ಕಾಡುಹಂದಿಗಳಿಗೆ ಕೇಳಿಸಿರಬೇಕು. ಇಲ್ಲವೆ ಅವು ನಮ್ಮನ್ನು ನೋಡಿರಬೇಕು. ಕಾಡು ಪ್ರಾಣಿಗಳೆಲ್ಲ ಬಹು ಸೂಕ್ಷ್ಮ. ಹಾಗಿಲ್ಲದಿದ್ದರೆ ಒಂದ ನ್ನೊಂದು ಕೊಂದು ತಿನ್ನುವ ಕಾಡಿನ ಜಾಯಮಾನದಲ್ಲಿ ಬದುಕುಳಿಯುವುದಾದರು ಹೇಗೆ ?

ನಾನು ಬಂದೂಕವನ್ನೆತ್ತಿಕೊಂಡು ಗುರಿ ನೋಡುವುದರೊಳಗೆ ಹಂದಿಗಳು ಓಡ ಹತ್ತಿದವು. ಗದ್ದೆ ಬಯಲಿನ ಕಡೆ ಗುಂಡಿನ ಸದ್ದು ಕೇಳಿ ಅತ್ತ ಸುಳಿಯದೆ ಇತ್ತ ಕಡೆಗೆ ಕೆಸರು ಬಯಲನ್ನು ಉತ್ತುವುವರಲ್ಲಿದ್ದವು. ಈ ದಿನ ಅತ್ತಕಡೆಗೆ ಹೋಗುವ ಯೋಜನೆ ಅವಕ್ಕಿರಲಿಲ್ಲ. ಹಂದಿಗಳು ಓಡಿಹೋಗುವುದನ್ನು ನೋಡಿ ಗುರಿನೋಡಿ ಈಡು ಹಾರಿಸಲು ಸಮಯವಿರಲಿಲ್ಲ. ಅಂದಾಜಿನ ಮೇಲೆ ಅವು ಓಡುವ ದಿಕ್ಕನ್ನು ನೋಡಿ ಈಡು ಹಾರಿಸಿಯೆ ಬಿಟ್ಟೆ. ಮತ್ತೊಮ್ಮೆ ಈಡಿನ ಸದ್ದು ಪ್ರತಿಧ್ವನಿಸಿತು. ಹಂದಿಗಳಿಗೆ ಈಡು ತಗುಲಿತೊ ಇಲ್ಲವೊ ತಿಳಿಯಲಿಲ್ಲ. ಈಡು ತಗಲಿದ್ದರೆ ರಕ್ತದ ಹನಿಗಳು ನೆಲದ ಮೇಲೆ ಬಿದ್ದಿರುತ್ತವೆ, ಆದರೆ ಅದನ್ನು ನೋಡಲು ಕತ್ತಲೆ ಎಲ್ಲೆಲ್ಲೂ ತುಂಬಿಕೊಂಡಿತ್ತು. ಅಲ್ಲದೆ ಕತ್ತಲೆಯಲ್ಲಿ ಹಂದಿಗಳು ಓಡಿದ ಕಡೆಗೆ ಹೋಗುವುದು ಅಪಾಯವಿತ್ತು. ಈಡು ತಗುಲಿದ ಹಂದಿ ಸಾಯದೆ ಬದುಕಿದ್ದರೆ ಅದು ತುಂಬಾ ಅಪಾಯಕಾರಿ. ಉಳಿದ ದಿನಗಳಲ್ಲಿ ಮನುಷ್ಯನನ್ನು ಕಂಡಾಗ ಕನ್ನೋಡುವ ಪ್ರಾಣಿ ಗುಂಡಿನ ಗಾಯವಾಗಿದ್ದರೆ ಮನುಷ್ಯನನ್ನು ಕಂಡಾಗ ಸಿಟ್ಟಿನಿಂದ ಕೋರೆಯಿಂದ ತಿವಿಯಲು ಬೆರಸಿಕೊಂಡು ಬರುವುದು. ಇದೆಲ್ಲ ತಿಳಿದಿದ್ದ ನಾವು ಕತ್ತಲೆಯಲ್ಲಿ ಹಂದಿ ಸತ್ತಿದೆಯೊ ಇಲ್ಲವೋ ನೋಡಲು ಹೋಗಲಿಲ್ಲ. ಮನೆಗೆ ಹೋಗಿ ಮಲಗಿದೆವು.

ನಾವು ರಾತ್ರಿ ಹಾರಿಸಿದ ಈಡಿನ ಸದ್ದು ನಮ್ಮ ಹಳ್ಳಿಯ ಎಲ್ಲ ದಾಯಾದಿ ಮನೆಗಳಿಗೂ ಕೇಳಿಸಿತ್ತು. ನನ್ನ ವಯಸ್ಸಿನವರೂ ನನಗಿಂತ ಹಿರಿಯರು ಬೆಳಕು ಹರಿದ ಕೂಡಲೇ "ಏನೋ ರಾತ್ರಿ ಈಡಿನ ಸದ್ದು ಕೇಳತಲ್ಲ" ಎಂದು ಬಂದರು. ಬೆಳಗಾದ ಕೂಡಲೆ ಹಂದಿ ಸತ್ತಿದ್ದರೆ ಅದನ್ನು ಹುಡುಕಿ ಹಸುಗೆ ಮಾಡಲು ಜನ ಸೇರಿಸುವ ಆಲೋಚನೆ ನಮಗಿತ್ತು. ಅವರನ್ನೆಲ್ಲ ಕೂಡಿಸಿಕೊಂಡು ನಾನು ತಮ್ಮಯ್ಯ ಮತ್ತೆ ಕೋವಿಗೆ ಈಡು ತುಂಬಿಕೊಂಡು ಹೋದೆವು. ಯಥಾಪ್ರಕಾರ ನಮ್ಮವ್ವ ಹೊರಗೆ ಬಂದು "ಹುಸಾರು ಕಣರೋ ಹಬ್ಬ ಹತ್ರ ಬಂತು. ಕೆಟ್ಟ ಹಬ್ಬ. ಅಳವರನ್ನ ಅಳಸತದೆ ನಗವರನ್ನ ನಗಸತದೆ" ಎಂದು ಎಚ್ಚರಿಕೆಯ ಮಾತನ್ನಾಡಿದಳು.

ನಾವು ಹಂದಿ ಸತ್ತಿರಬಹುದೆಂಬ ಖಾತ್ರಿಯಿಂದ ಹಂದಿ ಹಸುಗೆ ಮಾಡಲು ಸಕಲ ತಯಾರಿ ಮಾಡಿಕೊಂಡು ಹೋದೆವು. ನಮ್ಮೊಂದಿಗೆ ಸತ್ತ ಹಂದಿ ಹುಡುಕಲು ನನ್ನ ದಾಯಾದಿಗಳು ಕೆಲಸದವರು ಎಂದು ಎಂಟು ಹತ್ತು ಜನಗಳಿದ್ದರು. ಹಂದಿ ಹುಡುಕಲು ಬಹಳ ದೂರ ಹೋಗಬೇಕಾದದ್ದಿರಲಿಲ್ಲ. ಮನೆ ಮುಂದಿನ ಕಾಡಿನಲ್ಲಿ ಅದು ಸತ್ತಿರಬಹುದೆಂದು ನಾವು ಊಹಿಸಿದ್ದೆವು. ಏಕೆಂದರೆ ಭಾರಿ ಗಾಯವಾದ ಹಂದಿ ಬಹಳ ದೂರ ಹೋಗಿ ಸಾಯುವ ಸಾಧ್ಯತೆ ಇರಲಿಲ್ಲ. ಮನೆಮುಂದಿನ ಕೆಸರು ಜಡ್ಡಿನಲ್ಲಿ ಹಂದಿಗಳ ಹೆಜ್ಜೆಗಳನ್ನು ನೋಡುತ್ತಾ ಹೋಗುತ್ತಿರುವಾಗ ಕೆಲಸದವನೊಬ್ಬ "ಅಯ್ಯಾ ಇಲ್ಲಿ ನೋಡಿ ರಕ್ತದ ಹುಂಡು" ಎಂದ. ನಾವು ಕುತೂಹಲದಿಂದ ರಕ್ತದ ಹುಂಡುಗಳನ್ನು ನೋಡುತ್ತಾ ಹಿಂಬಾಲಿಸಿ ಹೋದೆವು. ನಮ್ಮಲ್ಲಿ ಹಿರಿಯರೊಬ್ಬರು "ಹುಸಾರ್ ಕಣರೊ. ಹಂದಿ ಸಾಯದೆ ಗಾಯ ಆಗಿದ್ದರೆ ಬರೆಸಿಕೊಂಡು ಬರತ್ತದ" ಎಂದರು. ನನ್ನ ತಮ್ಮ "ಅದು ಬೆರೆಸಿಕೊಂಡು ಬಂದರೆ ಕೊಬ್ಬು ಕೆಡಗತೀನಿ" ಎಂದು ಉತ್ತರ ಕುಮಾರನ ಪೌರುಷ ತೋರಿದ. ನಾನು ಮೌನವಾಗಿಯೆ ಎಚ್ಚರಿಕೆಯಿಂದ ಸುತ್ತೆಲ್ಲ ಕಣ್ಣಾಡಿಸುತ್ತ ಹೋಗುತ್ತಿದ್ದೆ. ರಕ್ತದ ಕಲೆಗಳನ್ನು ಹಿಂಬಾಲಿಸುತ್ತ ನಾವು ಕಾಡಿನಲ್ಲಿ ದಿಕ್ಕಾಪಾಲಾಗಿ ಹರಿದು ಹಂಚಿ ಹೋದೆವು. ನಮ್ಮೊಂದಿಗೆ ಬಂದವರೆಲ್ಲ ಹಂದಿ ಬದುಕಿದ್ದರೆ ಅದನ್ನು ಪೊದೆಯೊಳಗಿನಿಂದ ಹೊರಗೆ ಹೊರಡಿಸಲು ಹಂದಿಗೆ ದಿಗಿಲ್ ಹುಟ್ಟಿಸಲು ಗಲಾಟೆ ಗದ್ದಲ ಮಾಡುತ್ತಿದ್ದರು. ಅವರೆಲ್ಲ ದೂರದೂರದಲ್ಲಿದ್ದರು. ನನ್ನ ತಮ್ಮನೂ ದೂರದಲ್ಲೆಲ್ಲೋ ಇದ್ದ. ಅವನ ಧ್ವನಿಯೂ ನನಗೆ ಕೇಳಿಸುತ್ತಿತ್ತು.

ಇದ್ದಕ್ಕಿದ್ದಂತೆ ಯಾರೊ ಒಬ್ಬ ಕೆಲಸದವನು "ವಡೇರೆ ಹಂದಿ ಇಲ್ಲಿ ಮಲಗಿದೆ. ನಿಮ್ಮ ಕಡೆಗೆ ಬುತು ಬುತು" ಎಂದು ಕೂಗಿದ. ನಿಮ್ಮ ಕಡೆಗೆ ಎಂದರೆ ನಾನು ನನ್ನ ಕಡೆಗೆ ಎಂದು ತಿಳಿದು ಒಂದು ಮರದ ಮರೆಯಲ್ಲಿ ನಿಂತು ಹಂದಿಯನ್ನು ಹೊಡೆಯಲು ಸಜ್ಜಾಗಿ ನಿಂತೆ, ಏಕೋ ಭಯವಾಗುತ್ತಿತ್ತು. ಕೆಲಸದವರು, ನನ್ನ ಸಂಬಂಧಿಕ ಹುಡುಗರು "ನಿನ್ನ ಕಡಿಗೆ ಬುತು" ಎಂದು ಒಬ್ಬನೆಂದರೆ ಮತ್ತೊಬ್ಬ "ನಿನ್ನ ಕಡಿಗೆ ಬುತು" ಎಂದು ಹೇಳುತ್ತಿದ್ದ. ಒಟ್ಟು ಕಾಡಿನಲ್ಲಿ ಗಲಾಟೆಯೋ ಗಲಾಟೆ. ನಿಂತಲ್ಲಿಂದ ಮುಂದಕ್ಕೆ ಹೋಗಲಾರದೆ ನನ್ನ ಕಡೆ ಹಂದಿ ಬರುವುದನ್ನೇ ಕಾಯುತ್ತಾ ನಿಂತೆ. ಕೊನೆಗೊಮ್ಮೆ ಈಡು ಸಿಡಿದ ಸದ್ದು ಕೇಳಿಸಿತು. ಯಾರೋ ಒಬ್ಬ "ಅಯ್ಯಯ್ಯೋ ಹಂದಿ ಸಣ್ಣ ಗೌಡರನ್ನು ಬೆರೆಸಿಕೊಂಡು ಹೋಯಿತು" ಅಂದ. ತಮ್ಮಯ್ಯನೂ "ಅಯ್ಯಯ್ಯೋ ಸತ್ತನಲ್ಲರೋ ಅಣ್ಣಯ್ಯ ಓಡಿಬಾರೋ" ಎಂದು ಬೊಬ್ಬೆ ಹೊಡದ. ಏನೋ ಅಪಾಯವಾಗಿರಬಹುದೆಂದು ತಮ್ಮಯ್ಯನ ಕೂಗು ಕೇಳಿದ ಕಡೆಗೆ ಓಡಿದೆ. ಕಾಡಿನ ಮಧ್ಯೆ ಸಣ್ಣ ಬಯಲಿನಲ್ಲಿ ತಮ್ಮಯ್ಯ ಓಡುತ್ತಿದ್ದ. ಹಂದಿಯೊಂದು ತಮ್ಮಯ್ಯನನ್ನು ಬೆನ್ನಟ್ಟಿ

ಹೋಗುತ್ತಿತ್ತು. ಹಂದಿ ಭರ್ಜರಿಯಾಗಿದ್ದು ಎಂಟುಹತ್ತು ಆಳಿಗಿತ್ತು. ನಿನ್ನೆರಾತ್ರಿ ನಾನು ಹೊಡೆದ ಗುಂಡು ತಗುಲಿ ಅದಕ್ಕೆ ಗಾಯವಾಗಿದ್ದಿರಬಹುದು. ಹಂದಿ ಬೆನ್ನಟ್ಟಿ ಬಂದಾಗ ಅಡ್ಡಾದಿಡ್ಡಿಯಾಗಿ ಓಡಿ ತಪ್ಪಿಸಿಕೊಳ್ಳಬೇಕಿತ್ತು. ಹಂದಿಗೆ ನೇರವಾಗಿ ಓಡುವುದು ಗೊತ್ತೇ ವಿನಃ ಅಡ್ಡಾದಿಡ್ಡಿಯಾಗಿ ಓಡುವುದು ತಿಳಿಯದು. ಇದೆಲ್ಲ ತಿಳಿದ ನನ್ನ ತಮ್ಮ ನೇರವಾಗಿಯೇ ಓಡುತ್ತಿದ್ದ. ಬಹುಶಃ ಭಯದಲ್ಲಿ ಅವನಿಗೆ ಅದೆಲ್ಲ ನೆನಪಿಗೆ ಬಂದಿಲ್ಲವೆಂದು ತೋರುತ್ತದೆ. "ವಾರೆಕ್ವಾರೆಯಾಗಿ ಓಡೋ. ನೆಟ್ಟಗೆ ಓಡಬ್ಯಾಡ" ಎಂದು ಕೂಗುತ್ತ ಅವನ ಕಡೆಗೆ ನಾನೂ ಓಡಿದೆ. ನನ್ನ ಮಾತು ಕೇಳಿಸಿತೋ ಇಲ್ಲವೋ? ಹಂದಿ ಅವನನ್ನು ಸಮೀಪಿಸಿ ಹಿಂಗಾಲನ್ನು ಕೋರೆಯಿಂದ ತಿವಿಯತೊಡಗಿತು. ಅವನು ಜಾರಿ ಕೆಳಕ್ಕೆ ಬಿದ್ದುಬಿಟ್ಟ. ಹಂದಿಗೆ ಅವನನ್ನು ತಿವಿಯಲು ಅನುಕೂಲವಾಯಿತು. ಅವನ ತೊಡೆ ಹೊಟ್ಟೆ ಎಲ್ಲೆಂದರಲ್ಲಿ ತಿವಿಯತೊಡಗಿತು. ಅವನು "ಅಯ್ಯೋ ಅಣ್ಣಯ್ಯ ಸತ್ತೆ" ಎಂದು ಬೊಬ್ಬೆ ಹೊಡೆಯುತ್ತಿದ್ದ. ನನಗೆ ಅವನ ಗೋಳನ್ನು ನೋಡಲಿಕ್ಕಾಗಲಿಲ್ಲ. ಹಂದಿಯಿಂದ ಅವನನ್ನು ಬಿಡಿಸಿಕೊಳ್ಳುವುದೂ ಕಷ್ಟವಾಗಿತ್ತು. ಹಂದಿಯ ಹತ್ತಿರ ನಾನು ಹೋದರೆ ಅದು ಅವನನ್ನು ಬಿಟ್ಟು ನನ್ನ ಕಡೆಗೆ ಬರುವ ಸಾಧ್ಯತೆ ಇತ್ತು. ನನ್ನ ಕೈಯಲ್ಲಿ ಬಂದೂಕು ಇದ್ದುದರಿಂದ ಹಂದಿಯನ್ನು ಎದುರಿಸಬಹುದೆಂದು ಹಂದಿಗೆ ಎದುರಾಗಿ ಹೋದೆ. ಹಂದಿಗೆ ನನ್ನ ಕಡೆ ಲಕ್ಷ್ಯವಿರಲಿಲ್ಲ. ತಮ್ಮಯ್ಯನನ್ನು ಅಡ್ಡಾದಿಡ್ಡಿಯಾಗಿ ಕಚ್ಚಿ ತಿವಿಯುತ್ತಲಿತ್ತು. ನನಗೆ ಅದನ್ನು ನೋಡಲಾಗಲಿಲ್ಲ. ಕರುಳು ಕಿವುಚಿ ಬರುತ್ತಿತ್ತು. ಹಂದಿಯನ್ನು ಒಂದೇ ಏಟಿಗೆ ಸುಟ್ಟು ಬಿಡಬೇಕೆಂದು ಹಂದಿಯ ಕಡೆಗೆ ಆತುರದಲ್ಲಿ ಗುಂಡು ಹಾರಿಸಿದೆ. ಹಂದಿಗೆ ಗುಂಡು ತಗುಲಿತ್ತು. ಭಯದಿಂದ ಸ್ವಲ್ಪ ದೂರ ಓಡಿ ನೆಲಕ್ಕೊರಗಿತು. ನನ್ನ ತಮ್ಮ ಮಲಗಿದವನು ಮೇಲಕ್ಕೇಳಲಿಲ್ಲ. ಅವನ ಬೊಬ್ಬೆಯೂ ನಿಂತು ಹೋಗಿತ್ತು. ಹತ್ತಿರಕ್ಕೆ ಹೋಗಿ ನೋಡಿದೆ. ಅವನಿಗೂ ಗುಂಡು ತಗುಲಿತ್ತು. ಮುಖದಲ್ಲಿ, ಎದೆಯಲ್ಲಿ ಚರೆಗಳು ಹೊಕ್ಕು ರಕ್ತ ಉಕ್ಕಿ ಬರುತ್ತಿತ್ತು. ಅವನ ಬಿಟ್ಟ ಕಣ್ಣು ಬಿಟ್ಟಂತೆ ಇತ್ತು. ನನ್ನ ದಾಯಾದಿಗಳು ಕೆಲಸದವರು ಬಂದು ನಮ್ಮನ್ನು ಸೇರಿದರು. ಕೆಲವೇ ಹೊತ್ತಿನ ಹಿಂದೆ ನಮ್ಮಲ್ಲಿದ್ದ ಉತ್ಸಾಹ ಆತುರ ಉದ್ವೇಗ ನಾಮಾವಶೇಷವಾಗಿತ್ತು. ಕಾಡು ಹಂದಿಯನ್ನು ಹದ್ದು ನಾಯಿಗಳಿಗೆ ಬಿಟ್ಟು ತಮ್ಮನ ಹೆಣವನ್ನೆತ್ತಿಕೊಂಡು ಮನೆಗೆ ಹೋದೆವು.

ಬೆಂಕಿ

ಹೊತ್ತಿ ಉರಿಯುತ್ತಿದೆ ಮನೆ
ಹಂಚು ಜಂತಿಗಳು ಚಟ್‌ಚಟಾರೆಂದು
ಚಾಚಿ ಆಗಸಕೆ ಕೆನ್ನಾಲಿಗೆ
ಧಗಧಗಿಸುತ್ತಿದೆ ಬೆಂಕಿ

ಕಲ್ಲು ಕಡಿದು ಮಣ್ಣು ಹದಗೊಳಿಸಿ
ಕಬ್ಬಿಣ ಕಾಸಿ ಎರೆದು ಗಾರೆ
ನಕ್ಷೆ ಬರೆದು ಕಟ್ಟಿದ ಕೈ ಲಕ್ಷ ಲಕ್ಷ
ಸುಣ್ಣ ಬಣ್ಣವ ಬಳಿದದ್ದು
ಶತಶತಮಾನಗಳ ಶ್ರಮದ ಫಲ
ಸಂಕಲ್ಪ ಶ್ರದ್ಧೆಗಳ ಸಿದ್ಧಿ
ಮಾನವೀಯತೆಯ ಸದ್ಬುದ್ಧಿ

ನೋಡಿ ಭಿತ್ತಿಯ ಮೇಲೆ ಕೆತ್ತಿದ ಚಿತ್ತಾರ
ರಾಮಾಯಣ ಮಹಾಭಾರತ ಎಲಿಯಟ್
ಮೋನಾಲೀಸಾ ಗುಮ್ಮಟ ನಟರಾಜ
ಫ್ರಾನ್ಸ್ ರಷ್ಯಾ ಚೈನಾ ಕ್ಯೂಬಾ
ಎಲ್ಲೆಂದರಲ್ಲಿ ಜನರು ಎತ್ತಿದ ಜಯದ ಧ್ವಜ
ಸಾಹಸದ ಸುಂದರ ಚಿತ್ರ
ಸುಟ್ಟು ಸುಡುಗಾಡುಗಳಾಗಲಿವೆ.

o o o

ಪಂಜಾಬವೇನು ಶ್ರೀಲಂಕೆಯೇನು
ರುಮಾನಿಯಾವೇನು ಕಾಶ್ಮೀರವೇನು
ಪೆಲೆಸ್ತಾನಿಯಾವೇನು ಪನಾಮವೇನು
ಹೊತ್ತಿಕೊಂಡಿದೆ ಬೆಂಕಿ
ಸುಡುಸುಡುತ್ತಿದೆ ಸೊಕ್ಕಿ
ಆಹುತಿಯಾಗುತ್ತಿದ್ದಾರೆ ಪಿಕಾಸೊ

ಆರ್.ವಿ. ಭಂಡಾರಿ, ಅರೇಅಂಗಡಿ, ಹೊನ್ನಾವರ (ಉ.ಕ.)

ತಾನಸೇನ ಗೆಲಿಲಿಯೊ ಅಶೋಕ
ಅಕಬರ ಕಬೀರ ಕ್ರಿಸ್ತ ಪೈಗಂಬರ
ಬುದ್ಧ ಹೃದಯಸಾರ

ಭತ್ತ ಬೇಯಿಸುತ್ತಾನೆ ಒಕ್ಕಲಿಗ
ಇಟ್ಟಿಗಿ ಸುಡುತ್ತಾನೆ ಕಾರ್ಮಿಕ
ಕಬ್ಬಿಣ ಕಾಸಿ ಬಡಿಯುತ್ತಾನೆ ಕಮ್ಮಾರ
ಹೇಳಿ ಪುರೋಹಿತರೆ ಮಠಾಧಿಪತಿಗಳೆ
ಬಿಶಪ್ಪರೆ ಮುಲ್ಲಾಗಳೆ
ಹೇಳಿ ತಕ್ಕಡಿಯವರೆ
ಕೊಳ್ಳಿ ಇಟ್ಟವರಾರು ?
ಪುಂಡು ಪೋಕರಿ ಪುಢಾರಿ ರಾಜಕಾರಣಿಗಳೆ
ಮೀನು ಹಿಡಿಯಲು ಹೋಗಿ ಕೆರೆಗೇ
ವಿಷ ಇಕ್ಕಿದವರೆ
ಹೇಳಿ ಬೆಂಕಿ ಇಟ್ಟವರಾರು ?

ಮತ್ತೆ ಮತ್ತೆ ಕಟ್ಟುತ್ತಲೇ ಹೋಗುವುದು
ಯುಗಯುಗದ ಕಥೆಯೆ
ಅಥವಾ ಸದಾ ಹೊರಬೇಕಾದ ವ್ಯಥೆಯೆ ?

ಇದೇನು ಗಾಳಿಮಾತಲ್ಲ
ಹಾದಿಬೀದಿಗಳಲ್ಲಿ ಹೊಲಗದ್ದೆಗಳಲ್ಲಿ
ಕಾರಖಾನೆಗಳಲ್ಲಿ ಜನ
ಆದೇಶಿಸುತ್ತಾರೆ ಮುಷ್ಟಿಬಿಗಿದು ;
ಹೇಳಿ ಇದಕ್ಕೆ ಉತ್ತರ
ಬೆಂಕಿ ಇಟ್ಟವರಾರು ?
ಮನುಷ್ಯತ್ವವ ಸುಟ್ಟವರಾರು ?

— ಆರ್.ವಿ. ಭಂಡಾರಿ

ಶಂಬೂಕ

ಶಂಬೂಕ !
ಯಾಕೋ ನಿನಗ ಶೋಕ ?
ನಮಗ ಗೊತ್ತ್ಯೋ –
ಧರ್ಮದ ಹೊಗಿಯೊಳಗ
ಉಸರ ಕಟ್ಟಿ
ಆದಿ ನೀನು ಮೂಕ
ಶೋಕ ಮಾಡತಿ ಯಾಕ
ಸುಮ–ಸುಮಕ ?
ನೀನು
ಒಬ್ಬನ್ಕ ಇಲ್ಲೋ ಮೂಕ
ರಾಮಚಂದ್ರ
ನಿನ್ನ ರುಂಡ ಕಡಕೊಂಡರ
ದ್ರೋಣಾಚಾರ್ಯರು ಏಕಲವ್ಯನ
ಹೆಬ್ಬೆಟ್ಟು ಕಡಕೊಂಡದ್ದೂ
ಇದ್ಕ ಲೋಕ.
ಇವತ್ತಿಗೂ ನಿನ್ನ ವಂಶದೊಳಗ
ಆ ರುಂಡ, ಆ ಹೆಬ್ಬೆಟ್ಟು
ಚಿಗಲಿಲ್ಲ ಯಾಕ ?
ನಾವು ಪಣಾ ತೊಟ್ಟೇವಿ ಬಿಡು–
ಆ ರುಂಡ ಚಿಗಸುದಕ
ಅದಕ್ಕ
ಏನೇನಾರ ತಿನಿಸಿ ನೋಡತೇವಿ
ಆಗಾಗ ಪರೀಕ್ಷೆ ಮಾಡುದಕ
ಒಂದ ಉದಾಹರಣೆ ಸಾಕ–
ನಾವು ಆ ರಾಮಚಂದ್ರನಂಗ
ಅಲ್ಲ ಅನ್ನುದಕ
ಇರೋ ಒಂದ ಹೆಂಡತೀ

ಪ್ರೊ॥ ಧರಣೇಂದ್ರ ಕುರಕುರಿ, ಹಿಂದಿ ವಿಭಾಗಾಧ್ಯಕ್ಷರು, ಎಂ.ಎಂ. ಕಲಾ ಮತ್ತು ವಿಜ್ಞಾನ ಕಾಲೇಜು
ಶಿರಸಿ-581 402

ವ್ಯಾಲs ಕಕಲಾತಿ
ಇರಲಿಲ್ಲ ಆ ರಾವುಂಗ
ಈ ದೇಶ ಇರೋದs
ನಮ್ಮ ಹೆಂಡರು, ಮಕ್ಕಳು
ಮತ್ತ ನವುಂಗ
ಅಂದ ವ್ಯಾಗ ಶಂಬೂಕ
ಯಾಕೋ ನಿನಗ ಶೋಕ ?
ಇದ್ದ ಬಿಡು ನೀ
ಸುಮಾಕ.

—ಧರಣೇಂದ್ರ ಕುರಕುರಿ

ತಾವೋ ಪದ್ಯಗಳು

ಅಖಂಡಿತ ಸಮುದ್ರ

ಅಖಂಡಿತ ಸಮುದ್ರ ತಾವೋ
ಅಲೆಗಳು ಎಲ್ಲೆಲ್ಲೂ
ಬೆಳಕು ಅಲ್ಲಿ ಹುಟ್ಟುವುದು
ಜೀವ ಅಲ್ಲಿ ಹುಟ್ಟುವುದು
ಹಡೆದು ತಾಯಾಗದು
ಉಣಿಸಿ ಹೊಚ್ಚಿ
ತಂದೆಯಾಗದು
ಏನೊಂದೂ ಆಗದೆ ಕಿರಿದು
ಎಲ್ಲವನೂ ಆಗಿಸಿ ಹಿರಿದು
ತಂದೆಯಲ್ಲ ತಾಯಿಯಲ್ಲ
ತಂದೆ ತಾಯಿಯು ಅಪ್ಪ
ತಾಯಿ ತಂದೆಯು ಅವ್ವ.

*

ಎಸ್. ಮಂಜುನಾಥ್, 15ನೇ ತಿರುವು, ಬಸವೇಶ್ವರ ಬಡಾವಣೆ, ಕೆ.ಆರ್. ನಗರ-571 602
ಮೈಸೂರು ಜಿಲ್ಲೆ

ಬೆರೆತ ಪರಿ

ಆಕಾಶವಾಗಿರುವುದು ತಿಳಿವೊಡನೆ ಬೆರೆತು
ಭೂಮಿಯಾಗಿರುವುದು ನೆಲೆಯೊಡನೆ ಬೆರೆತು
ಕಣಿವೆಯಾಗಿರುವುದು ಸಮೃದ್ಧಿಯೊಡನೆ ಬೆರೆತು
ಪ್ರಾಣಿಯಾಗಿರುವುದು ಉಸಿರೊಡನೆ ಬೆರೆತು

ಆಕಾಶ ಬಿರುಕು ಬಿಟ್ಟೀತು ಅದಿಲ್ಲದಿರಲು
ಭೂಮಿ ಕುಸಿದೀತು ಅದಿಲ್ಲದಿರಲು
ಕಣಿವೆ ಬರಿದಾದೀತು ಅದಿಲ್ಲದಿರಲು
ಪ್ರಾಣಿ ಬಿದ್ದು ಒರಗೀತು ಅದಿಲ್ಲದಿರಲು

*

ನಿಸರ್ಗ–ಸಂತ

ನಿಸರ್ಗ ಕಟುಕ
ಸೃಷ್ಟಿ ಬಲಿಪಶುವೆಂಬಂತೆ
ಸಂತ ಕ್ರೂರಿ
ಜನತೆ ಬಲಿಪಶುವೆಂಬಂತೆ

ಭೂಮಿಯಾಕಾಶ ಒಂದು ವಾದ್ಯದ ಉದರ
ಬರಿದು, ಆದರ ಸರಕಿಗೆ ಮಿಗಿಲಿಲ್ಲ
ಒತ್ತಿದಷ್ಟೂ ಹೊರತರುವುದು

ಮೌನಕ್ಕೆ ತೆರಳುವುವು ಎಲ್ಲ ಸ್ವರಗಳು
ಶೂನ್ಯಕ್ಕೇ ಅಂಟಿಕೊಳ್ಳುವುದು ಒಳಿತು

*

ಹಿಂದಣ ಹಿರಿಯರು

ಅಣುಸೂಕ್ಷ್ಮರು ಗೂಢಗಮನರು
ಹಿಂದಣ ಹಿರಿಯರು

ಮಂಜು ಮುಸುಕಿದ ತೊರೆ ಹಾಯುವಂತೆ ಅಳುಕಿನಿಂದ
ಸುತ್ತ ಎಲ್ಲ ಅಪಾಯವೆನುವಂತೆ ಎಚ್ಚರದಿಂದ

ಅತಿಥಿಯು ಬಿಗುಮಾನದಿಂದ
ಕರಗುತ್ತಿರುವ ಹಿಮುಗಡ್ಡೆಯು ತೆರ ಇದ್ದಿಲ್ಲವಾಗಿ
ಕೊರೆದಿರದ ಕೊರಡಿನಂತೆ ಏಕವಾಗಿ
ಕಣಿವೆಯುಂತೆ ತೆರೆದ ಮನದಲ್ಲಿ
ನೀರಂತೆ ಸರಳವಾಗಿ
ಇದ್ದರು ಅವರು

ಕದಡಿ ರಾಡಿಯಾದರೂ ನಿಂದು ತಿಳಿಯುಬಲ್ಲರು ಯಾರು ?
ತಿಳಿವಾಗಿ ನಿಂದರೂ ಕಂಪಿಸಿ ಹರಿಯುಬಲ್ಲರು ಯಾರು ?
ಎಂದಿಗೂ ತುಂಬದೇ
ಎಂದೆಂದೂ ಸುರಿದು
ಬರಿದಾಗದೇ
ತುಂತುಂಬಿಕೊಂಡರು.

*

ಈ ಚಿತ್ತ

ಬೇರುಗಳಾಗಿ ಒಡೆದ ಬೀಜವ ತೋರಲಾಗದು
ಟಿಸಿಲುಗಳಾಗಿ ಹರಡಿದ ಬೀಜವ ತೋರಲಾಗದು
ಅದ ಕೀಳಲಾಗದು
ಅದು ಕಳಚಿಬೀಳದು

ಬಿತ್ತು ನಿನ್ನಲ್ಲಿ ಈ ಬಿತ್ತ
ಸಹಜ ತೆನೆ ಒಡೆಯುವುದು
ಬಿತ್ತು ಕುಟುಂಬದಲ್ಲಿ ಈ ಬಿತ್ತ
ಸಂತುಷ್ಟ ತೆನೆ ಒಡೆಯುವುದು
ಬಿತ್ತು ಹಳ್ಳಿಯಲ್ಲಿ ಈ ಬಿತ್ತ
ಬಾಳುವೆ ತೆನೆ ಒಡೆಯುವುದು
ಬಿತ್ತು ನಾಡಲ್ಲಿ ಈ ಬಿತ್ತ
ನಿಸ್ಸೀಮ ತೆನೆ ಒಡೆಯುವುದು

ವ್ಯಕ್ತಿಯು ತೂಗಿ ನೋಡು ವ್ಯಕ್ತಿಯಿಂದಲೇ
ಕುಟುಂಬ ತೂಗಿ ನೋಡೇ ಕುಟುಂಬದಿಂದಲೇ
ಹಳ್ಳಿಯು ತೂಗಿ ನೋಡು ಹಳ್ಳಿಯಿಂದಲೇ
ನಾಡ ತೂಗಿ ನೋಡು ನಾಡಿನಿಂದಲೇ
ತೆನೆಯೊಳಗಿನ ನಿಜ ಈ ಬೀಜವೇ.

*

ದೇವರ ಸ್ವಂತ ಪಾತ್ರೆ

ಜಗತ್ತು ದೇವರ ಸ್ವಂತ ಪಾತ್ರೆ
ನೀವು ಅದನು ಮಾಡಲಾಗದು
ನೀವು ಅದನು ಗೆಲ್ಲಲಾಗದು
ತಿದ್ದುವರೆ ಕೆಡಿಸುವಿರಿ
ಹಿಡಿಯಲೆಳಸುವರೆ ಕಳೆದುಕೊಳ್ಳುವಿರಿ

ಮುಂಬರಿವುದೊಂದು ಹಿಂಬಾಲಿಸುವುದೊಂದು
ಬಿಸಿ ಉರಿವುದೊಂದು ತಣಿದು ಆರುವುದೊಂದು
ಒಡೆಯುವುದೊಂದು ಒಡೆದುಹೋಗುವುದೊಂದು
ನಯ ಕಠಿಣ ಬಲ ದುರ್ಬಲಗಳೊಂದೊಂದು

ಎನಲು ಜೋಗಿ ವರ್ಜಿಸುವನು
ಅತಿಯನ್ನು
ವಿಜೃಂಭಣೆಯನ್ನು
ಅಹಮನ್ನು.

*

ಮೂಲ : ಲಾವೋತ್ಸೆ
ಅನು : ಎಸ್. ಮಂಜುನಾಥ್

ನವ್ಯದ ಹಿಂದು ಮುಂದು

—ಎಚ್. ಪಟ್ಟಾಭಿರಾಮ ಸೋಮಯಾಜಿ

('ಸುವರ್ಣ ಪುತ್ಥಳಿ' ಮತ್ತು 'ಅಜ್ಜನ ಹೆಗಲ ಸುಕ್ಕುಗಳು'
ಮೂಲಕ ಒಂದು ಅವಸರದ ಹಿನ್ನೋಟ)

ಯು. ಆರ್. ಅನಂತಮೂರ್ತಿಯವರ ಎರಡನೆಯ ಕವನ ಸಂಕಲನ 'ಅಜ್ಜನ ಹೆಗಲ ಸುಕ್ಕುಗಳು'[1] ೧೯೮೯ರ ಕೊನೆಯಲ್ಲೂ, ಎಂ. ಗೋಪಾಲಕೃಷ್ಣ ಅಡಿಗರ ಹನ್ನೊಂದನೆಯ ಕವನ ಸಂಕಲನ 'ಸುವರ್ಣ ಪುತ್ಥಳಿ'[2] ೧೯೯೦ರ ಮೊದಲಲ್ಲೂ ಪ್ರಕಟವಾದವು. ಇಬ್ಬರೂ 'ನವ್ಯ ಸಾಹಿತ್ಯ' ಎಂದು ನಾವು ಈಗ ಹೆಸರಿಸುವ ಚಳುವಳಿಯಲ್ಲಿ ಅತ್ಯುತ್ಸಾಹದಿಂದ ಪಾಲ್ಗೊಂಡು ಅದನ್ನು ಆಗಗೊಳಿಸಿದ ಇಬ್ಬರು ಪ್ರಮುಖರು. ಆಧುನಿಕ ಸಂವೇದನೆಯು ಒಂದು ಪ್ರಮುಖ ಅಭಿವ್ಯಕ್ತಿಗೆ ತಮ್ಮ ಹೊಸ ರೀತಿಯ ಕಾವ್ಯದ ಮೂಲಕ ಪ್ರವೇಶವನ್ನು ಅಡಿಗರೂ, ಅಡಿಗರು ಒಡ್ಡಿದ ಸಂವೇದನಾ ಪ್ರಪಂಚಕ್ಕೆ ತಮ್ಮ ಪ್ರೌಢಭಾಷ್ಯಗಳ ಮೂಲಕ ಪ್ರವೇಶವನ್ನು ಅನಂತಮೂರ್ತಿಯವರೂ ಕನ್ನಡ ಸಾಂಸ್ಕೃತಿಕ ಲೋಕಕ್ಕೆ ಒದಗಿಸಿದವರು.

ಈ 'ಘಟನೆ'ಯ ಅರ್ಥಗೂಢಗಳು, ಪ್ರಮುಖ ಗ್ರಹೀತಗಳು ಮತ್ತು ಕನ್ನಡ ಸಾಂಸ್ಕೃತಿಕ ಲೋಕದ ಮೇಲೆ ಆ ಮೂಲಕ ಉಂಟಾಗಿರಬಹುದಾದ ಪರಿಣಾಮಗಳು ಏನು ಎಂಬವು ಗಮನಿಸಬೇಕಾದ ವಿಚಾರಗಳು. ನವ್ಯ ಸಾಹಿತ್ಯದ ಬಗ್ಗೆ ಲೋಕಾಭಿರಾಮವಾಗಿ ಆಡುವ ಹಗುರ ಮಾತುಗಳನ್ನು ಒತ್ತಟ್ಟಿಗಿಟ್ಟು ನಾವು ಒಪ್ಪಬಹುದಾದ ಮುಖ್ಯ ವಿಷಯಗಳೆಂದರೆ ಇವು:

೧. ನವ್ಯವೂ ಸೇರಿದಂತೆ ಸಾಹಿತ್ಯದ ಯಾವುದೇ ಚಳುವಳಿಯೂ ತನ್ನ ಕಾಲನ್ನು ಭದ್ರವಾಗಿ ಊರುವ ಪ್ರಯತ್ನದ ಅಂಗವಾಗಿಯೇ ತನ್ನ ಪರಂಪರೆಯ ಜೊತೆ ಒಂದು ಅರ್ಥಪೂರ್ಣ ಕಾದಾಟಕ್ಕೆ ಇಳಿಯುತ್ತದೆ; ಪ್ರಪಂಚವನ್ನು, ಬದುಕನ್ನು ಅರಿಯುವ ತನ್ನ ಕ್ರಮವು ಹೇಗೆ ಅನನ್ಯವೂ ವಿಶಿಷ್ಟವೂ ಯೋಗ್ಯವೂ ಆದದ್ದೆಂದು ಸಾಬೀತು ಪಡಿಸಲು ಪ್ರಯತ್ನಿಸುತ್ತಿದೆ. ಹಾಗೆ ತನ್ನನ್ನು ಒಂದು ವಿಶಿಷ್ಟಗ್ರಹಿಕೆಯ ಕ್ರಮ ಎಂದು ವ್ಯಾಖ್ಯಾನಿಸಿಕೊಳ್ಳುವ ನವ್ಯವು ಸಹಜವಾಗಿಯೇ ಗ್ರಹಿಕೆಯ ಹೊಸ ಮಾನದಂಡಗಳ ಮೇಲೆ ವಿಶೇಷ ಒತ್ತನ್ನು ಕೊಡುತ್ತದೆ.

೨. ನವ್ಯ ಸಾಹಿತ್ಯ, ಕನ್ನಡದ ಮಟ್ಟಿಗೆ ಹೇಳುವುದಾದರೆ, ನಮ್ಮ ಸಾಂಸ್ಕೃತಿಕ ಸಂದರ್ಭದಲ್ಲಿ ಆತ್ಯಂತಿಕ ಬದಲಾವಣೆಗಳಾಗಿವೆ ಎಂದು ಸಾಹಿತ್ಯಲೋಕಕ್ಕೂ ಸಾಹಿತ್ಯ

ಎಚ್. ಪಟ್ಟಾಭಿರಾಮ ಸೋಮಯಾಜಿ, ಉಪನ್ಯಾಸಕ, ಇಂಗ್ಲಿಷ್ ವಿಭಾಗ,
ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ–೫೭೪ ೧೯೯, ದ.ಕ.

ದಾಚೆಗಿನ ಲೋಕಕ್ಕೂ ಮೊಟ್ಟಮೊದಲು ಘೋಷಿಸಿದ ಸಾಹಿತ್ಯ. ಪರಂಪರೆ, ಸಂಪ್ರದಾಯಂಗಳಿಂದ ಬಂದ ಗ್ರಹಿಕೆಯು, ಬರೆಯುವ, ನಡವಳಿಕೆಯ ಕ್ರಮಗಳಾಗಲೀ ಹಳ್ಳಿಗಾಡು, ಬೇಸಾಯ, ಧರ್ಮ, ಆಧ್ಯಾತ್ಮ, ದೇಶದ ರಾಜಕೀಯ ವಿಧಿ, ನಮಗೆ ಹಸುರಾಗಿ ನೆನಪಿರುವ ನಮ್ಮ ಬಾಲ್ಯ ಮುಂತಾದ ಜೀವನ ಲೋಕಗಳಾಗಲೀ ಅಪ್ಪನ ಆಸ್ತಿಯ ಹಾಗೆ ನಿರಾಯಾಸವಾಗಿ, ಅಸಮಸ್ಯಾತ್ಮಕವಾಗಿ ನಮಗೆ ದಕ್ಕಬಹುದಾದ ಕ್ರಮದಲ್ಲಿ ಉಳಿದಿಲ್ಲ ಎಂಬ ಉದ್ವಿಗ್ನ ಗ್ರಹಿಕೆಯೇ ಆ ಘೋಷಣೆ. ಆದುದರಿಂದ ಆ ವಿವರಗಳನ್ನು ಈಗ ಹೇಗೆ ನಿಭಾಯಿಸಬೇಕು, ಅವು ಎಷ್ಟರ ಮಟ್ಟಿಗೆ ಮತ್ತು ಯಾವ ರೀತಿಯಲ್ಲಿ ನಮ್ಮ ಬದಲಾದ ಸಂದರ್ಭದಲ್ಲಿ ನಮ್ಮನ್ನು ನಿಯಂತ್ರಿಸಬಲ್ಲವು ಮತ್ತು ಹೇಗೆ ಪ್ರಸ್ತುತ ಎಂದು ಗ್ರಹಿಸುವುದೂ ಹಾಗೆ ಗ್ರಹಿಸಲಿಕ್ಕೇ ಒದಗಲಾದ ತನ್ನ ಗ್ರಹಿಕೆಯ ಕ್ರಮಗಳು ಹೇಗೆ ಅಗತ್ಯವೆಂದು ಹೇಳುವುದೂ ನವ್ಯ ಸಾಹಿತ್ಯದ ಪ್ರಮುಖ ಹೊರೆ.

೩. ನಮ್ಮ ಆಯಾ ಕಾಲದ ಮೂರ್ತ ವಿವರಗಳಲ್ಲಲ್ಲದೇ ನಾವು ಸರಳೀಕೃತವಾಗಿ ನಿರ್ದೇಶಿಸುವಂಥ ಯಾವುದೇ ಸಾರ್ವಕಾಲಿಕ ಸತ್ಯಗಳೂ ಇರುವುದಿಲ್ಲವಾದದ್ದರಿಂದ ನವ್ಯ ಸಾಹಿತ್ಯವು ತನ್ನ ಕಾಲವನ್ನು ಗ್ರಹಿಸುವ ಸಂಕೀರ್ಣವೂ ಜವಾಬ್ದಾರಿಯುತವೂ ಆದ ಪ್ರಯತ್ನಗಳನ್ನು ಮಾಡಿದ್ದು ಎಷ್ಟು ಸತ್ಯವೋ ಅಷ್ಟೇ ಸತ್ಯವಾಗಿರುವ ಅವಳಿ ಅಂಶವೆಂದರೆ ಅದು ಹಾಗೆ ಮಾಡುವ ಪ್ರಯತ್ನದಲ್ಲೇ ತನ್ನ ಕಾಲದಲ್ಲಿ ದೊರಕಿದ ಗ್ರಹಿಕೆಯ ಕ್ರಮಗಳ ಮೂಲಭೂತ ಗ್ರಹೀತಗಳ ಮೂಲಕವಷ್ಟೇ ಆ ಪ್ರಯತ್ನಗಳನ್ನು ಮಾಡಿತು ಎಂಬುದು. ಯಾವುದೇ ಕಾಲಖಂಡದ ಗ್ರಹಿಕೆಯ ಕ್ರಮಗಳ ರೂಪುರೇಷೆಗಳು ಆ ಕಾಲವು ಅತ್ಯಂತ ತುರ್ತಿನದೆಂದು ಪರಿಗ್ರಹಿಸುವ ವಿವರಗಳು ಮತ್ತು ಪ್ರಶ್ನೆಗಳ ಸಾಂಸ್ಕೃತಿಕ ಒತ್ತಡದಿಂದಾಗಿ ರೂಪಮೂಲವಾಗುವಂಥವುಗಳು. ಹಾಗಾಗಿ ಪಾಶ್ಚಾತ್ಯೀಕರಣ, ನಗರೀಕರಣ ಮತ್ತು ಕೈಗಾರಿಕೀಕರಣಗಳ ಸಂಘರ್ಷಗಳು ಮತ್ತು ಬಿಕ್ಕಟ್ಟುಗಳು ಉಂಟುಮಾಡಿದ ಆಧುನಿಕ ಪರಿಸ್ಥಿತಿಯೇ ನಮ್ಮ ಸರ್ವವ್ಯಾಪಿಯಾದ ಸಾಂಸ್ಕೃತಿಕ ಸಂದರ್ಭವೆಂಬ ನಂಬಿಕೆಯನ್ನು ನವ್ಯ ಸಾಹಿತ್ಯ ರೂಪಿಸಿಕೊಂಡಿತು. ಹಾಗೆ ರೂಪಿಸಿಕೊಳ್ಳುವಾಗ ಪಲ್ಲಟಕ್ಕೆ ಅಣಿಯಾಗುತ್ತಿದ್ದ ನಮ್ಮ ಸಾಂಸ್ಕೃತಿಕ ಸಂದರ್ಭದ ಬಗ್ಗೆ ನವೋದಯ ಸಾಹಿತ್ಯ ಎತ್ತಿದ ಹಾಗೂ ಎತ್ತದ ಪ್ರಶ್ನೆಗಳು ಸಾಲದು ಎಂಬ ಧೋರಣೆಯನ್ನದು ತಳೆಯಿತು. ಆದುದರಿಂದ ಅಡಿಗರ ಕಾವ್ಯ, ಪರಂಪರೆ, ಭೂತ, ಪುರಾಣ, ಹಳ್ಳಿಯ ಜೀವನದ ವಿವರಗಳು, ಯಕ್ಷಗಾನ ಮುಂತಾದವುಗಳ ಕುರಿತು ಮಾತನಾಡಿದಾಗಲೂ ಆ ವಿವರಗಳು ಕೇವಲ ಅನುಬಂಧಗಳಾಗಿ, ಬೇರೊಂದನ್ನು ಯೋಚಿಸಲು ಸಿದ್ಧದ್ರವ್ಯಗಳಾಗಿ ಬರುತ್ತವೆಯೇ ಹೊರತು, ನಮ್ಮ ಒಟ್ಟಾರೆ ಸಾಂಸ್ಕೃತಿಕ ಸಂದರ್ಭ ಅವನ್ನು ಇನ್ನೂ ನಿವಾರಿಸಿಕೊಂಡಿಲ್ಲವೆಂದಾಗಲೀ, ಸದ್ಯದಲ್ಲಿ ನಿವಾರಿಸಿಕೊಳ್ಳಲಿಕ್ಕೂ ಇಲ್ಲ,

ನಿವಾರಿಸಿಕೊಂಡೇ ತೀರಬೇಕಾಗಿಯೂ ಇಲ್ಲ ಎಂದಾಗಲೀ ಗ್ರಹಿಸಿದಂತೆ ಕಾಣುವುದಿಲ್ಲ. 'ಬಹುವಚನಗಳ ಲೋಕ ಸತ್ಯವನ್ನು ಏಕದೇವ ಸಿದ್ಧಾಂತದಲ್ಲಿ ಹಿಡಿದು ವಿವರಿಸುವ ಹಠದಿಂದ, ಒಂದು ಸಾಂಸ್ಕೃತಿಕ ಸಂದರ್ಭವನ್ನು ವಕ್ತಾರನ ಪೋಸಿನಲ್ಲಿ ನಿಂತು ಧ್ಯಾನಿಸು ತ್ತಿರುವಂತೆ ನವ್ಯ ಸಾಹಿತ್ಯ ಈಗ ನಮಗೆ ಕಂಡುಬರುತ್ತದೆ.

o o o o

ಮೇಲಿನ ಗ್ರಹೀತಗಳ ಆಧಾರದ ಮೇಲೆ ಕನ್ನಡ ನವ್ಯ ಸಾಹಿತ್ಯದ ಬಗ್ಗೆ, ಅದಕ್ಕೆ ಪ್ರಮುಖ ಪ್ರೇರಣೆಯಾಗಿದ್ದ ಬ್ರಿಟಿಷ್ ನವ್ಯ ಸಾಹಿತ್ಯವನ್ನೂ ಗಮನದಲ್ಲಿಟ್ಟು ಕೊಂಡು ಈ ಮಾತುಗಳನ್ನು ಹೇಳಬಹುದಾಗಿದೆ:

ನವ್ಯ ಕಾವ್ಯವನ್ನು ತನ್ನ ಓದು ಬರಹಗಳ ಪ್ರಕಾಂಡ ಪಾಂಡಿತ್ಯದ ಸಾಕ್ಷಿಯಲ್ಲಿ, ಸಾರ್ವಜನಿಕ ಅನುಭವಗಳ ಸಾಕ್ಷಿಯಲ್ಲಿ, ಸಾರ್ವಜನಿಕ ಭಾಷೆಯಲ್ಲಿ, ಆಧುನಿಕಮನುಷ್ಯ, ಆಧುನಿಕ ಜೀವನ, ಆಧುನಿಕ ನಾಗರಿಕತೆಗಳ ಸಾರ್ವಜನಿಕ ಮನುಷ್ಯನನ್ನು ಕುರಿತು ಎಲಿಯಟ್ ಬರೆಯುತ್ತಿರುವಾಗ, ಜೀವಾತ್ಮಗಳ ದ್ವಂದ್ವ, ಬೆಳೆಯುತ್ತಿರುವ ಮನಸ್ಸಿನ ಮುಜುಗರಗಳು, ಅಮರವಾಗುವ ಆಸೆ, ದೇಹ ಮುದಿಯಾದರೂ ಬೆನ್ನು ಬಿಡದ ಪ್ರೀತಿಯ ಬಯಕೆ, ಸಾರ್ವಜನಿಕವಾದ್ದರಿಂದಲೇ ನಾಟಕೀಯವಾದ ಸಾರ್ವಜನಿಕ ಕಾಯಕಕ್ಕೆ ಮೂಲದಲ್ಲೇ ಅಂಟಿರುವ ಕಠತ್ವ ಮತ್ತು ಹಾಸ್ಯಾಸ್ಪದತೆಗಳೇ, ಅವನ ಸಮಕಾಲೀನ ನಾದ ಯೇಟ್ಸ್‌ನಿಗೆ ಕಾವ್ಯಚಿಂತನೆಯ ವಸ್ತುಗಳಾಗುತ್ತವೆ. ಹೇಳ ಹೊರಟದ್ದನ್ನು ಅರ್ಥ ದಲ್ಲೇ ಅನುಮಾನಿಸುವ ಪಿಸುಮಾತಿನ ಆಪ್ತಭಾಷೆಯಲ್ಲಿ ಎಲಿಯಟ್ಟನ ಕಾವ್ಯಗೋಷ್ಠಿ ಯಿಂದ ಗುಂಗಿನಲ್ಲಿ ಈಚೆ ಬರುತ್ತಿರುವ ನಮ್ಮನ್ನು ಪಕ್ಕಕ್ಕೆ ಕರೆದು ಯೇಟ್ಸನ ಕಾವ್ಯ ಮಾತನಾಡುತ್ತದೆ. ಆಧುನಿಕ ನಾಗರೀಕತೆಯ ಸಂತೆಯಲ್ಲಿ ಕೇಂದ್ರ ಆಕರ್ಷಣೆಯಾಗಿ ಕಾವ್ಯ ವಿಮರ್ಶಕರಿಂದ ಎಲಿಯಟ್ಟನ ಕಾವ್ಯ ಪ್ರತಿಷ್ಠಾಪಿಸಲ್ಪಟ್ಟರೆ ಯೇಟ್ಸನ ಕಾವ್ಯ ವನ್ನು ಯಾವ ಹಿನ್ನೆಲೆಗೆ ಮುನ್ನೆಲೆಯಾಗಿ, ಯಾವ ಸಾಂಸ್ಕೃತಿಕ ಸಂದರ್ಭದ ಅಭಿವ್ಯಕ್ತಿ ಯಾಗಿ ನೋಡಬೇಕೆಂದು ಹುಡುಕಿ ಕಾಣದೇ ಅದು ಸೋಲುತ್ತದೆ. ಆಧುನಿಕ ನಾಗರೀ ಕತೆಯ ಹುರುಪೇ ಎಲಿಯಟ್ಟನ ಕಾವ್ಯದ ಶಕ್ತಿ. ಆಧುನಿಕ ನಾಗರೀಕತೆಯನ್ನು ಎದುರಿ ಸುವ ದೋರ್ದಂಡ ಬಲವನ್ನು ಆವಾಹಿಸಿಕೊಳ್ಳುತ್ತ ಎಲಿಯಟ್ಟನ ಕಾವ್ಯ ಆಧುನಿಕ ನಾಗರೀಕತೆಯಂತೆಯೇ ಸಂಕೀರ್ಣತೆಯ ಗೋಜಲಾಗುತ್ತದೆ. ಆಧುನಿಕ ಜ್ಞಾನ ದೈತ್ಯ ವನ್ನು ಉದ್ದೇಶಿಸಿ ಅದು ಮಾತಾಡುತ್ತದೆ.

ಅಡಿಗರ ಕಾವ್ಯದ ರೀತಿ ಅದರ ಭಿನ್ನತೆ ವಿಶಿಷ್ಟತೆಗಳ ಹೊರತಾಗಿಯೂ ಎಲಿ ಯಟ್ಟನ ಕಾವ್ಯದ ರೀತಿ. ಅವರ ಕಾವ್ಯ ಎಲಿಯಟ್ಟನ ಋಣಭಾರದಿಂದ ತತ್ತರಿಸುವು ದಿಲ್ಲವೆಂಬುದಕ್ಕೆ ಎಲಿ ಯಟ್ಟನ ಕಾವ್ಯವೂ ಸಾರ್ವಜನಿಕ ಅನುಭವ ಮತ್ತು ಭಾಷೆಗಳ ನಡುವಲ್ಲಿ ಸಾಂಸ್ಕೃತಿಕ ಸಂದರ್ಭವೊಂದರ ಚಿಂತನೆಯಾಗಿ ವ್ಯಕ್ತಗೊಳ್ಳುವ ಸ್ವರೂಪದ್ದು

ಎಂಬುದೂ ಒಂದು ಕಾರಣ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಎಲಿಯಟ್ಟನ ಕಾವ್ಯದ ಅನುಭವ ಒಂದು ಸಾಂಸ್ಕೃತಿಕ ಸಂದರ್ಭದ ವಿಶಿಷ್ಟ ಗ್ರಹಿಕೆಯೊಂದು ಹೇರುವ ಚಿಂತನೆ ಯಾದದ್ದರಿಂದ ಅಡಿಗರ ಕಾವ್ಯದ ಹಿಂದೆ ಎಲ್ಲಿ, ಎಷ್ಟರ ಮಟ್ಟಿಗೆ ಎಲಿಯಟ್ ಇದ್ದಾನೆ ಎಂಬುದು ತೀರ ಪ್ರಸ್ತುತವಲ್ಲ. ಆದರೆ ಅವರ ಹಿಂದೆ ಯೇಟ್ಸ್ ಇಲ್ಲ ಎಂಬುದು, ಅಡಿಗರ ಕಾಲದಲ್ಲೇ ಬೇಂದ್ರೆ ಯಾವರೂ ಬರೆಯುತ್ತಿದ್ದರೂ ನಮ್ಮ ಚಿಂತನಲೋಕದಲ್ಲಿ ಹೊಗಳಲೂ ತೆಗಳಲೂ ಕೇಂದ್ರದಲ್ಲಿದ್ದುದು ಅಡಿಗರ ಕಾವ್ಯ ಚಿಂತನೆಯೆಂಬುದು ಮಾತ್ರ ವಿಶೇಷವಾಗಿ ಪ್ರಸ್ತುತವಾದದ್ದು.

ಕನ್ನಡದ ಮೇಲೆ ಗಾಢ ಪ್ರಭಾವ ಬೀರಿದ ಅಡಿಗರ ಕಾವ್ಯ ಅದರ ಉತ್ಕೃಷ್ಟತೆಯು ಹೊರತಾಗಿಯೂ ಅನವಶ್ಯಕವಾದ ಬಿಗಿ, ಹಠ ಮತ್ತು ಸೆಟೆಗಳಿಂದ ಕೂಡಿದ್ದು. ಅದು ಹಲ್ಲುಗಿರಿದು ಬರೆದ ಕಾವ್ಯ. ಬದಲಾದ ಈಗಿನ ಸಾಂಸ್ಕೃತಿಕ ಸಂದರ್ಭದಲ್ಲಿ ನಿಂತು ನೋಡುವಾಗ ಅಡಿಗರ ಕಾವ್ಯದ ಈ ಗುಣಗಳು ದೋಷಗಳಾಗಿ ಕಾಣುತ್ತವೆ. ಚಿಂತನೆಯು ಬಲವಿದ್ದಾಗಲೂ ಕಾವ್ಯತ್ವಕ್ಕೆ ಮಾರಕವಾಗಬಲ್ಲ ಈ ಗುಣಗಳು ಅವರ, ಬಹು ಸಂಖ್ಯೆಯ ಕವನಗಳಲ್ಲಿ ಮುನ್ನೆಲೆಯಲ್ಲಿ ಬಂದು ನಿಲ್ಲುತ್ತವೆ. ಭಾರತೀಯ ಸಂವೇದನೆಗೆ ಒಗ್ಗುವ ಮತ್ತು ಅದಕ್ಕೆ ಹೊಸ ಆಯಾಮಗಳನ್ನು ಕೊಡಬಲ್ಲ ವಿಶೇಷ ಚೈತನ್ಯ ಮತ್ತು ಕರ್ಷಣವಿರುವ ಮೃದುವಾದ, ಲಲಿತವಾದ, ಗಹನವೂ ಆದ ಯೇಟ್ಸನ ಕಾವ್ಯಶೈಲಿ ಮತ್ತು ಸತ್ವ ಎಲಿಯಟ್ಟನ ರೀತಿಯನ್ನು ಹೋಲುವ ಅಡಿಗರ ಕಾವ್ಯದ ಹೊರಗೆ, ಬೇಂದ್ರೆಯವರ ಕಾವ್ಯದಲ್ಲಿ ಗಾಢವಾಗಿ ಕಾಣುತ್ತದೆ. ನಮ್ಮ ಜೀವನ ಸಂದರ್ಭವೇ ಆಧುನಿಕ ನಾಗರೀಕತೆ ಎಂಬ ಹೊಡೆದು ಕಾಣುವ ಆಧುನಿಕತೆ ಬೇಂದ್ರೆ ಕಾವ್ಯದ ಮುನ್ನೆಲೆಯನ್ನು ಆಕ್ರಮಿಸದಿರುವ ಈ ಕ್ರಮ ಕನ್ನಡಕ್ಕೆ ವಿಶಿಷ್ಟವಾದದ್ದು ಮಾತ್ರವಲ್ಲ, ಕನ್ನಡಕ್ಕೆ ಒಳಗಿನದ್ದು. ಅಡಿಗರ, ಎಲಿಯಟ್ಟನ ಕಾವ್ಯದಲ್ಲಿ ಹೋರಾಟದ ಕೊನೆಯನ್ನು ತಲುಪುವ ಮೊದಲೇ ಎಲ್ಲವನ್ನೂ ಮೈಮೇಲೆ ಆವಾಹಿಸಿಕೊಂಡ ಅನವಶ್ಯಕವಾದ ಸೆಟೆತ ಇದೆ. ಅದು ಹುಡುಗಾಟದ ಕಾವ್ಯ ಅಲ್ಲ; ವರ್ಣನಾತ್ಮಕ ಎಂಬ ಪದದ ಒಳ್ಳೆಯ ಅರ್ಥದಲ್ಲಿ ಒಂದು ಸಾಂಸ್ಕೃತಿಕ ಬಿಕ್ಕಟ್ಟಿನ ವರ್ಣನಾತ್ಮಕ ಕಾವ್ಯ. ಯೇಟ್ಸನಲ್ಲಿ, ಬೇಂದ್ರೆಯಲ್ಲಿ ಕಾವ್ಯಕ್ಕೆ ಜೀವನದ ಚಂಚಲ ಕ್ಷಣಗಳ ಮೋಹಕತೆಯನ್ನೂ, ಸಂಕಟವನ್ನೂ, ಲಾಲಿತ್ಯವನ್ನೂ, ಅಲ್ಲದೇ ಗಹನತೆಯನ್ನೂ ಹಿಡಿಯುವ ಶಕ್ತಿ ಇದೆ. ಯೇಟ್ಸ್‌ಗೆ, ಗಾಂಧೀಜಿಗೆ ಆಧುನಿಕ ಜೀವನದ ಸಂಕಷ್ಟಗಳು ಮತ್ತು ವೈಯಕ್ತಿಕ ಜೀವನದ ಸಂಕಷ್ಟಗಳು ಎರಡೂ ಬೇರೆಬೇರೆ ಸಂಕಷ್ಟ ರಾಶಿಗಳಲ್ಲ; ಆದುದರಿಂದಲೇ ಅವರ ಭಾಷೆ ಕುಟುಂಬದೊಳಗಿನ, ದಿನನಿತ್ಯದ ಕಷ್ಟ ಸುಖವನ್ನುಣ್ಣುವವರ ಭಾಷೆಯಂತೆಯೂ ಸಂಸಾರ ಸಮಾಜಗಳನ್ನು ಮೀರಿ ನಿಂತು ಧ್ಯಾನಿಸಬಲ್ಲ ಅನುಭಾವಿಗಳ ಭಾಷೆಯಂತೆಯೂ ಏಕ

ಕಾಲದಲ್ಲೇ ಕಾಣಿಸುತ್ತವೆ. ಬೇಂದ್ರೆಯವರ ಕಾವ್ಯಾಭಿವ್ಯಕ್ತಿಯಲ್ಲಿ ಕಾಣುವ ಭಾಷೆಗಳ ಸಂಕರ ಅವರ ಅನುಭವ–ಅನುಭಾವ ಲೋಕಗಳ ಅಂತರ್ಸಂಬಂಧದ ಸಾವಯವ ಅಂಗವಾಗಿರುವಂಥದ್ದು.

ಅಡಿಗರ ಕಾವ್ಯಕ್ಕೆ ಅರ್ಥಪೂರ್ಣವಾದ ವೈಯಕ್ತಿಕ ತುರ್ತಿನ ಕಾವ್ಯಾತ್ಮಕ ಸವಾಲುಗಳನ್ನು ಹಾಕಬೇಕಾದ ಅಗತ್ಯವನ್ನು ಅಡಿಗರ ನಂತರದ ಕನ್ನಡ ಕಾವ್ಯೋದ್ಯೋಗ ಬಹುಮಟ್ಟಿಗೆ ಬಹಳ ತಪ್ಪುತಪ್ಪಾಗಿ, ಎಳಸುತನದಲ್ಲಿ ಅಥವಾ ಅನಗತ್ಯ ಡಿಬೇಟಿನ ಧಾಟಿಯಲ್ಲಿ ಮಾಡಿದೆ. ಅಡಿಗರು ಮುಟ್ಟಿದ್ದೆಲ್ಲವೂ ವರ್ಜ್ಯ ಎಂಬ ಮಡಿಯಲ್ಲಿ ಕಾವ್ಯ ಯಾವುದರ ಕುರಿತು ಯೋಚಿಸಬೇಕು ಎಂಬ ಪೂರ್ವಾಗ್ರಹವೇ ಮೇಲುಗೈ ಪಡೆಯಲು ತೊಡಗಿದಾಗ ಬೇಂದ್ರೆಯವರ ಕಾವ್ಯ ಚಿಂತನೆಗೆ ಅಡಿಗರ ಕಾವ್ಯ ಎಷ್ಟು ಪ್ರತಿರೋಧವನ್ನು ತನ್ನ ಅಮಾಯಕತೆಯಲ್ಲೇ ಸೂಚಿಸುತ್ತದೋ ಅಷ್ಟೇ ಪ್ರತಿರೋಧ, ಅಷ್ಟೇ ಅಮಾಯಕತೆಯಲ್ಲಿ ಕನ್ನಡದ ಒಟ್ಟಾರೆ ಕಾವ್ಯೋದ್ಯೋಗವು ಬೇಂದ್ರೆ ಕಾವ್ಯವನ್ನು ಜೀರ್ಣಿಸಿಕೊಳ್ಳದಂತೆ ಹೊರಗೆ ಉಳಿಸಿದೆ.

o o o o

ಈ ಅಭಿಪ್ರಾಯಗಳನ್ನು ಯುಕ್ತವೆನಿಸಬಹುದಾದ ಊಹೆಗಳು ಎಂದಿಟ್ಟುಕೊಂಡರೆ, ತಮ್ಮ 'ಸುವರ್ಣ ಪುತ್ಥಳಿ' ಸಂಕಲನದಲ್ಲಿ ಅಡಿಗರು ಹೊಸ ರೀತಿಯ ಗ್ರಹಿಕೆಯ ಕ್ರಮಗಳನ್ನು ಹಾಗೂ ಅವು ಕೊಡಬಹುದಾದ ಹೊಸ ಅನುಭವ ಪ್ರಪಂಚಗಳನ್ನು ಶೋಧಿಸುವ ಪ್ರಯತ್ನವನ್ನು ಮಾಡುತ್ತಿಲ್ಲವೆಂದೇ ಹೇಳಬೇಕಾಗುತ್ತದೆ; ಬದಲಾದ ಸಾಂಸ್ಕೃತಿಕ ಸಂದರ್ಭದಲ್ಲಿ ಅವರು ತಮ್ಮ ಹಳೆಯ ಭಾಷೆ ಮತ್ತು ಗ್ರಹಿಕೆಯ ಕ್ರಮಗಳನ್ನೇ ಉಪಯೋಗಿಸುತ್ತಿರುವಂತೆ ಅನ್ನಿಸುತ್ತದೆ. ಅಂದರೆ, ಅವರ ಗ್ರಹಿಕೆಯ ಕ್ರಮಗಳು ಬೇಡುವ ಸಾಂಸ್ಕೃತಿಕ ಸಂದರ್ಭವು ನಮ್ಮ ಈಗಿನ ಒಟ್ಟಾರೆ ಚಿಂತನೆಯಲ್ಲಿ ಉತ್ಪಾದನೆಯಾಗುತ್ತಿರುವ ಸಾಂಸ್ಕೃತಿಕ ಸಂದರ್ಭವಲ್ಲವಾದ್ದರಿಂದ ಅವರ ಈ ಕವನಗಳಲ್ಲಿ ಮುಖ್ಯವಾಗಿ ಕಾಣುವುದು ಅವರ ವ್ಯಗ್ರತೆ, ಹುಡುಕಾಟದ ಬಗ್ಗೆ ಹಿಂಜರಿಕೆ, ಅವಸರದ ತೀರ್ಮಾನಗಳನ್ನು ಕೊಡುವ ವ್ಯವಧಾನರಹಿತವಾದ ನಿಲುವು: 'ಹೊಸ ಸವಾಲಿನ ಮೊಳಗಿಗಂಜಿ', 'ಕುರ್ಚಿಗಂಟಿದ ಕರ್ಚಿ', 'ವರ್ಗರಹಿತ ಸಮಾಜ', 'ಆದರ್ಶವಾದ', 'ಮೇರಾ ಭಾರತ ಮಹಾನ್', 'ಪಲಾಯನ ಸೂಕ್ತ', 'ಭೃತ್ಯಸ್ಯ ಭೃತ್ಯ', 'ಸತ್ತೆ ಬದುಕುವ ಮಂದಿ', 'ಹುಟ್ಟುಗುಣ' ಮುಂತಾದ ಕವನಗಳು ಇದಕ್ಕೆ ದೃಷ್ಟಾಂತಗಳು. ಹರಿತ ಮಾತು, ವ್ಯಂಗ್ಯ ಇತ್ಯಾದಿಗಳು ಇಲ್ಲಿ ಕಾಣುತ್ತವಾದರೂ ಅವುಗಳಿಗೆ ಪ್ರಸ್ತುತತೆಯನ್ನು ತರಬಲ್ಲ ಸಂದರ್ಭವೊಂದನ್ನು ಅವು ಸೃಷ್ಟಿಸುವುದಿಲ್ಲವಾದ್ದರಿಂದ

ಈ ಕವನಗಳು ವಾಗ್ರೂಪದಲ್ಲಿ ಮಾತ್ರ ವಿಜೃಂಭಿಸುತ್ತವೆ. 'ಪಲಾಯನ ಸೂಕ್ತ'ದ ಈ ಸಾಲುಗಳನ್ನು ನೋಡಿ:

ಓಡಿ, ಓಡಿ, ಓಡಿ. —
ಹೆಂಗಸರೂ ಗಂಡಸರೂ ಮುದುಕರೂ ಯುವಕರೂ
ಶಾಲೆ ಕಾಲೇಜಿನೆಲ್ಲ ಹೈಕಳೂ
ಓಡಿ, ಓಡಿ, ಓಡಿ,—
ಭಾವೈಕ್ಯದ ಸಿದ್ಧಿಗಾಗಿ, ಭಾರತದ ಸಮೃದ್ಧಿಗಾಗಿ
ಸರಹದ್ದಿನ ರಕ್ಷೆಗಾಗಿ,
ಗಾಂಧೀಜಿಯ ನೆನಪಿಗಾಗಿ
ನೆಹರು ವಂಶ ವೃದ್ಧಿಗಾಗಿ,
ದಂಡಿಯಾತ್ರೆ ನೆನಸುವ,
ದಂಡಯಾತ್ರೆ ನಡೆಸುವ:
ಬಡತನವನು ಬುಡಮುಟ್ಟ ಕಿತ್ತೆಸೆಯಲು ಓಡಿರಿ,
ಮತಭಾಂಡಾಗಾರದ ಅಭಿವೃದ್ಧಿಗಾಗಿ ಓಡಿರಿ,
ಮಂದೆ ಮಂದೆಯಾಗಿ ಸೇರಿಕೊಳ್ಳಿ ನಮ್ಮ ಸಾಲಿಗೆ
ಓಡಿ ಓಡಿ ಮುಟ್ಟಿಬಿಡಿ ದೇಶಭಕ್ತಿ ಶಿಖರವ
ಈ ಬೀದಿಯ ಕೊನೆಗಿರುವ ತಿಪ್ಪೆಗುಂಡಿಯಾಚೆಗೆ:
ಓಡಿ, ಓಡಿ, ಓಡಿ.
.... ಓಡಿದಂತೆ ಮಾಡಿ.3

ಇಲ್ಲಿ ಕಾಣುವ ವ್ಯಂಗ್ಯ ಮತ್ತು ಅದರ ಅಲ್ಪತೃಪ್ತಿ ಅಡಿಗರು ಅರ್ಥಪೂರ್ಣವಾದ ಕವನಗಳನ್ನು ಬರೆಯಲಾರದಂತೆ, ಒಂದು ಸಂದರ್ಭವನ್ನು ಗ್ರಹಿಕೆಯಲ್ಲಿ ಸೃಷ್ಟಿಸುವ ಹೆಣಗಾಟಕ್ಕೆ ಒಳಗಾಗದಂತೆ, ಅಭಿಪ್ರಾಯಗಳನ್ನು ನಿರಾಯಾಸವಾಗಿ ದಾಟಿಸುವ ವ್ಯಂಗ್ಯವಾಗಿ ಪರಿಣಮಿಸುವುದು ಈ ಸಂಕಲನದ ಈಗಾಗಲೇ ಹೆಸರಿಸಿದ ಬಹುಸಂಖ್ಯೆಯ ಕವನಗಳಲ್ಲಿ ಬೇರೆ ಬೇರೆ ವಿಧಗಳಲ್ಲಿ ಕಾಣುವಂಥದ್ದು. ಈ ಕ್ರಮಕ್ಕೆ ಹೊರತಾಗಿ "ಮೌನದ ಸುವರ್ಣ ಪುತ್ಥಳಿ" 'ವಿದಾಯದ ಪದ', 'ನಮ್ಮ ಪುಟ್ಟ' 'ಇನ್ನಿಲ್ಲ ನಮ್ಮ ಪುಟ್ಟ' 'ಯಾರಿವನು'? ಎಂಬೀ ಕವನಗಳಿವೆಯಾದರೂ ಆ ರೀತಿಯ ಅನುಭವಲೋಕ ಪ್ರವೇಶಕ್ಕೆ ಅಡಿಗರ ಕಾವ್ಯಾಭಿವ್ಯಕ್ತಿ ಸಜ್ಜಾಗಿಲ್ಲವೆಂಬುದು ಅವುಗಳ ವಾಚ್ಯತೆಯಿಂದಾಗಿ ಎದ್ದು ಕಾಣುವ ಅಂಶ. ಆತ್ಮಕಥಾಸ್ವರೂಪದ ಅನುಭವ ಪ್ರಪಂಚವನ್ನು ಕುರಿತು ಮಾತಾಡಬಯಸುವ 'ಯಾರಿವನು?' ಎಂಬ ಕವನವನ್ನು ಉದಾಹರಿಸುವುದಾದರೆ,

ಶೂದ್ರ

ಮುಂದುಳನಾಗುತ್ತಿರುವ ಮನುಷ್ಯ ಕನ್ನಡಿಯಲ್ಲಿ ತನ್ನನ್ನು ಕಾಣುವಾಗಿನ ದಿಗಿಲು ಗಳನ್ನು ದಾಖಲಿಸಲು ಅದು ಅಸಮರ್ಥವಾಗುತ್ತದೆ ಎಂಬ ಅಂಶ, ಗಂಗಾಧರ ಚಿತ್ತಾಲರ ಶಕ್ತ ಕವಿತೆಗಳ ಕಾರಣದಿಂದಾಗಿ ಇನ್ನಷ್ಟು ಹೊಡೆದು ಕಾಣುತ್ತದೆ.4

ಅಂದರೆ ಈ ಸಂಕಲನದಲ್ಲೂ ಅಡಿಗರು ಹಿಂದೆ ಬಳಸುತ್ತಿದ್ದ ಕಾವ್ಯ ತಂತ್ರ ಗಳು. ಪದಗಳು, ನುಡಿಗಟ್ಟುಗಳು ಕಾಣುತ್ತವಾದರೂ ಅವು ಕೇವಲ ಮಂತ್ರ ಮರೆತ ತಂತ್ರಗಳಾಗಿ ಈಗ ಉಳಿದಿವೆಯೆಂಬುದು ಈ ಈ ಕವನಗಳ ಪಾಡಿನ ಮೇಲೆ ಬೆಳಕು ಚೆಲ್ಲುವಂತೆಯೇ, ಈ ತಂತ್ರಗಳನ್ನು ನೈದುಂಬಿಕೊಂಡ ಅವರ ಹಿಂದಿನ ಕಾವ್ಯ ಚಿಂತನೆಯೂ ಹೇಗೆ ಇಂಥ ತಂತ್ರಗಳಿಂದಾಗಿ ಮಾತ್ರವೇ ತನ್ನ ಗ್ರಹಿಕೆಗಳನ್ನು ಪಡೆಯಿತು ಎಂಬರ್ಥದಲ್ಲಿ, ನವ್ಯ ಸಾಹಿತ್ಯದ ಉಚ್ಛ್ರಾಯ ಕಾಲದ ಅಡಿಗರ ಪ್ರಮುಖ ಕವನಗಳು ಕಟ್ಟುವ ಸಾಂಸ್ಕೃತಿಕ ಸಂದರ್ಭದಲ್ಲಿ ನಾವು ಈಗ ಕಾಣಬಹುದಾದ ಮಿತಿಗಳ ಮೇಲೂ ಬೆಳಕು ಚೆಲ್ಲುತ್ತವೆ.

೦ ೦ ೦ (

ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಅನಂತಮೂರ್ತಿಯವರ ಸಂಕಲನ 'ಅಜ್ಜನ ಹೆಗಲ ಸುಕ್ಕುಗಳು' ಕನ್ನಡ ಕಾವ್ಯ ಅತಿ ತುರ್ತಾಗಿ ಗಮನಿಸಬೇಕಾದ ಕೆಲವು ಮುಖ್ಯ ಒಳನೋಟಗಳತ್ತ ನಮ್ಮ ಗಮನ ಸೆಳೆಯುತ್ತದೆ. ಮಾರ್ಗ ಮತ್ತು ದೇಸಿಗಳ ಅವಿರತ ದ್ವಂದ್ವ ಈ ಸಂಕಲನದಲ್ಲಿ ಸ್ಥಾಯಿಯಾಗಿರುವ ಅನಂತಮೂರ್ತಿಯವರ ಕಾಳಜಿ: 'ಟೊಟಾಲಿಟೇರಿಯನ್ ವ್ಯವಸ್ಥೆ', 'ರಾಮನೋ ಕೃಷ್ಣನೋ', 'ಜೈಲಿನಿಂದ ವರವರರಾವ್ ಬರೆದ ಕಾಗದ ಓದಿ', ಭಕ್ತಿ–ವಿಭಕ್ತಿ', 'ಮತ್ಸ್ಯಾವತಾರ', 'ಶಬ್ದ ಸೂತಕ', 'ಅಜ್ಜನ ಹೆಗಲ ಸುಕ್ಕುಗಳು', 'ತಲೆ ಬುಡ', 'ಗುರುರಾಯ', 'ಪ್ರೀತಿ ಮತ್ತು ಕರ್ತವ್ಯ', 'ಸಮೂಹ ಸನ್ನಿ', 'ಬಡವ–ಧನಿಕ', 'ಹೆಣ್ಣು ಅಥವಾ ದೇವರು', 'ಯೋಗಿ ಮತ್ತು ವ್ಯಭಿಚಾರಿ', ಮುಂತಾದವು ಯೋಚನಾಕ್ರಮದ ಬಹುರೂಪತೆಯನ್ನೂ ಈ ಬಹುರೂಪತೆಯಲ್ಲೇ ಗ್ರಹಿಕೆಯು ನೆಲೆಯೂರಬೇಕಾದ ಅನಿವಾರ್ಯವನ್ನೂ ದಾಖಲಿಸಲು ಪ್ರಯತ್ನಿಸುವಂಥ ಕವನಗಳು.

'ಕಲಿಯಬೇಕಿನ್ನು' ಎಂಬ ಮೊದಲ ಕವನದ

ಕಲಿಯಬೇಕಿನ್ನು
ಗಾಳಿಯ ಹಾಗೆ ನಿರವಲಂಬಿ ಅಲೆವುದೇ
ಬೇಟವಾಗುವುದನ್ನು
ಆಟವಾಗುವುದನ್ನು

ವಸ್ತುಗಳನ್ನು ಕಣ್ಣಿಗೆಬ್ಬಿಸಿಕೊಡುವ
ಆಕಾಶದುದ್ದಗಲ ಚೆಲ್ಲುವ
ತಡೆದಲ್ಲೆಲ್ಲ ವಿನಯಶೀಲ ನೆರಳಾಗಿ ತಂಗುವ
ಬೆಳಕಿನ ಅವಲಂಬನವನ್ನು,
ನಿರಂಬಳವನ್ನು[5]

ಎಂಬ ನಿಲುವಿನಿಂದ ಆರಂಭವಾಗುವ ಈ ಸಂಕಲನ 'ಶಬ್ದ ಸೂತಕ' ಎಂಬ ಕವನದಲ್ಲಿ ಹೀಗೆ ಹೇಳುತ್ತದೆ :

ಇಂಗ್ಲಿಷ್ ಕವಿಯೊಬ್ಬ — ವಾಚಾಳಿ —
ಆದರೂ ಎಷ್ಟು ಚೆನ್ನಾಗಿ ಹೇಳಿದ ;
ಮುಗು ಬೆರಗಿನಲ್ಲಿ ಏನದು ಅಂದರೆ
ನವಿಲು ಎಂದು
ಬಿಡ್ತೀವಿ.

ಆ ಶಬ್ದ ಗೊತ್ತೇ ಇರಲಿಲ್ಲ ಎನ್ನಿ, ಆಗ
ಅದು ಏನು ?

ಉತ್ಕಟ ಹರ್ಷ ತುಟ್ಟ ತುದಿ ಮುಟ್ಟುವ ಹಾಗೆ ಉನ್ಮಾದ
ಬೀಗಿ, ಬಿಚ್ಚಿ, ಸಹಸ್ರಾಕ್ಷ ಹಮ್ಮಿನ, ಬಣ್ಣಗಳ ಬಿಮ್ಮಿನ
ಗರಿ ಗರಿ ನಿಗುರಿ ಕಂಪಿಸಿದ
ಪೂರ್ವಾಪರವಿರದ
ಪ್ರತಿಕ್ಷಣದ ತುದಿಗಾಲ ಬೆರಗು.

ತತ್ಪರವಾಗಿ ಕಂಡಾಗಲೂ ಈ ದರಿದ್ರ ಮನಸ್ಸು
ಹವಣಿಸಿ ಹೊರತಂದ
ಯಾವುದೋ ಒಂದು ಶಬ್ದ
ನವಿಲೋ, ಮಯೂರವೋ, ಪೀಕಾಕೋ ಏನೋ
ಸರ್ವತ್ರ ರೂಢಿಯಾಗಿ ಬಿಟ್ಟು, ಕಿಲುಬಾಗಿ
ಸ್ಮರಿಸಿದರೆ, ಎಣ್ಣ ಹಳಹಳಿಸಿ ಹಲುಬಿ ಹುಡುಕಿದರೆ
ಹೀಗೆ ಟೀಕಿಸಿಕೊಂಡರೆ, ಉಜ್ಜಿದರೆ
ಮತ್ತೊಮ್ಮೆ ಕಾಣುವುದು, ಅದೇ
ಅಲ್ಲ.[6]

ಉದ್ರ

ಈ ರೀತಿಯ ನಿಲುವು ಅನಂತಮೂರ್ತಿಯವರಿಗೂ ಅಡಿಗರಿಗೂ ಇರುವ ಒಂದು ಪ್ರಮುಖ ಭಿನ್ನತೆಯತ್ತ ಬೆರಳು ಮಾಡುತ್ತಿದೆ ಎಂಬುದು ನನ್ನ ವಾದದ ಗ್ರಹೀತ.

'ಐರ್‌ಲೆಂಡಿನ ಚ್ಯವನ ಋಷಿಗೆ' ಎಂಬ ಯೇಟ್ಸನನ್ನು ಕುರಿತ ಕವನದಲ್ಲಿ ಅನಂತ ಮೂರ್ತಿಯವರ ಚಿಂತನೆಗಳ ಬಿತ್ತು ಯಾವ ಕಡೆಗಿದೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ, ಇದು ಈ ಸಂಕಲನದ ಕೇಂದ್ರದಲ್ಲಿರುವ, ಆಶಯ ಕವನ ಎನ್ನಬಹುದು. ನೋಡುವ ಕ್ರಮಗಳು ಜೀವನದೃಷ್ಟಿಯ ಸಾವಯವ ಸ್ವರೂಪಗಳಾಗಿರುವುದರಿಂದ ಈ ಕವನದಲ್ಲಿ ಅನಂತಮೂರ್ತಿ ಯೇಟ್ಸನನ್ನು ಕಾಣುವ ಕ್ರಮ ಕೇವಲ ಯೇಟ್ಸನನ್ನು ಕಾಣುವ ಕ್ರಮ ಮಾತ್ರವೇ ಅಲ್ಲ. ಸಂಸಾರ, ಪಾಲನೆ, ಜೀವನಪ್ರೀತಿ, ಜೀವನದ ಜಂಜಡ ಮತ್ತು ವೈಭವ, ಎದುಕುವ ಒಳದಾರಿಗಳು. ಇಹ, ಐಹಿಕ, ದೈನಿಕಗಳ ಮೇಲೆ ವ್ಯಾಮೋಹ ದಿಂದ ಒತ್ತುಕೊಡಲು ಬಯಸುವ, ಸಂಕಲನದುದ್ದಕ್ಕೂ ಕಂಡುಬರುವ, ಅವರ ದೃಷ್ಟಿಕೋನ ತರ್ಕದ ಬಿಗಿಯನ್ನು, ಶಠತ್ವ, ಸೆಟೆತಗಳನ್ನು, ಘನತೆಯ ಭಾರವನ್ನು ಅನುಮಾನದಿಂದ ನೋಡುವಂಥದ್ದಾದ್ದರಿಂದ, ತಾನು ಕೊಡುವ ಎಲ್ಲ ಹೇಳಿಕೆಗಳನ್ನು ಅದರ ಪ್ರತಿ ಹೇಳಿಕೆಗಳ ಸಾಧ್ಯತೆಯಲ್ಲಿ ಧ್ಯಾನಿಸುತ್ತ ತನ್ನ 'ಕಲಿಯಬೇಕಿನ್ನು' ಎಂಬ ನಿಲುವಿನಿಂದ ಮುಂದುವರಿಯುತ್ತದೆ.

ಅಡಿಗರ ಕಾವ್ಯವನ್ನು ವಿಶೇಷ ಕಾಳಜಿಯಿಂದ ಕನ್ನಡಕ್ಕೆ ಪರಿಚಯಿಸುವ ಕಾಯಕ ದಲ್ಲಿ ಮುಖ್ಯವಾಗಿ ನಿರತರಾಗಿದ್ದಾಗಲೂ ಅನಂತಮೂರ್ತಿ ಸಾಮಾಜಿಕ, ಸಾಂಸ್ಕೃತಿಕ ವಿಶ್ಲೇಷಣೆಗಳನ್ನು ಗ್ರಹಿಕೆಯ ಕ್ರಮಗಳ ಜೊತೆ ನಡೆಸುವ ಹೋರಾಟವೆಂದೇ ಮೂಲ ದಲ್ಲಿ ಅವರು ಬಗೆಯುತ್ತಾರೆಂಬುದು ಅವರ ಕಾದಂಬರಿಗಳಲ್ಲೂ ಕಥೆಗಳಲ್ಲೂ ವ್ಯಾಪಕ ವಾಗಿ ಕಾಣುವಂಥದ್ದು. ಅದರ ಪರಿಣಾಮವಾಗಿ ಅವರು ಸಾಂದರ್ಭಿಕವಾಗಿ ತಳೆದ ನಿಲುವುಗಳು ಮತ್ತು ಕೊಟ್ಟ ಹೇಳಿಕೆಗಳಿಗಿಂತ ಹೆಚ್ಚು ಪ್ರಸ್ತುತವಾದ ಅಂಶವೆಂದರೆ ಅಂಥ ನಿಲುವುಗಳನ್ನು ತಳೆಯುವ ಕ್ರಮಗಳ ಕುರಿತ ಎಚ್ಚರವನ್ನು ಅವರು ಪ್ರತಿಪಾದಿ ಸಲು ಯತ್ನಿಸುತ್ತಿದ್ದರು ಎಂಬುದು. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, 'ಸಂಸ್ಕಾರ', 'ಭಾರತೀಪುರ', 'ಅವಸ್ಥೆ'ಯಂಥ ಕಾದಂಬರಿಗಳನ್ನೇ ದೃಷ್ಟಾಂತವಾಗಿ ತೆಗೆದುಕೊಳ್ಳುವುದಾದರೆ, ಆ ಕಾದಂಬರಿಗಳು ಗ್ರಹಿಕೆಯ ಕ್ರಮಗಳ ಸಂಪದ್ಭರಿತ ಲೋಕದ ಬಗ್ಗೆ ತೋರುವ ಮೋಹವೇ ಕನ್ನಡದಲ್ಲಿ ಆಗಿಂದಾಗ್ಗೆ ಅವಕೃಪೆಗೆ ಪಾತ್ರವಾದ ಅಂಶ ಹೊರತು — ಅಂದರೆ ಖಡಾಖಂಡಿತವಾಗಿ, ಆತ್ಯಂತಿಕವಾಗಿ ಇವರು ಎಂಥ ಹೇಳಿಕೆಗಳನ್ನು ಕೊಟ್ಟಾರು ಎಂಬ ಬಗ್ಗೆ ಇರುಸುಮುರಿಸೇ ಹೊರತು — ಆ ಕಾದಂಬರಿಗಳು ಒಟ್ಟಾರೆಯಾಗಿ ಏನನ್ನೋ ನಿಸ್ಸಂದಿಗ್ಧವಾಗಿ ಹೇಳುತ್ತಿದ್ದು ಅದು ನಮಗೆ ಅಪ್ರಸ್ತುತ ಎಂಬ ಅಂಶವಲ್ಲ ಎಂಬುದು ಗಮನಿಸಬೇಕಾದದ್ದು. ಹಾಗಾಗಿ ಅಡಿಗರ ಕಾವ್ಯವನ್ನು ವಿಶೇಷ ಕಾಳಜಿ ಯಿಂದ ಕನ್ನಡಕ್ಕೆ ಪರಿಚಯಿಸುವ ಕಾಯಕದಲ್ಲಿ ಮುಖ್ಯವಾಗಿ ನಿರತರಾಗಿದ್ದ ಅನಂತ

ಮೂರ್ತಿ ಯೇಟ್ಸನ ಕವನಗಳನ್ನೂ ಕನ್ನಡಕ್ಕೆ ಪರಿಚಯಿಸಿದ್ದು, ಯೇಟ್ಸನ ಬಗ್ಗೆ ಅವರನ್ನು ಬಿಡದ ಮೋಹ ಸ್ವಲ್ಪಮಟ್ಟಿಗೆ ಅವರು ಅಡಿಗರಿಂದಲೇ ಕಲಿತ ಭಾಷೆಯಲ್ಲೇ ಆದರೂ 'ಐರ್‌ಲೆಂಡಿನ ಚ್ಯವನ ಖುಷಿಗೆ' ಕವನದಲ್ಲಿ ಹೀಗೆ ವ್ಯಕ್ತವಾಗುತ್ತದೆ:

ಮಲ ಮೂತ್ರದ ಗುಹ್ಯದಲ್ಲೇ ಗೂಡಿಕಟ್ಟುವ ಪ್ರೀತಿ
ಮುಪ್ಪಿನ ನಿಶ್ಶಕ್ತಿಯಲ್ಲು ಉಳಿದೆ ಬಿಡುವ ಈ ತೀಟೆ
ಬಂಗಾರದ ಪಕ್ಷಿಯಾಗಿ ಚಿರವಾಗುವ ಆಸೆ ಕವಿಗೆ
ಜರಾಶೀರ್ಣ ಏಟ್ಸ್ ಖುಷಿಗೆ
ಬಯಲಾಗುವ ಆಸೆ
ಹಾಡುವ ಆಸೆ

....ಸೊರಗಿ ಸೋತು ಬೊಗಳೆಯಾದ ಸಂಪನ್ನರ ನೀತಿ ಗೀತಿ
ಹಳೆಯ ಸರಕು, ಗಬ್ಬು ಜೋಕು ಕಚ್ಚೆ ಹರುಕ ಧೀರ ಖುಷಿಗೆ
ಜೀರ್ಣವಸ್ತ್ರ ಕಳಚುವಾಸೆ ಹೋತದ ಬೆದೆ ಮಹಾಕವಿಗೆ
ಬಂಗಾರದ ಪಕ್ಷಿಯಾಗಿ ಚಿರವಾಗುವ ಆಸೆ ಮುದಿಗೆ

ದಡದಾಚೆಗೆ ತಲುಪುವಾಸೆ ಕಡುಕೋಪದ ಹುಂಬ ಖುಷಿಗೆ
ಕೈತಟ್ಟಿ ಕುಣಿಯುವಾಸೆ ದುಷ್ಟ ದೃಷ್ಟಾರ ಕವಿಗೆ
ಬಿಗಿದ ಕಚ್ಚೆ ನೋಡುವಾಸೆ, ಚೀರಿ ಚೀರಿ ಚಿಗುರುವಾಸೆ
ಎಲ್ಲ ಏಣಿ ಶುರುವಾಗುವ ಹರಕು ಮುರುಕು ಮೈಯಲ್ಲೆ
ಶುರುಮಾಡುವ ಆಸೆ... 7

ಆದರೆ ಅನಂತಮೂರ್ತಿಯವರು ತಮ್ಮ ನಿಲುವಿನಲ್ಲಿ ತೋರುವ ಈ ವೈಶಿಷ್ಟ್ಯ ಸದ್ಯದ ಕನ್ನಡ ಕಾವ್ಯೋದ್ಯೋಗಕ್ಕೆ ಪ್ರಮುಖವೆಂಬುದು ನಿಜವಾಗಿದ್ದಾಗಲೂ ಈ ಮಾತನ್ನು ಹೇಳಲೇಬೇಕು : ಗ್ರಹಿಕೆಯಲ್ಲಿ ಬಹುರೂಪತೆ ಸಾಧ್ಯ ಮತ್ತು ಸಾಧು ಎಂಬ ನಿಲುವು ಕಾವ್ಯ ಚಿಂತನೆಯ ನಿಯಂತ್ರಕಗಳಾಗಿ ಕೆಲಸ ಮಾಡಬೇಕೆನ್ನುವ ಪೂರ್ವ ನಿರ್ಧಾರಿತ ಘೋಷಣೆಯನ್ನು ಅವರ ಕವನಗಳು ಮಾಡುತ್ತಿವೆ. ಅಂದರೆ ಅಂಥ ನಿಲುವುಗಳು ಈ ಕವನಗಳ ಹಿನ್ನೆಲೆಯಲ್ಲಿ ಇವೆ ಎಂಬುದೇ, ಕಾವ್ಯಾಭಿವ್ಯಕ್ತಿಯನ್ನು ಬಂಧಿಸುತ್ತಿವೆ ಯೆಂಬುದೇ ಈ ಸಂಕಲನದ ಮಿತಿಯೂ ಕೂಡ. "ಈ ಎಲ್ಲ ರಚನೆಗಳು ಶುದ್ಧವಾದ ಕವಿತೆಗಳು ಎನ್ನುವುದು ನನ್ನಮಟ್ಟಿಗೆ ಅಷ್ಟು ಪ್ರಸ್ತುತವಲ್ಲ. ನನ್ನನ್ನು ಆಳುವ ಎಲ್ಲ ಭಾವನೆ, ಎಲ್ಲ ವಿಚಾರಗಳು ನನ್ನ ಶಕ್ತ್ಯಾನುಸಾರ ಮೂಡಿದಷ್ಟು ಇಲ್ಲಿ ಮಾತು ಪಡೆದಿವೆ" ಎಂದು ಅನಂತಮೂರ್ತಿಯವರೂ 'ಮೊದಲ ಮಾತು'ವಿನಲ್ಲಿ ಹೇಳುತ್ತಾರೆ.8 ಹಾಗಾಗಿ

ಗ್ರಹಿಕೆಯ ಹೊಸ ಕ್ರಮಗಳನ್ನು ಪಡೆಯಬೇಕೆಂಬ ಈ ಸಂಕಲನದ ಹಂಬಲ ಮಾತ್ರ ನಮ್ಮ ಗಮನ ಸೆಳೆಯಬಹುದಾದ ಅಂಶ ಎಂದು ಹೇಳಬಹುದು.

೦ ೦ ೦ ೦

ಹಿಂದೆ ಹೇಳಿದ ಮಾತುಗಳನ್ನು ಇನ್ನಷ್ಟು ಸ್ಫುಟವಾಗುವಂತೆ ಹೇಳುವುದಾದರೆ, ನವ್ಯದ ಕುರಿತು ಕೆಲವಾದರೂ ತೀರ್ಮಾನಗಳನ್ನು ಕೊಡಲು ನಮಗೆ ಈಗ ಸಾಧ್ಯವಾಗುವುದು, ನವ್ಯವು ಸೆಣಸುತ್ತಿದ್ದ ಆಧುನಿಕ ನಾಗರಿಕತೆಯ ಒಟ್ಟಾರೆ ತರ್ಕವು ಹಿಡಿಯುವ ದಿಕ್ಕಿನ ಬಗ್ಗೆ ನಮಗೆ ಮೂಡುವ ಮೂಲಭೂತ ಅನುಮಾನಗಳ ಮೂಲಕ. ಪಾಶ್ಚಾತ್ಯ ಸಂಸ್ಕೃತಿ ಆಧುನಿಕ ನಾಗರಿಕತೆಯು ಮಾನವ ಅಹಮ್ಮಿನ ಧೋರಣೆಯನ್ನು ಹದಿನಾರನೆಯ ಶತಮಾನದ ಲಾಗಾಯ್ತು ರೂಢಿಸಿಕೊಂಡು ಬಂದಿರುವಂಥದ್ದು, ಕೇವಲ ಮಾನವ ಕೇಂದ್ರಿತ ಚಿಂತನೆಯೆಂಬುದಷ್ಟೇ ಅದರ ವಿಶೇಷವಲ್ಲ ; ಜಗತ್ತನ್ನು ಬಗೆಯುವ, ಅರಿಯುವ ಕ್ರಮಗಳನ್ನು ಅರಿಸಿಕೊಳ್ಳುವ ಹಂತದಲ್ಲೇ ಮನುಷ್ಯನೂ ಅವನ ಪ್ರಶ್ನಾರ್ಥಕ ಗ್ರಹಿಕೆಯ ಕ್ರಮಗಳೂ ಪ್ರತಿಷ್ಠಿತವಾದಂಥವು ಎಂಬ ಗ್ರಹೀತ ಅಲ್ಲಿ ಇರುವುದರಿಂದ, ಆ ನಂತರ ಅದು ಪಡೆದುಕೊಳ್ಳುವ ಎಲ್ಲ ತೀರ್ಮಾನಗಳೂ ಅ–ಸಮಸ್ಯಾತ್ಮಕವೂ, ಆನುಷಂಗಿಕವೂ, ಆ ನಿಲುವನ್ನೇ ಪ್ರಶ್ನಿಸದ ಸಹಜೋತ್ಪನ್ನಗಳೂ ಆಗಿವೆ. ಹಾಗಾಗಿ ಜಗತ್ತನ್ನು ಕಣಕಿ ಅರ್ಥವನ್ನು ಹಿಂಡುವ ಈ ನಿಲುವಿಗಿಂತ ಮನುಷ್ಯನನ್ನು ಸಾಧನೆಯ ವಿವಿಧ ಭಂಗಿಗಳಲ್ಲಿ ಅರ್ಥವನ್ನು ಪಡೆಯಬಲ್ಲ–ಕೊಡಬಲ್ಲ, ಅಲ್ಲ–ಆ್ಯಂಟೆನಾದಂತೆ ಸಿದ್ಧಪಡಿಸುವುದೇ ಗುರಿಯಾಗುವ ಅನುಭಾವಿಯ ನಿಲುವು ಎಂದಿಗಿಂತ ಹೆಚ್ಚು ಅನಿವಾರ್ಯ ಎಂಬಂತೆ ತೋರುತ್ತದೆ. ಆದರೆ ಇದು, ಆಧುನಿಕ ನಾಗರೀಕತೆಯಿಂದಾಗಿಯೇ, ಅನಗತ್ಯವಾಗಿ ಉಪೇಕ್ಷಿಸಲ್ಪಟ್ಟ ನಿಲುವೂ ಕೂಡಾ. ಆಧುನಿಕ ನಾಗರಿಕತೆ ಕಲಿತ ಸೂಕ್ಷ್ಮಗಳು, ಚಿಂತನೆಯ ವಿವಿಧ ಪೋಸುಗಳು ಮನುಷ್ಯನು ಈ ಜಗತ್ತನ್ನು ಗೆಲ್ಲುವ ಉಪಯೋಗಿಸುವ ತರಬೇತಿಯನ್ನು ಕೊಟ್ಟಿವೆಯೇ ಹೊರತು, ಈ ಜಗತ್ತಿನ ಖಾಸಗಿ ರಹಸ್ಯಗಳನ್ನು ಕದ್ದು ಕೇಳುವ ಹಾಗೆ ಮಾಡಿವೆಯೇ ಹೊರತು, ಈ ಜಗತ್ತಿನ ತಾಳಕ್ಕೆ ಹೊಂದಿಕೊಳ್ಳಲು ಕಲಿಸಲಿಲ್ಲ ಎಂಬುದು ಇಲ್ಲಿನ ಅಭಿಮತ.

ಟಿಪ್ಪಣಿಗಳು :

1. ಅನಂತಮೂರ್ತಿ, ಯು. ಆರ್. 'ಅಜ್ಜನ ಹೆಗಲ ಸುಕ್ಕುಗಳು'
   ಮೈಸೂರು ; ಋಜುವಾತು ಪ್ರಕಾಶನ, ೧೯೮೯.
2. ಗೋಪಾಲಕೃಷ್ಣ ಅಡಿಗ, 'ಸುವರ್ಣ ಪುತ್ಥಳಿ'
   ಬೆಂಗಳೂರು ; ಅಪರ್ಣ ಪ್ರಕಾಶನ, ೧೯೭೦.
3. ಗೋಪಾಲಕೃಷ್ಣ ಅಡಿಗ, ಪುಟ ೨೯–೩೧.

4. ಗಂಗಾಧರ ಚಿತ್ತಾಲ, 'ಸಮಗ್ರ ಕಾವ್ಯ' ಮೈಸೂರು ;
ಗೀತಾ ಬುಕ್ ಹೌಸ್, ೧೯೮೫, ಉದಾಹರಣೆಗಾಗಿ,
'ಬೇಡಿಕೆ' (ಪುಟ ೨೦೫) ನೋಡಿ :

ಹೆಳವನ ಮಾಡದಿರಯ್ಯ ತಂದೆ !
ಹೆಳವನ ಮಾಡದಿರೋ
ನೀನೆ ಇತ್ತ ಅಂಗಾಂಗದ ಬಂಧವ
ಅಂದವ ಕೆಡಿಸದಿರೋ.

ನೀನೆ ಇತ್ತ ಕೈಕಾಲ್ಗಳ ಈ ಬಲವ
ನಿರ್ವ್ಯಂಗ್ಯವಾದ ನಡಿಗೆಯ ಈ ಸುಖವ
ಹಾವಭಾವ ಪರಿಪೂರ್ಣ ಹಸನ್ಮುಖವ
ಕೆಡಿಸದಿರಯ್ಯಾ
ಕೆಡಿಸದಿರು.

5. ಅನಂತಮೂರ್ತಿ, ಪುಟ ೧
6. ಅನಂತಮೂರ್ತಿ, ಟಪು ೪೧-೪೨.
7. ಅನಂತಮೂರ್ತಿ, ಪುಟ ೩೭.
8. ಅನಂತಮೂರ್ತಿ, ಪುಟ v.

ಚಿನುವಾ ಅಚೆಬೆಯ "ಆಫ್ರಿಕನ್ ತ್ರಿವಳಿ"

— ಪಿ. ವಿ. ಸುಬ್ರಾಯ

(ಕಳೆದ ಸಂಚಿಕೆಯಿಂದ)

Things Fall Apart ಕಾದಂಬರಿ ಒಂದು ದೇಶೀ ಸಂಸ್ಕೃತಿಯ ಕಲೋನಿಯಲ್ ದ್ವಂದ್ವಗಳನ್ನು ವಿಶ್ಲೇಷಿಸಿದರೆ, 'No Longer at Ease' ಕಾದಂಬರಿ ಕಲೋನಿಯಲ್ ಆಡಳಿತ ಕ್ರಮದ ದ್ವಂದ್ವಗಳನ್ನು, ಮಿತಿಗಳನ್ನು ಹೇಳುತ್ತದೆ. ಈ ಕಾದಂಬರಿಯ ನಾಯಕ ಓಬಿಒಕೊಂಕೊ, ಒಕೊಂಕೊನ ಮೊಮ್ಮಗ. ಇವರಿಬ್ಬರಲ್ಲಿ ಒಂದು ವಿಶಿಷ್ಟ ಬಗೆಯ ಸಾಮ್ಯವಿದೆ, ಇವರಿಬ್ಬರೂ ತಾವು ಏನನ್ನು ವಿರೋಧಿಸುತ್ತಾರೋ, ಅದನ್ನೇ ಆರಿಸಿಕೊಳ್ಳುತ್ತಾರೆ. ಉದಾಹರಣೆಗೆ ಒಕೊಂಕೊನ ಆತ್ಮಹತ್ಯೆ : ಒಕೊಂಕೊನಲ್ಲಿ ಹಾಗಾಗುವುದಕ್ಕೆ ಕಾರಣ ಆತ ಏಳು ವರ್ಷಗಳ ಕಾಲ ದೇಶಭ್ರಷ್ಟನಾಗಿದ್ದುದು. ಆತ ವಾಪಸ್ಸು ಬರುವಷ್ಟರಲ್ಲಿ ಅವನ ವೈಯಕ್ತಿಕ ಸ್ಥಾನಮಾನಗಳಲ್ಲಿಯೇ ಪಲ್ಲಟವಾಗಿದೆ. ಈಬೋ ಸಂಸ್ಕೃತಿ ಆಯಾ ಕಾಲಕ್ಕೆ ಬೇಕಾದಂತಹ ಒಂದು ಪ್ರಾತಿನಿಧಿಕ ಧ್ವನಿಯನ್ನು ಪಡೆದುಕೊಳ್ಳುತ್ತ ಮುಂದುವರಿಯುತ್ತದೆ. ಒಕೊಂಕೊ ವಾಪಸ್ಸು ಬಂದಾಗ ಬಿಳಿಯರ

ಪಿ. ವಿ. ಸುಬ್ರಾಯ, ಇಂಗ್ಲಿಷ್ ವಿಭಾಗ, ಲಾಲ್‌ಬಹದೂರ್ ಕಾಲೇಜ್, ಸಾಗರ, ಶಿವಮೊಗ್ಗ ಜಿಲ್ಲೆ

ಆಗಮನ ಅಲ್ಲಿಯ ಜನರಲ್ಲಿ ಬೇರೆ ರೀತಿಯ ಆದರ್ಶವಾದವನ್ನು ಬಿತ್ತಿರುತ್ತದೆ. ಹೀಗಾಗಿ ಒಕೊಂಕೊಗೆ ತನ್ನ ಜನಾಂಗದ ಸಾರ್ವಕಾಲಿಕ ಆದರ್ಶಭೂತ ವ್ಯಕ್ತಿಯಾಗಿ ಉಳಿಯಲು ಸಾಧ್ಯವೇ ಇಲ್ಲ. ಆದ್ದರಿಂದ ಆತ ಈಬೋ ಸಮುದಾಯದ ಒಬ್ಬ ಸಾಂಕೇತಿಕ ವ್ಯಕ್ತಿ ಕೂಡ ಅಲ್ಲ. ಆತನ ಸೋಲು ಗೆಲುವುಗಳು ಆ ಸಂಸ್ಕೃತಿಯ, ಜನಾಂಗದ ಸೋಲು-ಗೆಲುವುಗಳಾಗದೇ ಅವನ ವೈಯಕ್ತಿಕ ಮಟ್ಟದಲ್ಲಿ ಮಾತ್ರ ನಿಜವಾಗುತ್ತದೆ. ಆದ್ದರಿಂದ ಅಚಿಬೆ ಇಷ್ಟಪಟ್ಟಂತಹ ಒಂದು ಪ್ರಾತಿನಿಧಿಕ ಪಾತ್ರವಾಗಿ ಒಕೊಂಕೊ ಹೊರಹೊಮ್ಮುವುದಿಲ್ಲ.

ಆದರೆ ಚಿನುವ ಅಚಿಬೆ ಓಬಿ ಒಕೊಂಕೊನನ್ನು ಬೇರೆ ತರಹದಲ್ಲಿ ನಿರ್ವಹಿಸುತ್ತಾರೆ. 'Things Fall Apart' ಕಾದಂಬರಿಯಲ್ಲಿ ಒಕೊಂಕೊನ ಪಾತ್ರ ಅವನ ವೈಯಕ್ತಿಕ ಪ್ರತಿಷ್ಠೆಗಳ ಮುಖಾಂತರ ರಚಿತವಾದರೆ, 'No Longer at Ease' ಕಾದಂಬರಿಯಲ್ಲಿ ಓಬಿಯನ್ನು ಅವನ ಅವಲಕ್ಷಣದ ಗಳಿಗೆಯಲ್ಲಿ ನೋಡುತ್ತೇವೆ. "ಆತ ಏಕೆ ಹೀಗೆ ಮಾಡಿದ ?" ಅನ್ನುವ ಪ್ರಶ್ನೆಯೊಂದಿಗೆ ಶುರುವಾಗುವ 'No Longer at Ease', ಕ್ರಮೇಣ ಆ ಅವಲಕ್ಷಣಗಳ ಸುಳಿಗಳನ್ನು ಬಿಚ್ಚುತ್ತ ಮುನ್ನಡೆಯುತ್ತದೆ.

ಓಬಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದಿದ ನೋಯೆಯ ಮಗ. ಆತನಿಗೆ ಉನ್ನತ ಸ್ಕಾಲರ್‌ಶಿಪ್ ಸಿಕ್ಕಿ ವ್ಯಾಸಂಗಕ್ಕಾಗಿ ಇಂಗ್ಲೆಂಡ್‌ಗೆ ಹೋಗಬೇಕಾಗುತ್ತದೆ. ಇಂಗ್ಲೆಂಡಿಗೆ ಹೊರಡುವ ಮುನ್ನ ಓಬಿ ತನ್ನ ಹುಟ್ಟೂರಾದ ಯುಮೋಫಿಯಾಕ್ಕೆ ತೆರಳುತ್ತಾನೆ. ಅಲ್ಲಿ ಇಕೆಡಿ ಅನ್ನುವ ವ್ಯಕ್ತಿ ಓಬಿಗೆ ಹೇಳುವ ಮಾತುಗಳು ಆ ಜನರ ನಿರೀಕ್ಷೆಯನ್ನು, ಭಯವನ್ನು ಒಟ್ಟಿಗೇ ವ್ಯಕ್ತಪಡಿಸುತ್ತದೆ. ಇಕೆಡಿ ಹೇಳುತ್ತಾನೆ:

"ಹಿಂದಿನ ದಿನಗಳಲ್ಲಿ ಯುಮೋಫಿಯಾ ನೀನು ಯುದ್ಧಕ್ಕೆ ಹೋಗಿ ಮನುಷ್ಯರ ರುಂಡಗಳನ್ನು ತರುವುದನ್ನು ನಿರೀಕ್ಷಿಸುತ್ತಿತ್ತು; ಆದರೆ ಸ್ಥಿತಿ ಈಗ ಬದಲಾಗಿ ಆ ಕರಾಳ ದಿನಗಳಿಂದ ವಿಮುಕ್ತಿ ಹೊಂದಿದ್ದೇವೆ; ಇವತ್ತು ನೀನು ಜ್ಞಾನ ಸಂಪಾದನೆಗೆ ಹೊರಡಬೇಕಾಗಿದೆ; ಜ್ಞಾನದ ಆದಿಪಾಯ ಇರುವುದೇ ಆ ಭಗವಂತನಲ್ಲಿನ ನಮ್ಮ ಭಯಭಕ್ತಿಯಲ್ಲಿ; ಈ ಹಿಂದೆ ಬಿಳಿಯರ ದೇಶಕ್ಕೆ ಜ್ಞಾನ ಸಂಪಾದನೆಗಾಗಿ ಹೋಗಿ, ಅಲ್ಲಿಯ ಹುಡುಗಿಯರನ್ನೇ ಮದುವೆ ಮಾಡಿಕೊಂಡು ಹಾಳಾಗಿ ಹೋದವರ ಬಗ್ಗೆ ಕೇಳಿದ್ದೇವೆ. ಹಾಗೇ ಮಾಡಿದರೆ, ನೀನು ನಿನ್ನವರನ್ನು ಕಳೆದುಕೊಳ್ಳಬೇಕಾಗುತ್ತದೆ; ಆಗ ನೀನು ಕಾಡಿನ ಮೇಲೆ ಮಳೆಗರೆದಷ್ಟೆ ಅಪ್ರಯೋಜಕ ಆಗುತ್ತೀಯಾ; ನೀನು ಮದುವೆಯಾಗಿ ಹೋದರೇ ಬಹಳ ಒಳ್ಳೆಯದಿತ್ತು. ಆದರೆ ಅದಕ್ಕೆ ಸಮಯವು ಇಲ್ಲ ಈಗ; ನಿನ್ನನ್ನು ಜ್ಞಾನಗಳಿಸಲು ಕಳಿಸುತ್ತಿದ್ದೇವೆ; ಬದುಕಿನ ಖುಷಿಗಳು ಅನಂತರ; ಒಂದು ಜಿಂಕೆ ಮರಿ

ಕುಣಿಯುಲು ಹೋಗಿ ಕಾಲು ಕಳೆದುಕೊಂಡ ಹಾಗೆ ದೈಹಿಕ ಸುಖಗಳ ಬಗ್ಗೆ ಆತುರಪಟ್ಟು ಹಾಳಾಗಬೇಡ." (The African Trilogy, P. 181).

ಈಕೆಡಿಯು ಈ ಮಾತುಗಳು ಬಿಳಿಯರ ಬಗ್ಗೆ ಇರುವ ಅಸಮಾಧಾನ, ತೀವ್ರವಾದ ಜಿಗುಪ್ಸೆಯನ್ನು, ಆ ಜನಾಂಗದ ಆಂತರಿಕ ತುಮುಲಗಳನ್ನು ವ್ಯಕ್ತಪಡಿಸುತ್ತವೆ. ಕಲೋನಿಯಲ್ ಆಡಳಿತ ಕ್ರಮವನ್ನು ಆಫ್ರಿಕಾದ ಸಂಸ್ಕೃತಿ ಒಪ್ಪಿಕೊಳ್ಳುವುದು ಇಂಗ್ಲಿಷ್ ವಿದ್ಯಾಭ್ಯಾಸದಿಂದ ದೊರಕಬಹುದಾದಂತಹ ವಿಮೋಚನೆಗಾಗಿ ಮಾತ್ರ. ಕಲೋನಿಯಲ್ ಆಡಳಿತವನ್ನು ಒಂದು ದೇಶೀ ಸಂಸ್ಕೃತಿ ಸಂಪೂರ್ಣವಾಗಿ ಒಪ್ಪಿಕೊಳ್ಳದೇ ಇರುವುದಕ್ಕೆ ಆ ಆಡಳಿತ ಕ್ರಮದಲ್ಲಿ ಇರುವ ದ್ವಂದ್ವಗಳೇ ಕಾರಣ. ಬಿಳಿಯರು ತಮ್ಮ ದೇಶವನ್ನು ದೃಷ್ಟಿಯಲ್ಲಿಟ್ಟುಕೊಂಡು ಅದರ ಮಾದರಿಯನ್ನು ಕಲೋನಿಯಲ್ ರಾಷ್ಟ್ರಗಳ ಮೇಲೆ ಹೇರಲು ಪ್ರಯತ್ನಿಸುತ್ತಾರೆ. ಆದರೆ ಆಧುನಿಕ ನಾಗರೀಕತೆಯನ್ನು ತರುವ ಅವರ ಪ್ರಯತ್ನಗಳು ಒಂದು ದೇಶೀ ಜನಾಂಗದ ಬೆನ್ನಲ್ಲಿರುವ ವಾಸ್ತವಗಳನ್ನು ಕಡೆಗಣಿಸುತ್ತವೆ. ಹೀಗಾಗಿ ಯಾವುದೇ ಕಲೋನಿಯಲ್ ವ್ಯವಸ್ಥೆ ಆ ದೇಶೀ ಸಂಸ್ಕೃತಿ ಸ್ವತಂತ್ರಗೊಳ್ಳಲು ಬೇಕಾಗುವ ರಾಜಕೀಯ ಕಾರಣಗಳನ್ನು ಅಂತರ್ಗತವಾಗಿ ಒಳಗೊಂಡಿರುತ್ತವೆ.

ಅಚೆಬೆ ತಮ್ಮ 'No Longer at Ease' ಕಾದಂಬರಿಯಲ್ಲಿ ಹೊಳೆಯಿಸುತ್ತಿರುವುದು ಇದನ್ನೆ. ಓಬಿ ಒಕೊಂಕೊ ಇಂಗ್ಲೆಂಡಿಗೆ ಹೋಗಿ ಹಾಳಾಗಬಹುದೆಂಬ ಭಯ ಮತ್ತು ಹಾಗಾಗಕೂಡದೆಂಬ ನೈತಿಕ ಎಚ್ಚರವನ್ನು ಆತನ ಸಂಸ್ಕೃತಿ ಯಾವಾಗಲೂ ಪಡೆದುಕೊಂಡಿರುತ್ತದೆ. ಈ ಕಾದಂಬರಿಯಲ್ಲಿ ಪ್ರಧಾನವಾಗಿ ಕಾಣುವ ಈ ಅಂಶ ಒಂದು ತರಹದ 'archetypal' ಆಗಿ ಕಾಣುತ್ತದೆ.

ನಾಲ್ಕು ವರ್ಷಗಳ ಕಾಲ ಇಂಗ್ಲೆಂಡಿನಲ್ಲಿದ್ದು ತನ್ನ ವಿದ್ಯಾಭ್ಯಾಸ ಮುಗಿಸಿ ಓಬಿ ಸ್ವದೇಶಕ್ಕೆ ವಾಪಸ್ಸಾಗುತ್ತಾನೆ. ಕಲೋನಿಯಲ್ ರೂಲ್‌ನ 'ಆಡಳಿತ ಸೇವೆ' ಸೇರಲು ಒಂದು ಸಂದರ್ಶನಕ್ಕೆ ಹಾಜರಾಗುತ್ತಾನೆ. ಅವನಿಗೆ ಈ ಪ್ರಶ್ನೆ ಕೇಳಲಾಗುತ್ತದೆ :

"ಆತ್ಮಹತ್ಯೆ, ಒಂದು ಟ್ರಾಜಿಡಿಯ ತಾತ್ವಿಕತೆಯನ್ನು ಹಾಳುಮಾಡುವುದಿಲ್ಲವೇ?"

ಓಬಿ ಉತ್ತರಿಸುತ್ತಾನೆ:

"ಹೌದು, ನಿಜವಾದ ಟ್ರಾಜಿಡಿಗೆ ಎಂದೂ ಉತ್ತರವಿಲ್ಲ, ಆದರೆ ವಾಡಿಕೆಯಲ್ಲಿ ಬಂದಂತಹ ಟ್ರಾಜಿಡಿ ಸುಲಭವಾಗಿ ಬಗೆಹರಿಯುತ್ತದೆ. ಅದರ ನಾಯಕ ಸಾಯುತ್ತಾನೆ; ನಮ್ಮ ಮನಸ್ಸು ಪರಿಶುದ್ಧವಾಗುತ್ತದೆ. ಡಬ್ಲ್ಯೂ.ಎಚ್. ಆಡನ್ ಪ್ರಕಾರ ನಿಜವಾದ ಟ್ರಾಜಿಡಿ ಒಂದು ಮೂಲೆಯಲ್ಲಿ, ಕೊಳಕಾದ ಪ್ರದೇಶದಲ್ಲಿ ನಡೆಯುತ್ತದೆ. ಅದು ಯಾರಿಗೂ ಗೊತ್ತಾಗುವುದಿಲ್ಲ. ಮತ್ತು ನಮ್ಮ ಭಾವನೆಗಳು ಪರಿಶುದ್ಧವಾಗುವುದಿಲ್ಲ, ಏಕೆಂದರೆ ನಾವು ಅಲ್ಲಿರುವುದಿಲ್ಲ. (The African Trilogy, P. 206).

ಇದು ಕಾದಂಬರಿಯಲ್ಲಿ ವ್ಯಕ್ತವಾಗುವ ದುರಂತ ವ್ಯಂಗ್ಯಗಳಲ್ಲೊಂದು. ಏಕೆಂದರೆ, ಇದು ಓಬಿಯ ಟ್ರಾಜಿಡಿಯೂ ಹೌದು.

ಸಂದರ್ಶನ ಮುಗಿಸಿ ಓಬಿ ತನ್ನ ಊರಾದ ಯುಮೋಫಿಯಾಕ್ಕೆ ಬರುತ್ತಾನೆ. ಅವನು ಇಂಗ್ಲೆಂಡಿಂದ ಪಾಪಸ್ಸಾದ ಮೇಲೆ ಊರಿಗೆ ಬರುತ್ತಿರುವುದು ಇದೇ ಮೊದಲು. ಅವನನ್ನು ಪ್ರೀತಿ, ಆದರಗಳಿಂದ ಅಲ್ಲಿನ ಜನ ಬರಮಾಡಿಕೊಳ್ಳುತ್ತಾರೆ. ಅವನ ಜೊತೆ ಅನೇಕ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡುತ್ತಾರೆ. ಓಬಿ ಇಂಗ್ಲೆಂಡಿನಲ್ಲೇ ಮದುವೆ ಯಾಗಿ ಬರದೇ ಇದ್ದುದನ್ನು ನೋಡಿ ಮ್ಯಾಥ್ಯೂ ಅನ್ನುವ ವ್ಯಕ್ತಿ ಸಮಾಧಾನದ ನಿಟ್ಟುಸಿರು ಬಿಡುತ್ತಾನೆ. ಒಬ್ಬ ಆಫ್ರಿಕಾದವನು ಇಂಗ್ಲೆಂಡಿನ ಹುಡುಗಿಯನ್ನು ಮದುವೆ ಯಾಗಿ ತನ್ನ ಊರಿಗೆ ಬಂದಿದ್ದ. ಅವಳು ಸ್ವಲ್ಪ ವರ್ಷಗಳ ನಂತರ ತನ್ನ ಎರಡು ಮಕ್ಕಳನ್ನು ಬಿಟ್ಟು ಇಂಗ್ಲೆಂಡಿಗೆ ಪರಾರಿಯಾದಳು. ಕಪ್ಪುಜನ ಬಿಳಿಯರನ್ನು ಮದುವೆ ಯಾದರೆ ಇದೇ ರೀತಿ ಆಗುತ್ತದೆಯೆಂದು ಮ್ಯಾಥ್ಯೂ ಹೇಳುತ್ತಾನೆ. ಓಬಿಯ ಊರಿನ ಇನ್ನೂ ಅನೇಕರು ಓಬಿಯ ಬಗ್ಗೆ ಹೆಚ್ಚು ಪ್ರೀತಿಯಿಂದ ಮಾತನಾಡುತ್ತಾರೆ. ಓಬಿ ತನ್ನ ಅಪ್ಪ–ಅಮ್ಮಂದಿರೆಲ್ಲ ವಯಸ್ಸಾಗಿ ನಿತ್ರಾಣರಾಗಿದ್ದನ್ನು ಕಂಡು ಸಂಕಟಪಡುತ್ತಾನೆ. ಅವರಿಗೆ ತಿನ್ನಲು ಸರಿಯಾದ ಆಹಾರವಿಲ್ಲದಿರುವುದೇ ಇದಕ್ಕೆ ಕಾರಣ ಎಂದು ಅವನಿಗೆ ಗೊತ್ತಾಗುತ್ತದೆ. ಚರ್ಚಿನಲ್ಲಿ ಮೂವತ್ತು ವರ್ಷಗಳ ಸೇವೆ ಬಳಿಕ ನಿವೃತ್ತನಾದ ತನ್ನ ಅಪ್ಪನಿಗೆ ಕೇವಲ ಎರಡು ಪೌಂಡುಗಳ ಪಿಂಚಣಿ ಸಿಗುತ್ತಿರುವುದು ಅತ್ಯಂತ ಅವಮಾನಕರ ವೆಂದು ಓಬಿ ಭಾವಿಸುತ್ತಾನೆ.

ಓಬಿಯನ್ನು ಕಲೋನಿಯಲ್ ವ್ಯವಸ್ಥೆಯ ಆಡಳಿತ ಸೇವೆಗೆ ಆರಿಸಲಾಗುತ್ತದೆ. ಆತ ಸ್ಕಾಲರ್‌ಶಿಪ್ ಕಮೀಷನ್‌ನ ಕಾರ್ಯದರ್ಶಿಯಾಗಿ ಲಾಗೋಸ್ ಎಂಬ ಪಟ್ಟಣದಲ್ಲಿ ಕೆಲಸಕ್ಕೆ ಹಾಜರಾಗುತ್ತಾನೆ. ಆ ಪಟ್ಟಣ ಕಲೋನಿಯಲ್ ಆಡಳಿತ ವ್ಯವಸ್ಥೆಯ ಪರಿ ಣಾಮವಾಗಿ ಬಹಳ ಬದಲಾಗಿದೆ. ಅದು ಈಗ ಕಾರು ಬಂಗಲೆಗಳ ನಗರ. ಓಬಿ ತನ್ನ ಹುದ್ದೆಯ ನಿರೀಕ್ಷೆಯಂತೆ ಕಾರು ಬಂಗಲೆಗಳನ್ನೆಲ್ಲಾ ಪಡೆದುಕೊಳ್ಳುತ್ತಾನೆ. ಅವನ ಖರ್ಚು–ವೆಚ್ಚಗಳು ಹೆಚ್ಚಾಗುತ್ತವೆ. ತನ್ನ ಹುದ್ದೆ ನಿರೀಕ್ಷಿಸುವಷ್ಟು ಮಜವಾಗಿರಲು ಸಾಧ್ಯವಾಗದ ಅವನಿಗೆ ಆರ್ಥಿಕ ಅಡಚಣೆಗಳು ಶುರುವಾಗುತ್ತವೆ. ತನ್ನ ಸ್ನೇಹಿತರ ಬಳಿ ಸಾಲ ತೆಗೆದುಕೊಂಡು ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳುತ್ತಾನೆ. ತಾನು ವಹಿಸಿ ಕೊಂಡಿರುವ ಹುದ್ದೆಯ ನೆಪದಲ್ಲಿ ಆತ ಅನೇಕ ಪ್ರಲೋಭನೆಗಳಿಗೆ ತನ್ನನ್ನೇ ಒಡ್ಡಿಕೊಳ್ಳ ಬೇಕಾಗುತ್ತದೆ. ಆದರೆ ಆ ಎಲ್ಲಾ ಆಮಿಷಗಳನ್ನು ಮೀರಿ ನಿಲ್ಲುವಷ್ಟು ಛಾತಿ ಮತ್ತು ಆದರ್ಶವನ್ನು ಓಬಿ ಪಡೆದುಕೊಂಡಿದ್ದಾನೆ. ಕಲೋನಿಯಲ್ ವ್ಯವಸ್ಥೆಯ ಬಿಳಿಯರು, ಆಫ್ರಿಕಾದವರು ಅತ್ಯಂತ ಭ್ರಷ್ಟರು ಎಂದು ತಿಳಿದುಕೊಂಡಿದ್ದನ್ನು ಸುಳ್ಳಾಗಿಸಲು ಓಬಿ

ಪ್ರಯಂತ್ನಿಸುತ್ತಾನೆ. ಈಗ ಓಬಿಗೆ ಕ್ಲಾರಾ ಎಂಬ ಹುಡುಗಿಯ ಪರಿಚಯವಾಗಿದೆ. ಓಬಿಯ ಆದರ್ಶಗಳಿಗೆ, ಅವನ ಸ್ವಾನದ ನೈತಿಕತೆಯನ್ನು ಕಾಪಾಡುವಲ್ಲಿ ಬೆಂಬಲವಾಗಿ ಅವಳಿದ್ದಾಳೆ. ಅವಳನ್ನು ಮದುವೆಯಾಗಬೇಕೆಂಬ ಹಠ ಓಬಿ ಒಕೊಂಕೊಗೆ. ಆದರೆ ಅವಳು ತಾನು 'ಒಸು' (Out caste) ಎಂದು ಹೇಳಿ ಅವನನ್ನು ದಿಗ್ಭ್ರಮೆಗೊಳಿಸುತ್ತಾಳೆ. ಆದರೂ ಓಬಿ ತಾನು ಅವಳನ್ನೇ ಮದುವೆಯಾಗುವುದಾಗಿ ಹೇಳುತ್ತಾನೆ. ತನ್ನ ಅಮ್ಮ ಇದನ್ನು ಸಹಿಸುವುದಿಲ್ಲವೆಂದು ಓಬಿಗೆ ಗೊತ್ತು. ಬೇರೆಯವರ ವಿರೋಧವನ್ನು ಆತ ಲೆಕ್ಕಿಸದೇ ಇರಲು ಸಾಧ್ಯ. ಆದರೆ ಓಬಿ ತನ್ನ ತಾಯಿಗೆ ಹೆಚ್ಚು ಹತ್ತಿರವಾದವನು. ಅವಳನ್ನು ಒಪ್ಪಿಸಲು ಸಾಧ್ಯವಾದರೆ ಕ್ಲಾರಾಳನ್ನು ಮದುವೆಯಾಗಬಹುದೆಂದು ಓಬಿ ತಿಳಿಯುತ್ತಾನೆ. ಆದರೆ ಕ್ಲಾರಾಳಿಗೆ ಇದು ಅಸಾಧ್ಯವೆಂದು ಗೊತ್ತು.

ಹೀಗಾಗಿ ಓಬಿ ಕಲೋನಿಯಲ್ ವ್ಯವಸ್ಥೆಯ ಎರಡು ಒತ್ತಡಗಳಲ್ಲಿ ಸಿಕ್ಕಿ ನರಳುತ್ತಿದ್ದಾನೆ. ಒಂದು ಕಡೆ ತನ್ನ ಆಡಳಿತ ಸೇವೆಯ ದ್ವಂದ್ವಾತ್ಮಕ ಸನ್ನಿವೇಶಗಳು; ಇನ್ನೊಂದು ಕಡೆ ಕ್ಲಾರಾಳನ್ನು ಮದುವೆಯಾಗಲು ಅಡ್ಡಿಪಡಿಸುತ್ತಿರುವ ಆತನ ಸಂಪ್ರದಾಯಿಕನಿಷ್ಠೆ. ತನ್ನ ಆಡಳಿತದ ಒತ್ತಡಗಳನ್ನು ಪರಿಹರಿಸಿಕೊಳ್ಳಲು ಓಬಿ ತನ್ನ ಆದರ್ಶಗಳನ್ನು ಕೈಬಿಡಬೇಕಾಗುತ್ತದೆ. ಕ್ಲಾರಾಳನ್ನು ಪಡೆಯಲು ತನ್ನ ತಾಯಿಯ ಪ್ರೀತಿಯನ್ನು, ತನ್ನ ಜನಾಂಗದವರು ತನ್ನಲ್ಲಿರಿಸಿರುವ ನಿಷ್ಠೆಯನ್ನು ಕಳೆದುಕೊಳ್ಳಬೇಕಾಗುತ್ತದೆ. ಓಬಿಯ ಬದುಕಿನಲ್ಲಿ ಇದೊಂದು ನಿರ್ಣಾಯಕ ಹಂತ.

ತನ್ನ ವ್ಯವಹಾರಿಕ ಜಗತ್ತಿನಲ್ಲಿ ಸಹ ಓಬಿ ಸಂತೋಷದಿಂದ ಇರಲು ಸಾಧ್ಯವಿಲ್ಲ. ಓಬಿಯ ಮತ್ತು 'ಯುಮೋಫಿಯಾ ಪ್ರಗತಿಪರ ಒಕ್ಕೂಟ'ದ ಸಂಬಂಧ ಅಷ್ಟೇನೂ ಚೆನ್ನಾಗಿಲ್ಲ. ಏಕೆಂದರೆ ಆ ಒಕ್ಕೂಟದ ಅಧ್ಯಕ್ಷ ಬಹಿರಂಗವಾಗಿ ಇವನ ಮತ್ತು ಕ್ಲಾರಾಳ ಮಧ್ಯೆ ಇರುವ ಸಂಬಂಧವನ್ನು ಪ್ರಶ್ನಿಸುತ್ತಾನೆ. ತನ್ನ ವೈಯಕ್ತಿಕ ವಿಚಾರಗಳಲ್ಲಿ ತಲೆಹಾಕಬಾರದೆಂದು ಓಬಿ ಆತನಿಗೆ ಹೇಳುತ್ತಾನೆ. ಇದಕ್ಕಾಗಿ ಓಬಿ ತನ್ನ ವಿದ್ಯಾಭ್ಯಾಸದ ಸಮಯದಲ್ಲಿ ತಾನು ಆ ಒಕ್ಕೂಟದಿಂದ ಪಡೆದುಕೊಂಡ ಸಾಲವನ್ನು ತಕ್ಷಣವೇ ತೀರಿಸಿಬಿಡುವುದಾಗಿ ಹೇಳುತ್ತಾನೆ. ತನ್ನ ಆಫೀಸಿನಲ್ಲಿ ಕೂಡ ಅವನ ಬಾಸ್ ಮಿ. ಗ್ರೀನ್ ಜತೆ ಸಂಬಂಧ ಅಷ್ಟೇನೂ ಚೆನ್ನಾಗಿಲ್ಲ. ತಾನು ಸಂದರ್ಶನಕ್ಕೆ ಹಾಜರಾದಾಗ ಬಿಳಿಯರ ಬಗ್ಗೆ ಅಹಂಕಾರದಿಂದ ಮಾತಾಡಿದ್ದ. ಆದರೆ ಓಬಿಗೆ ತನ್ನ ಆಫೀಸಿನಲ್ಲಿ ಒಬ್ಬ ಇಂಗ್ಲಿಷ್ ಕ್ಲರ್ಕ್ ಎದುರು ಬ್ರಿಟೀಷರ ವಿರುದ್ಧ ಮಾತಾಡಲು ಸಾಧ್ಯವಾಗುವುದಿಲ್ಲ. 'ಯುಮೋಫಿಯಾ ಪ್ರಗತಿಪರ ಒಕ್ಕೂಟ'ದ ಅಧ್ಯಕ್ಷ ಓಬಿ ಮೀಟಿಂಗ್‌ಗಳಿಗೆ ಬರುವಾಗ ಸೂಟ್ ಧರಿಸಿ ಬರಬೇಕೆಂದು ನಿರೀಕ್ಷಿಸುತ್ತಾನೆ. ಆದರೆ ಓಬಿಗೆ ಇದು ಸಾಧ್ಯವಿಲ್ಲ. ಆತ ಇದೇ ತರಹದ ಕಲೋನಿಯಲ್ ಮನಸ್ಥಿತಿ ವಿರುದ್ಧ ಸಾಧ್ಯಂತ ಇರಲು ಬಯಸುತ್ತಾನೆ.

ಆ ಒಕ್ಕೂಟದ ಆಶ್ರಯದಲ್ಲಿ ಓಬಿ ಮಾತಾಡುವಾಗ, "ವಿದ್ಯಾರ್ಜನೆ ಮಾಡುವುದು ಒಳ್ಳೆಯ ಸಂಬಳ ತರುವ ಉದ್ಯೋಗವನ್ನು ಪಡೆಯುವ ಉದ್ದೇಶಕ್ಕಾಗಿ ಅಲ್ಲ; ದೇಶ ಸೇವೆಗೆ ಮಾತ್ರ; ನಮ್ಮ ದೇಶ ಸ್ವಾತಂತ್ರ್ಯದ ಹಂಬಲದಲ್ಲಿರುವಾಗ, ನಿಜವಾದ ದೇಶಸೇವೆ ಮಾಡುವವರು ನಮಗೆ ಬೇಕಾಗಿದ್ದಾರೆ." (The African Trilogy, p. 200) ಎಂದು ಓಬಿ ಹೇಳುತ್ತಾನೆ. ಆದರೆ ಓಬಿಯೇ ತನ್ನ ವಿದ್ಯಾಭ್ಯಾಸವನ್ನು, ತನ್ನ ಉದ್ಯೋಗವನ್ನು, ಆ ದಿಸೆಯಲ್ಲಿ ಯೋಚನೆ ಮಾಡುವುದಕ್ಕೆ ಬಳಸದೇ, ತನ್ನ ವೈಯಕ್ತಿಕ ಲಾಲಸೆಗಳನ್ನು ಪೂರೈಸಿಕೊಳ್ಳುವುದಕ್ಕೆ ಉಪಯೋಗಿಸಿಕೊಳ್ಳುತ್ತಾನೆ.

ಬಿಳಿಯರ ಆಡಳಿತ ವ್ಯವಸ್ಥೆ ಆಫ್ರಿಕದ ಜನಾಂಗದ ಸಾಂಸ್ಕೃತಿಕ ನಡಾವಳಿಗಳನ್ನು ಬದಲಿಸಲು ಎಂದೂ ಸಾಧ್ಯವಾಗುವುದಿಲ್ಲ. ಏಕೆಂದರೆ ಆಫ್ರಿಕದ ಜನ ಬಿಳಿಯರನ್ನು ಒಪ್ಪಿಕೊಂಡಿದ್ದು, ಆರ್ಥಿಕ ಕಾರಣಗಳಿಗಾಗಿ ಮಾತ್ರ. ಇಂಗ್ಲಿಷ್ ವಿದ್ಯಾಭ್ಯಾಸ ಕೂಡ ಹಣ ಗಳಿಕೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ ಎಂದು ಅವರು ತಿಳಿಯುತ್ತಾರೆ. ಓಬಿ ಕೂಡ ಇದೇ ರೀತಿಯವನು. ಆದರೆ ಅವನಿಗೆ ಆದರ್ಶವಾದದ ಸೋಗು ಇದೆ.

ಆಫ್ರಿಕಾದ ಜನ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದಿದ ಮೇಲೂ ತಮ್ಮ ಜನಾಂಗದ ಮೇಲು ಕೀಳು ಭಾವನೆಯಿಂದ ಮುಕ್ತರಾಗುವುದಿಲ್ಲ. ಓಬಿಯ ತಂದೆ ಇಸ್ಸಾಕ್ ಒಕೊಂಕೊ ಧರ್ಮಗುರು (Catechist) ಆಗಿದ್ದರೂ, ಕ್ರಿಶ್ಚಿಯನ್ ಧರ್ಮವನ್ನು ಮನಸಾರೆ ಬೋಧಿಸುತ್ತಿದ್ದರೂ ಆತನಿಗೆ ಕ್ರಿಶ್ಚಿಯನ್ ಧರ್ಮಕ್ಕೆ ಪರಿವರ್ತಿತವಾದವರೆಲ್ಲ ಹೇಗೆ ಸಮಾನರು ಎಂಬುದು ಅರ್ಥವಾಗುವುದಿಲ್ಲ. ಅವರೆಲ್ಲಾ ಹೊಸ ಧರ್ಮಕ್ಕೆ ಹೊಸಬರಾಗಿಯೇ ಉಳಿಯುತ್ತಾರೆ ಏಕೆಂದರೆ ಮೂಲಭೂತವಾಗಿ ಅವರಿಗೆ ತಮ್ಮ ಭೂತವನ್ನು ಮರೆಯಲಿಕ್ಕಾಗುವುದಿಲ್ಲ. ಅವರು ಬಿಟ್ಟುಕೊಟ್ಟ ಸಂಸ್ಕೃತಿ ಅವರನ್ನು ಯಾವಾಗಲೂ ಸಾಸ್ಪಾಲ್ಜಿಕ್ ಆಗಿ ಬಾಧಿಸುತ್ತಿರುತ್ತದೆ. ಆದ್ದರಿಂದಲೇ ಓಬಿ ಕ್ಲಾರಾಳನ್ನು ಮದುವೆಯಾಗುವುದು ಅವರಿಗೆ ಒಂದು ಅಸಂಸ್ಕೃತ ನಡವಳಿಕೆಯಾಗಿ ಕಾಣುತ್ತದೆ. ಕ್ಲಾರಾ ಮತಾಂತರ ಹೊಂದಿದ್ದರೂ ಅವಳು ಕೀಳು ದರ್ಜೆಯವಳೆ, ಮೇಲು ವರ್ಗದ ಓಬಿ ಅವಳನ್ನು ಮದುವೆಯಾಗುವುದು ಅಸಾಧ್ಯ. ಕ್ಲಾರಾ ಕೂಡ ತಾನು ಕೀಳು ಎಂದೇ ಭಾವಿಸುತ್ತಾಳೆ. ಅವಳಲ್ಲಿ ಈ ವರ್ಗ ಮತ್ತು ಜಾತಿಯ ಪ್ರಜ್ಞೆ ಎಷ್ಟು ಆಳವಾಗಿ ಬೇರೂರಿದೆಯೆಂದರೆ ಅವಳಿಗೆ ಓಬಿ ನೀಡಿದ ನಿಶ್ಚಿತಾರ್ಥದ ಉಂಗುರವನ್ನು ಓಬಿಗೆ ವಾಪಾಸ್ಸು ಕೊಡಲು ಯತ್ನಿಸುತ್ತಾಳೆ. ಆದರೆ ಒಕೊಂಕೊನ ವಿದ್ಯಾಭ್ಯಾಸ ಆತ ಇವುಗಳನ್ನೆಲ್ಲಾ ಮೀರಿ

ನಿಲ್ಲುವಂತೆ ಮಾಡುತ್ತದೆ. ಆದರೆ ಆಳದಲ್ಲಿ ಓಬಿ ತನ್ನ ಸಂಸ್ಕೃತಿಯ ಬಗ್ಗೆ ಭಯಗ್ರಸ್ತನಾಗಿಯೇ ಉಳಿದಿರುತ್ತಾನೆ.

ಓಬಿ ಕ್ಲಾರಾಳನ್ನು ಮದುವೆಯಾಗಲಿರುವುದು ಈಗಾಗಲೇ ಉಮೋಫಿಯಾವನ್ನು ತಲುಪಿದೆ. ಅವನ ಮನೆಯವರೆಲ್ಲ ಈ ಬಗ್ಗೆ ಆಶ್ಚರ್ಯಚಕಿತರಾಗಿದ್ದಾರೆ. ಅವರಿಗೆ ಇದು ಸ್ವಲ್ಪವೂ ಇಷ್ಟವಿಲ್ಲ. ಅವನ ಅಪ್ಪ ಇಸ್ಯಾಕ್, ಅವನ ತಾಯಿ ಸ್ಥಿತಿ ಅತ್ಯಂತ ಗಂಭೀರವಾಗಿದೆಯೆಂದು, ಕೂಡಲೇ ಬರುವಂತೆಯೂ ಕಾಗದ ಬರೆದಿದ್ದಾನೆ. ತಕ್ಷಣ ಓಬಿ ಊರಿಗೆ ಹೊರಟು ಬರುತ್ತಾನೆ. ತನ್ನ ತಾಯಿ ಸಾಯುತ್ತಿದ್ದಾಳೆಂಬ ಸುದ್ದಿ ಅವನ ಮನಸ್ಸನ್ನು ಕಲಕಿ ಬಿಟ್ಟಿದೆ. ಮನೆಗೆ ಬಂದವನೆ ತನ್ನ ಅಮ್ಮ ಮಲಗಿದ ಕೋಣೆಗೆ ನುಗ್ಗುತ್ತಾನೆ.

ಆ ಕೋಣೆಯ ವಿವರಗಳ ಬಗ್ಗೆ ಅಚಿಬೆ ನಮ್ಮ ಗಮನ ಸೆಳೆಯುತ್ತಾರೆ: "ತಾಯಿಯ ಕೋಣೆ ಅನೇಕ ಪ್ರಾಪಂಚಿಕ ಮತ್ತು ಲೌಕಿಕ ವಸ್ತುಗಳಿಂದ ತುಂಬಿ ಹೋಗಿತ್ತು. ಒಂದು ಸ್ಟೂಲಿನ ಮೇಲೆ ಅವಳ ಬಟ್ಟೆಯ ಟ್ರಂಕ್‌ವೊಂದನ್ನು ಇಟ್ಟಿದ್ದರು. ಕೋಣೆಯ ಇನ್ನೊಂದು ಬದಿಯಲ್ಲಿ ಕಪ್ಪು ಸಾಮಾನು ತಯಾರಿಸಲು ಅವಳು ಉಪಯೋಗಿಸುತ್ತಿದ್ದ ಮಡಕೆಗಳಲ್ಲಿ ಇಟ್ಟಿದ್ದ ತಾಳೆಎಣ್ಣೆ ಗಟ್ಟಿಯಾಗಿ ಹೋಗಿತ್ತು. ಅವಳ ಬಟ್ಟೆಯ ಟ್ರಂಕ್ ಮತ್ತು ಈ ಮಡಕೆಗಳ ಮಧ್ಯೆ ಇಡೀ ಕೋಣೆಯ ಉದ್ದದಷ್ಟು ಜಾಗವಿತ್ತು." ಈ ವಿವರಣೆಗಳು ಒಂದು ಸಂಸ್ಕೃತಿಯ ವಿವರಣೆಗಳಾಗಿವೆ. ಓಬಿಯ ಅಮ್ಮ ಸೋಪು ತಯಾರಿಸುತ್ತಿದ್ದುದು ಆ ಸಂಸ್ಕೃತಿಯ ಗತಿ ಬದಲಾಗುತ್ತಿರುವುದರ ಒಳನೋಟವನ್ನು ಹೊಳೆಯಿಸುತ್ತದೆ. ಹೀಗಾಗಿ ಅಚಿಬೆಯ ಕಲಾತ್ಮಕತೆ ಸಂಸ್ಕೃತಿಯ ವರ್ಣನೆಯಿಂದಲೇ ಸಂಭವಿಸಬೇಕು. ಆ ವರ್ಣನೆಗಳನ್ನು ಇನ್ನೂ ಗಮನಿಸಿ : "ಇಷ್ಟೇ ಅಲ್ಲದೆ ಆ ಕೋಣೆಯಲ್ಲಿ ಹಿಂದಿನ ವರ್ಷದ ಕೊಕೋ ಮತ್ತು ಕೊಬ್ಬರಿ ಚೂರುಗಳನ್ನು ಬಾಳೆಎಲೆಗಳಲ್ಲಿ ಸುತ್ತಿ ಖಾಲಿಯಾದ ಎಣ್ಣೆ ಮಡಕೆಗಳಲ್ಲೂ, ತಾಳೆಬೂದಿಯನ್ನು ವೃತ್ತಾಕಾರದ ಡಬ್ಬಿಗಳಲ್ಲೂ, (ಈ ಡಬ್ಬಿಗಳಲ್ಲಿ ಬಿಸ್ಕತ್‌ಗಳನ್ನು ಇಡುತ್ತಿದ್ದರು ಎಂದು ಸ್ವಲ್ಪ ದೊಡ್ಡವರಾದ ಮಕ್ಕಳು ಓಬಿಗೆ ಹೇಳಿದರು) ಶೇಖರಿಸಿಟ್ಟಿದ್ದರು. ಈ ಡಬ್ಬಿಗಳು ತಮ್ಮ ದ್ವಿತೀಯಾವಸ್ಥೆಯಲ್ಲಿ ಐದು ತೂತುಗಳಾಗುವವರೆಗೆ ನೀರಿನ ಡಬ್ಬಿಗಳಾಗಿ ಉಪಯೋಗಿಸಲ್ಪಡುತ್ತಿದ್ದವು. ಈಗ ಕಾಗದದ ರಕ್ಷಾಕವಚದೊಂದಿಗೆ ಆ ಡಬ್ಬಿಗಳಲ್ಲಿ ಬೂದಿ ತುಂಬಲಾಗಿದೆ". (The African Trilogy, p 276).

ಒಂದು ದೇಶಿಯ ಸಂಸ್ಕೃತಿಯ ಒಳನೋಟಗಳನ್ನು, ಬದಲಾವಣೆಯ ಗತಿಯಲ್ಲಿರುವ ಆ ಸಂಸ್ಕೃತಿಯ ತಲ್ಲಣಗಳನ್ನು ಈ ವಿವರಗಳು ಒಟ್ಟಾಗಿ ದಾಖಲಿಸುತ್ತವೆ. ಇಷ್ಟೇ ಅಲ್ಲದೆ, ಓಬಿಯ ಮನೆತನದ ಆರ್ಥಿಕ ಸ್ಥಿತಿಗತಿಗಳನ್ನು ಇದು ಚಿತ್ರಿಸುತ್ತದೆ.

ಓಬಿ, ಬಾವುಲಿಯ ರೆಕ್ಕೆಯಂತಾದ ತನ್ನ ತಾಯಿಯ ದೇಹವನ್ನು ನೋಡುತ್ತಿದ್ದ ಹಾಗೆ ಅತಿಯಾಗಿ ನೊಂದುಕೊಂಡ. ಆಕೆ ಇವನನ್ನು ಕೇಳುತ್ತಾಳೆ : 'ನೀನು ಈ ಹಿಂದೆಯೇ ಬರಬೇಕಾಗಿತ್ತು'. ಓಬಿಯ ಅಮ್ಮ ಕೆಲವು ದಿನ ಆಸ್ಪತ್ರೆಯಲ್ಲಿದ್ದು ಮನೆಗೆ ವಾಪಸ್ಸಾಗಿರುತ್ತಾಳೆ. ಅವಳ ಸ್ಥಿತಿ ಬಹಳ ಉಲ್ಬಣಗೊಂಡಾಗ ಅವಳನ್ನು ಆಸ್ಪತ್ರೆಗೆ ಸೇರಿಸಲಾಗಿತ್ತು. ಆ ಸಂದರ್ಭದಲ್ಲಿ ಆಕೆ ಓಬಿಯ ಬರುವನ್ನು ನಿರೀಕ್ಷಿಸಿದ್ದಳು. ಆಕೆ ಓಬಿಯ ಹತ್ತಿರ ಆತನ ಕೆಲಸದ ವಿವರಗಳನ್ನು ಕೇಳಿ ತಿಳಿದುಕೊಳ್ಳುತ್ತಾಳೆ. ಆತ ಒಬ್ಬಳು ಕೀಳು ಜಾತಿಯ ಹುಡುಗಿಯನ್ನು ಮದುವೆಯಾಗಲಿದ್ದಾನೆ ಎಂಬ ಸುದ್ದಿ ಅವಳನ್ನೂ ತಲುಪಿದೆ. ಕ್ಲಾರಾಳ ಬಗ್ಗೆ ಓಬಿಯ ಅಪ್ಪ ಅಲ್ಲಿಯೇ ಪ್ರಸ್ತಾಪಿಸಿ, 'ನೀನು ಅವಳನ್ನು ಮದುವೆಯಾಗಲು ಸಾಧ್ಯವಿಲ್ಲ' ಎಂದು ಖಡಾಖಂಡಿತವಾಗಿ ಹೇಳುತ್ತಾನೆ. ಆದರೆ 'ನಾವೆಲ್ಲ ಕ್ರಿಶ್ಚಿಯನ್ನರು' ಎಂದು ಓಬಿ ವಾದಿಸುತ್ತಾನೆ. 'ನಾವು ಕ್ರಿಶ್ಚಿಯನ್ನರಾಗಿರಬಹುದು ; ಆದರೆ ಕೀಳು ಜಾತಿಯವಳನ್ನು ಮದುವೆಯಾಗಲು ಸಕಾರಣವಲ್ಲ' ಅದು ಎಂದು ಇಸ್ಸಾಕ್ ಹೇಳುತ್ತಾನೆ. 'ಮದುವೆ ವಿಚಾರ ಇನ್ನೂ ಗಹನ ವಾದದು', ಎಂದು ತಿಳಿಸುತ್ತಾನೆ. ಇಸ್ಸಾಕ್ ಮುಂದುವರಿದು ಕೇಳುತ್ತಾನೆ ; 'ಯಾರು ನಿನ್ನ ಹೆಣ್ಣುಮಕ್ಕಳನ್ನು ಮುಂದೆ ಮದುವೆಯಾಗುತ್ತಾರೆ ? ನಿನ್ನ ಗಂಡು ಮಕ್ಕಳು ಯಾವ ಹೆಣ್ಣುಮಕ್ಕಳನ್ನು ಮದುವೆಯಾಗಲು ಸಾಧ್ಯವಾಗುತ್ತದೆ ? ಆ ಬಗ್ಗೆ ಯೋಚಿಸು ; ನಾವೆಲ್ಲರೂ ಕ್ರಿಶ್ಚಿಯನ್ನರು ನಿಜ. ಆದರೆ ನಾವು ನಮ್ಮ ಮಕ್ಕಳನ್ನೇ ಮದುವೆಯಾಗಲು ಆಗುವುದಿಲ್ಲ'. (The African Trilogy, p. 282)

'ಅವೆಲ್ಲವೂ ಬದಲಾಗುತ್ತದೆ ; ಇನ್ನು ಹತ್ತು ವರ್ಷಗಳಲ್ಲಿ ಇವು ಯಾವುವೂ ಹೀಗಿರುವುದಿಲ್ಲ'. (The African Trilogn, p 282) ಎಂದು ಓಬಿ ಹೇಳು ತ್ತಾನೆ. ಆದರೆ ಇಸ್ಸಾಕ್ ಸಮಾಧಾನಗೊಳ್ಳುವುದಿಲ್ಲ. ಅವನ ಅಮ್ಮ ಕೂಡ ಓಬಿ ಕ್ಲಾರಾಳನ್ನು ಮದುವೆಯಾಗಬಾರದೆಂದು ಅವನನ್ನು ಭಾವನಾತ್ಮಕವಾಗಿ ಬಂಧಿಸು ತ್ತಾಳೆ.

ಆದರೆ ಕ್ಲಾರಾಳು ಮತಾಂತರ ಹೊಂದಿರುವುದರಿಂದ ಅವಳನ್ನು ಮದುವೆಯಾಗಲು ಏಕೆ ಸಾಧ್ಯವಾಗುವುದಿಲ್ಲ ಎಂಬುದು ಓಬಿಗೆ ಅರ್ಥವಾಗುವುದಿಲ್ಲ. ಇಂಗ್ಲಿಷ್ ವಿದ್ಯಾ ಭ್ಯಾಸ ಅಂತಹ ವಿಚಾರಗಳನ್ನು ಅವನಲ್ಲಿ ಸಾತತ್ಯಗೊಳಿಸಿದೆ. ಅವನ ಸ್ನೇಹಿತ ಜೋಸೆಫ್ ಹೇಳುತ್ತಾನೆ : 'ಭವಿಷ್ಯದಲ್ಲಿ ನಾವೆಲ್ಲ ನಾಗರೀಕರಾದಾಗ, ಯಾರು ಯಾರನ್ನು ಬೇಕಾದರೂ ಮದುವೆಯಾಗಬಹುದು'. ಆದರೆ ಆತ ಅಂತಹ ಸಮಕಾಲೀನ ಸಾಧ್ಯತೆ ಗಳನ್ನು ತಳ್ಳಿ ಹಾಕುತ್ತಾನೆ. ಕ್ಲಾರಾಳನ್ನು ಮದುವೆಯಾಗಲು ಓಬಿಯನ್ನು ಯಾರು ಬೆಂಬಲಿಸುವುದಿಲ್ಲ. 'ಯುಮೋಫಿಯಾ ಪ್ರಗತಿಗರ ಒಕ್ಕೂಟ' ಓಬಿಯನ್ನು ವಿರೋಧಿಸು ತ್ತದೆ. ಓಬಿಯ ಇನ್ನೊಬ್ಬ ಸ್ನೇಹಿತ ಕ್ರಿಸ್ಟೊಫರ್ ಹೇಳುತ್ತಾನೆ : 'ನಾವು ನಮ್ಮ

ಸಂಪ್ರದಾಯವನ್ನು ಕಡೆಗಣಿಸುವ ಹಂತವನ್ನು ತಲುಪೇ ಇಲ್ಲ'. ಹೀಗಾಗಿ ಒಂದು ವ್ರತನಿಷ್ಠ ಸಮಾಜದಲ್ಲಿ ಐರೋಪ್ಯ ಸಂಸ್ಕೃತಿಯ ಆಧುನೀಕರಣವನ್ನು ಒಂದು ಹಂತದಲ್ಲಿ ಒಪ್ಪಿಕೊಂಡರೂ ಜನರು ಅದನ್ನು ಇಡಿಯಾಗಿ ಸ್ವೀಕರಿಸುವುದಿಲ್ಲ. ಅಂತಹ ಸಂಸ್ಕೃತಿಯ ಬಗ್ಗೆ ದೇಶಿಯ ಜನರಿಗೆ ಯಾವತ್ತೂ ಅನುಮಾನಗಳು, ಸಂಕೋಚಗಳು ಇದ್ದೇ ಇರುತ್ತದೆ. ಓಬಿ ಅಂತಹ ಸಂಸ್ಕೃತಿಯಿಂದ ದೂರವಾಗಿ ಸಂಪೂರ್ಣವಾಗಿ ಪಾಶ್ಚಾತ್ಯನು ಆಗದೆ, ತನ್ನ ಸಂಸ್ಕೃತಿಗೇ ಆತುಕೊಳ್ಳದೆ ಅತ್ಯಂತ ತೀವ್ರತರವಾದ ಒಂದು ತಾತ್ವಿಕ ಸಂಘರ್ಷಕ್ಕೆ ಒಳಗಾಗುತ್ತಾನೆ. ಹಾಗೆ ನೋಡಿದರೆ, ಕಲೋನಿಯಲ್ ಆಡಳಿತ ವ್ಯವಸ್ಥೆಯ ಯಾವುದೇ ಓರಿಯಂಟಲ್ ಸಂಸ್ಕೃತಿಯ ವಿದ್ಯಾವಂತನ ಗೊಂದಲಗಳಿವು.

ಕೊನೆಗೂ ಓಬಿ ಕ್ಲಾರಾಳನ್ನು ಮದುವೆಯಾಗಲೂ ಸಾಧ್ಯವಾಗುವುದಿಲ್ಲ. ಆತ ಭಾವನಾತ್ಮಕವಾಗಿ ತನ್ನ ಸಂಸ್ಕೃತಿಗೆ, ತಾಯಿಗೆ ಹತ್ತಿರ ; ವೈಚಾರಿಕವಾಗಿ ಸಂಪೂರ್ಣವಾಗಿಯಲ್ಲದಿದ್ದರೂ, ಆತ ಸ್ವಲ್ಪ ಮಟ್ಟಿಗೆ ಪಾಶ್ಚಾತ್ಯ. ಏಕೆಂದರೆ ಆತ ತನ್ನ ಸಂಸ್ಕೃತಿಯ ಕೆಲವು ಇತ್ಯಾತ್ಮಕ ಅಂಶಗಳನ್ನು ಬಿಟ್ಟುಕೊಡುವುದಿಲ್ಲ. ಆತ ಊಟ ಮಾಡುವಾಗ ಎಂದೂ ಫೋರ್ಕ್ ಉಪಯೋಗಿಸುವುದಿಲ್ಲ.

ಓಬಿ ಕೊನೆಯಲ್ಲಿ ಎಲ್ಲವನ್ನೂ ಕಳೆದುಕೊಳ್ಳುತ್ತಾನೆ : ತನ್ನ ತಾಯಿ, ಕ್ಲಾರಾ, ತನ್ನ ಜನ ಎಲ್ಲರನ್ನೂ. ಅತ್ಯಂತ ಆದರ್ಶವಾದಿಯಾಗಿ ತನ್ನ ಗೊಂದಲಗಳನ್ನು ಮೀರಿ ನಿಲ್ಲುವ ಯತ್ನದಲ್ಲಿರಬೇಕಾದರೆ ಓಬಿ ಅವುಗಳಿಗೆ ಬಲಿಯಾಗುತ್ತಾನೆ. ಲಂಚ ಸ್ವೀಕರಿಸಿದ್ದಕ್ಕಾಗಿ ತನ್ನ ಕೆಲಸ ಕಳೆದುಕೊಂಡು ಜೈಲಿಗೆ ಹೋಗುತ್ತಾನೆ. 'ಆತ ಏಕೆ ಹೀಗೆ ಮಾಡಿದ ?' ಅನ್ನುವ ಅಚ್ಚರಿಯ ಪ್ರಶ್ನೆ, ಪ್ರಶ್ನೆಯಾಗಿಯೇ ಉಳಿದುಕೊಳ್ಳುತ್ತದೆ. ಓಬಿ ತಾನು ಲಂಡನ್ನಿನಲ್ಲಿ ಇದ್ದಾಗ ಅವನ ಆದರ್ಶವಾದಕ್ಕೆ ಕನ್ನಡಿ ಹಿಡಿಯುವಂತಹ ಒಂದು ಕವನ ರಚಿಸಿದ್ದ. ತನ್ನ ಆದರ್ಶಗಳೆಲ್ಲ ನೆಲಸಮವಾದ ಸಂದರ್ಭದಲ್ಲಿ ಆ ಕವನ ಅವನಿಗೆ ಸಿಗುತ್ತದೆ. ಅದನ್ನು ಓದಿ ಆತ ಹರಿದು ಹಾಕುತ್ತಾನೆ. ಅದು ತನ್ನ ಆದರ್ಶಗಳ ದುರಂತದ ಕಥೆಯಾಗಿ ಅವನಿಗೆ ಕಾಣುತ್ತದೆ.

'No Longer at Ease' ಕಾದಂಬರಿಯಲ್ಲಿ ಒಟ್ಟಾರೆಯಾಗಿ ಕಲೋನಿಯಲ್ ಮನೋಧರ್ಮದ ಆದರ್ಶಪ್ರಿಯತೆಯನ್ನು, ಒಂದು ದೇಶೀ ಜನಾಂಗ ತನ್ನ ಅಪಕ್ವ ಮನಸ್ಥಿತಿಯಲ್ಲಿ ಐರೋಪ್ಯ ಸಂಸ್ಕೃತಿಯ ಆಧುನೀಕರಣವನ್ನು ಒಪ್ಪಿಕೊಳ್ಳುವ ವಿರೋಧಾಭಾಸವನ್ನು, ನಂತರ ತನ್ನ ಬಿಡುಗಡೆಗಾಗಿ ಹಂಬಲಿಸುವ ಅನಿವಾರ್ಯತೆಯನ್ನು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಇಂಗ್ಲಿಷ್ ವಿದ್ಯಾಭ್ಯಾಸ ಒಂದು ನವ ಶ್ರೀಮಂತ ವರ್ಗವನ್ನು ಮಾತ್ರ ಸೃಷ್ಟಿ ಮಾಡುವ ಪ್ರಕ್ರಿಯೆಯನ್ನು ತಾತ್ವಿಕ, ಸಾಂಸ್ಕೃತಿಕ ಹಿನ್ನೆಲೆಗಳಲ್ಲಿ ನೋಡಬಹುದಾಗಿದೆ.

'Arrow of God', 'Things Fall Apart' ಕಾದಂಬರಿಗೆ ಅನುಕ್ರಮವಾಗಿ ಬಂದಂತಹ ಕೃತಿ. 'Things Fall Apart' ಕಾದಂಬರಿಯಲ್ಲಿ ಅಚೆಬೆಯಲ್ಲಿನ ಸಾಂಸ್ಕೃತಿಕ ವಿಮರ್ಶಕ ಕೆಲಸ ಮಾಡುತ್ತಿದ್ದರೆ, 'Arrow of God'ನಲ್ಲಿ ಅಚೆಬೆಯಲ್ಲಿನ ಕಲಾಕಾರ ಎದ್ದು ಕಾಣುತ್ತಾನೆ. ಈ ದೃಷ್ಟಿಯಿಂದಾಗಿ 'Arrow of God' 'Things Fall Apart'ಗಿಂತ ಹೆಚ್ಚು ಕಲಾತ್ಮಕ ಕೃತಿ. ಇದಕ್ಕೆ ಕಾರಣಗಳು ಸ್ಪಷ್ಟ. ಅಚೆಬೆ 'Things Fall Apart' ಕಾದಂಬರಿಯಲ್ಲಿ ಒಂದು ಖಚಿತವಾದ ಡಯಲೆಕ್ಟಿಕ್‌ಗೆ ಹುಡುಕಾಟ ನಡೆಸುತ್ತಿದ್ದರೆ, ಆ ಡಯಲೆಕ್ಟಿಕ್ 'Arrow of God'ನಲ್ಲಿ ಅಚೆಬೆಗೆ ಲಭ್ಯವಾಗಿದೆ. ಅಚೆಬೆಗೆ 'Things Fall Apart'ನಲ್ಲಿ ಆಫ್ರಿಕಾದ ಸಂಸ್ಕೃತಿಯ ಶೋಧವೇ ಅತೀ ಮುಖ್ಯವಾಗಿರುವುದರಿಂದ, ಆ ಸಂಸ್ಕೃತಿಯ ವಿವರಣೆಗಳಲ್ಲಿಯೇ ನಿಜವಾಗಬೇಕಾದಂತಹ ಒಂದು ತಾತ್ವಿಕವಾದ ಡಯಲೆಕ್ಟಿಕ್ ಒಂದು ಖಚಿತವಾದ ರೂಪವನ್ನು ಧೋರಣೆಯನ್ನು ಪಡೆದುಕೊಳ್ಳಲು ಸಾಧ್ಯವಾಗಿರುವುದು, 'Arrow of God'ನಲ್ಲಿ ಮಾತ್ರ. ಆದ್ದರಿಂದ ಈ ಕಾದಂಬರಿಯ ನಾಯಕ ಇಜಿಲು ಒಕೊಂಕೊಗಿಂತ ಹೆಚ್ಚು ನಿಗೂಢವಾದ, ಸಂಕೀರ್ಣವಾದ ಪಾತ್ರ. ಒಕೊಂಕೊನ ಹಾಗೆ ಈತನ ವ್ಯಕ್ತಿತ್ವ ಅವನ ದೈಹಿಕ ಪರಿಶ್ರಮಗಳಲ್ಲಿ ವ್ಯಕ್ತವಾಗುವುದಿಲ್ಲ. ಏಕೆಂದರೆ ಇಜಿಲು ಒಬ್ಬ ದೇವತಾ ಮನುಷ್ಯ. 'ಉಲು' ದೇವತೆಯ ಪ್ರತಿನಿಧಿ. ಹೀಗಾಗಿ ಅವನಿಗೆ ವೈಯಕ್ತಿಕ ಹಾಗೂ ಸಾಮೂದಾಯಿಕ ಜವಾಬ್ದಾರಿಗಳಿವೆ. ಆತನಿಗೆ ತನ್ನ ಅಧಿಕಾರದ ವ್ಯಾಪ್ತಿ ಮತ್ತು ಮಿತಿಗಳು ಚೆನ್ನಾಗಿ ಗೊತ್ತಿವೆ. ಆತನದು ಒಕೊಂಕೊಗಿಂತ ಹೆಚ್ಚಾಗಿ ಬೆಳೆದಿರುವ ಪಕ್ವವಾದ ವ್ಯಕ್ತಿತ್ವ. ತನ್ನ ಅಧಿಕಾರದ ವ್ಯಾಪ್ತಿಯಲ್ಲಿ ಬರುವ ಉಮರು ಮತ್ತು ಅದರ ಸುತ್ತಲಿನ ಆರು ಗ್ರಾಮಗಳ ರಾಜಕೀಯ ಏಕತೆ, ಮತ್ತು ಧಾರ್ಮಿಕತೆಯನ್ನು ಇಜಿಲು ಪೋಷಿಸಿ ಕಾಪಾಡಬೇಕು. ಉಮರು ಮತ್ತು ಆರು ಹಳ್ಳಿಗಳ ಸಾಮಾಜಿಕ ಆರೋಗ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಆತ ವ್ಯವಹರಿಸಬೇಕು. ಆದರೆ ಒಕೊಂಕೊ ತನ್ನ ಜನಾಂಗದಲ್ಲಿಯೇ ಅತ್ಯಂತ ವಿಶಿಷ್ಟವಾದ ವ್ಯಕ್ತಿ ಎನ್ನುವುದನ್ನು ಬಿಟ್ಟರೆ, ಅವನ ವ್ಯಕ್ತಿತ್ವಕ್ಕೆ ಯಾವುದೇ ತರಹವಾದಂತಹ ರಾಜಕೀಯ, ಸಾಮಾಜಿಕ ಅಥವಾ ಧಾರ್ಮಿಕ ಆಯಾಮಗಳಿಲ್ಲ.

"ಇಜಿಲುಗೆ ಕೆಲವೊಮ್ಮೆ ತನ್ನ ಅಧಿಕಾರದ ನೈಜತೆಯ ಬಗ್ಗೆಯೇ ಆಶ್ಚರ್ಯವಾಗುತ್ತದೆ. ಆತ ತನ್ನ ಸಮುದಾಯದ ಸಾಂಸ್ಕೃತಿಕ ವಿಶೇಷಗಳಾದ 'ಕುಂಬಳ ಎಲೆಗಳ ಹಬ್ಬ' ಮತ್ತು 'ಹೊಸ ವರ್ಷದ ಹಬ್ಬ'ಗಳ ದಿನವನ್ನು ನಿಗದಿ ಮಾಡಬೇಕಾಗುತ್ತದೆ. ಅವನೇನೂ ಆ ದಿನಗಳನ್ನು ಆಯ್ಕೆ ಮಾಡುತ್ತಿರಲಿಲ್ಲ. ಆ ದಿನಗಳಿಗಾಗಿ ಆತ ಕಾಯುತ್ತಿದ್ದ ಅಷ್ಟೆ. ಅವನ ಅಧಿಕಾರ, ಒಂದು ಮಗುವಿನ ತನ್ನ ಆಡಿನ ಮರಿಯ ಮೇಲೆ ಇದ್ದ ಅಧಿಕಾರವಾಗಿತ್ತು. ಆ ಆಡು ಜೀವಂತವಾಗಿರುವವರೆಗೆ ಅವನದು ; ಅಲ್ಲಿಯ

ವರೆಗೆ ಅದನ್ನು ಪೋಷಿಸುವ ಹೊಣೆ ಅವನಿಗೆ ಸೇರಿದ್ದು ; ಅದನ್ನು ಸಂಹರಿಸಿದಾಗಲೇ ಅದರ ನಿಜವಾದ ಒಡೆಯ ಯಾರು ಎಂಬುದು ಅವನಿಗೆ ಗೊತ್ತಾಗಬಹುದು. ಇಲ್ಲ ; 'ಉಲು' ದೇವತೆಯ ಪ್ರತಿನಿಧಿಯಾಗಿರುವ ಇಜಿಲು ಅದಕ್ಕಿಂತ ಮಹತ್ವದ ವ್ಯಕ್ತಿ ; ಆತ ದಿನವನ್ನು ನಿಗದಿ ಮಾಡದಿದ್ದರೆ ಹಬ್ಬವೂ ಇಲ್ಲ ; ಸುಗ್ಗಿಯೂ ಇಲ್ಲ : ಬಿತ್ತನೆ ಕೂಡ ಇಲ್ಲ ; ಆದರೆ ಆತ ಹಾಗೆ ಮಾಡಬಹುದೇ ? ಈ ಹಿಂದೆ ಯಾವ 'ಉಲು' ದೇವತೆಯ ಆರಾಧಕನೂ ಹೀಗೆ ಮಾಡಿಲ್ಲ. ಆದ್ದರಿಂದ ಪ್ರತಿ ಹಬ್ಬದ ದಿನವನ್ನು ಆತ ನಿಗದಿ ಮಾಡದೇ ಇರಲು ಸಾಧ್ಯವಿಲ್ಲ ; ಇಜಿಲು ಹಾಗೆ ಮಾಡಲಾರ. (The African Trilogy, p. 32). ಈ ತರಹ ಆಲೋಚಿಸುತ್ತಿರುವ ಇಜಿಲು ಈ ಮೇಲಿನ ಮಾತು ಗಳು ತನ್ನ ಶತ್ರು ಹೇಳುತ್ತಿರಬಹುದೇ ಎಂದು ಭ್ರಮಿಸಿ, ಕೋಪ, ಅಸಹನೆಗೆ ಒಳಗಾ ಗುತ್ತಾನೆ. ಆದರೆ ಅವನ ಆಲೋಚನಾಕ್ರಮವೇ ಅವನ ಅಧಿಕಾರವನ್ನು, ಅದರ ಮಿತಿ ಗಳನ್ನು ಹೇಳುತ್ತದೆ. ಆತನಿಗೆ ತಾನು ಹಬ್ಬದ ದಿನಗಳನ್ನು ನಿಗದಿ ಮಾಡಲೇಬೇಕೆಂಬ ಕರಾರುವಾಕ್ಕಾದ ಸಂಪ್ರದಾಯದ ಬಗ್ಗೆಯೇ ಜಿಗುಪ್ಸೆ ಇದೆ. ಅದನ್ನು ನಿರಾಕರಿಸುವ ಧೈರ್ಯ ತೋರಲು ಆತ ಹಿಂಜರಿಯುವವನಲ್ಲ. ಆತ ತನ್ನ ಅಧಿಕಾರವನ್ನು, ಅದು ಹಾಕಿಕೊಟ್ಟಿರುವ ನಡವಳಿಕೆಯನ್ನು ಮುಂದೆ ರಾಜಕೀಯ ಕಾರಣಗಳಿಗಾಗಿ ತಿರಸ್ಕರಿಸು ತ್ತಾನೆ. ಹೀಗಾಗಿ ಇಜಿಲುಗೆ ಈ ತರಹ ಇರುವ ವ್ಯಕ್ತಿ ಪ್ರತಿಷ್ಠೆಯು ಸಮುದಾಯ ನಿಷ್ಠೆಯ ವ್ಯಾಪ್ತಿ ಒಳಗೊಳ್ಳುವಲ್ಲಿ ಇಲ್ಲ. ಹೀಗಾಗಿ ಅಚಿಬೆ ಇನ್ನೂ ಕಲೋನಿಯಲ್ ಆಡಳಿ ತಕ್ಕೆ ಒಳಗಾಗದ ಸಂಪ್ರದಾಯನಿಷ್ಠ ಈಬೋ ಜನಾಂಗದ ಅಂತರ್ಯದಲ್ಲೇ ಸಂಭವಿಸು ತ್ತಿರುವ ರಾಜಕೀಯ ತುಮುಲಗಳನ್ನು, ಅದು ತನ್ನದೇ ಆದ ರಾಜಕೀಯ ವ್ಯವಸ್ಥೆ ಯನ್ನು ಹೊಂದಿರುವ ವಿಧಾನವನ್ನು, ಅದರ ಇತಿಮಿತಿಗಳನ್ನು ಒಂದು ಕಡೆ ಇಜಿಲು, ಅವನ ಉಮರು ಮತ್ತು ಅದರ ಸುತ್ತಲಿನ ಆರು ಹಳ್ಳಿಗಳ ಹಿನ್ನೆಲೆಯಲ್ಲಿ ಚಿತ್ರಿಸುತ್ತಾರೆ. ಆ ಹಳ್ಳಿಗಳ ರಕ್ಷಕನಾದ ಇಜಿಲುವಿನ ರಾಜಕೀಯ ಸಂದಿಗ್ಧಗಳು ಅತ್ಯಂತ ಸಂಕೀರ್ಣ ವಾಗಿವೆ. ಏಕೆಂದರೆ ಅವನಲ್ಲಿಯೇ ಒಂದು ತರಹದ ಡಯಲೆಕ್ಟಿಕ್ ಕೆಲಸ ಮಾಡುತ್ತಿರು ತ್ತದೆ. ಅವನ ಅಧಿಕಾರದ ವ್ಯಾಪ್ತಿ ಮತ್ತು ಅವನ ವೈಯಕ್ತಿಕತೆ ಮಧ್ಯೆ ಇರುವ ಡಯಲೆಕ್ಟಿಕ್ ಇಜಿಲುವಿನ ವ್ಯಕ್ತಿತ್ವದಲ್ಲಿರುವ ಬೇರೆ ರೀತಿಯ ಸಾದೃಶ್ಯ, ವೈದೃಶ್ಯ ಗಳನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತದೆ. ಉಮರುವಿನ ರಕ್ಷಣೆಗಾಗಿ ಅವನ ಮತ್ತು ಉಕ್‌ಪಾಕನ ಮಧ್ಯೆ ಒಂದು ರಾಜಕೀಯ ಆಯ್ಕೆಯ ವೈದೃಶ್ಯಗಳಿವೆ. ಇಜಿಲು ವಿನ ಧಾರ್ಮಿಕ ಮತ್ತು ಸಂಪ್ರದಾಯನಿಷ್ಠ. ಅಧಿಕಾರ ಹಾಗೂ ಕಲೋನಿಯಲ್ ಆಡಳಿತದ ಜಿಲ್ಲಾಧಿಕಾರಿ ಮತ್ತು ಕ್ರಿಶ್ಚಿಯನ್ ಧರ್ಮಗುರುವಿನ ಅಧಿಕಾರಗಳ ಮಧ್ಯೆ ಒಂದು ಡಯಲೆಕ್ಟಿಕ್ ಕೆಲಸ ಮಾಡುತ್ತಿರುತ್ತದೆ. ಇದಕ್ಕಿಂತ ಮಿಗಿಲಾಗಿ ಇಜಿಲು ಮತ್ತು ಆತನ 'ಉಲು'ವಿನ ಮಧ್ಯ ಸಂಘರ್ಷಗಳಿವೆ.

ಇನ್ನೊಂದು ಕಡೆ ಅಚಿಬೆ ಕಲೋನಿಯಲ್ ವ್ಯವಸ್ಥೆಗೆ ಈಗಾಗಲೇ ಒಳಪಟ್ಟಿರುವ ಒಕ್‌ಪೆರಿ ಗ್ರಾಮದಲ್ಲಿನ ಜನಾಂಗದ ಸಾಂಪ್ರದಾಯಿಕ ಹಿನ್ನೆಲೆಗಳಲ್ಲಿ ಆಗುತ್ತಿರುವ ಬದಲಾವಣೆಯನ್ನು, ಒಕ್‌ಪೆರಿ ಮತ್ತು ಉಮರು ನಡುವಿನ ಹೋರಾಟಗಳನ್ನು ಗುರುತಿಸುತ್ತಾರೆ. ಒಂದು ಸಾರಿ ಉಮರುವಿಗೆ ಸೇರಿದ ಬೇಹುಗಾರನನ್ನು ಒಕ್‌ಪೆರಿಯಲ್ಲಿ ಹೊಡೆದು ಕೊಂದುದಕ್ಕಾಗಿ ಒಂದು ಜನಾಂಗೀಯ ಯುದ್ಧ ಎರಡು ಊರುಗಳ ಮಧ್ಯೆ ಶುರುವಾಗುತ್ತದೆ. ಇದಕ್ಕೆ ಮೂಲತಃ ಈ ಗ್ರಾಮಗಳ ಮಧ್ಯೆ ಇರುವ ಒಂದು ಜಾಗಕ್ಕೆ ಸಂಬಂಧಪಟ್ಟ ಬಿಕ್ಕಟ್ಟೇ ಕಾರಣ. ಕೊಲೆಗೆ ಒಳಗಾದ ಅಕುಕಾಲಿಯ ಒಕ್‌ಪೆರಿಯ ಮೊದ್ಮಗನೇ ಆಗಿರುವುದರಿಂದ ಅವನ ಕೊಲೆಯ ವಿವರಣೆಗಳನ್ನು ಮತ್ತು ಅದಕ್ಕೆ ಸಂಬಂಧಪಟ್ಟ ವಿಚಾರಗಳನ್ನು ಒಕ್‌ಪೆರಿ ಜನ ತಮಗೆ ನೀಡುವುದೆಂದು ಉಮರುವಿನಜನತೆ ನಿರೀಕ್ಷಿಸುತ್ತದೆ. ಅದು ಸಂಭವಿಸದೆ ಇದ್ದಾಗ ಯುದ್ಧ ಶುರುವಾಗುತ್ತದೆ. ಅನೇಕ ದಿನಗಳವರೆಗೆ ಯುದ್ಧ ನಡೆದು ಕೊನೆಗೆ ಮಿ. ವಿಂಟರ್‌ಬಾಟಮ್ ಅನ್ನುವ ಬಿಳಿಯ ಸೈನಿಕರನ್ನು ತಂದು ಯುದ್ಧವನ್ನು ನಿಲ್ಲಿಸುತ್ತಾನೆ. ಉಮರುವಿನ ಜನ ಅಬೇಮದಲ್ಲಾದದ್ದನ್ನು ನೆನಪಿಸಿಕೊಂಡು ತಮ್ಮ ಆಯುಧಗಳನ್ನೆಲ್ಲಾ ಅವನಿಗೆ ಒಪ್ಪಿಸುತ್ತಾರೆ. ಯುದ್ಧ ನಿಲ್ಲಿಸಿದ ತರುವಾಯ ಆ ಬಿಳಿಯ ವಿವಾದಗ್ರಸ್ಥ ಸ್ಥಳವನ್ನು ಒಕ್‌ಪೆರಿಗೆ ನೀಡುತ್ತಾನೆ. ಇದರಿಂದಾಗಿ ಆ ಎರಡೂ ಗ್ರಾಮಗಳ ಮಧ್ಯೆ ಇರುವ ಸಂಬಂಧ ಇನ್ನಷ್ಟು ಹದಗೆಡುತ್ತದೆ. ಮಿ. ವಿಂಟರ್‌ಬಾಟಮ್ ಒಕ್‌ಪೆರಿಗೆ ಬರುವುದಕ್ಕೆ ಮುಂಚೆ ಅಥವಾ ಆಗಷ್ಟೇ ಬಂದಿದ್ದಾಗ ಆ ಊರುಗಳ ನಡುವಿನ ಸಂಬಂಧದ ಬಗ್ಗೆ ಆತ ವಿವರಿಸುತ್ತಾನೆ. ಉಮರು ಜನರಿಂದ ತಾನು ವಶಪಡಿಸಿಕೊಂಡ ಕೋವಿಗಳನ್ನು ಮಿ. ಕ್ಲಾರ್ಕ್‌ಗೆ ತೋರಿಸಿ ಹೇಳುತ್ತಾನೆ:

"ಆ ಕೋವಿಗಳಿಗೆ ಸುದೀರ್ಘವಾದ ಮತ್ತು ಕುತೂಹಲಕಾರಿಯಾದ ಇತಿಹಾಸವಿದೆ. ಉಮರು ಮತ್ತು ಒಕ್‌ಪೆರಿ ಜನರು ದೊಡ್ಡ ಶತ್ರುಗಳು ; ಅಥವಾ ನಾನು ಇಲ್ಲಿಗೆ ಬರುವುದಕ್ಕೆ ಮುಂಚೆ ಅವರು ಹಾಗಿದ್ದರು : ಒಂದು ತುಂಡು ನೆಲಕ್ಕಾಗಿ ಒಂದು ಅನಾಗರಿಕವಾದಂತಹ ಯುದ್ಧ ಆ ಊರುಗಳ ಮಧ್ಯೆ ಆರಂಭವಾಗಿತ್ತು. ಒಕ್‌ಪೆರಿ ನಮ್ಮ ಸರ್ಕಾರವನ್ನು ಮತ್ತು ಧರ್ಮಪ್ರಚಾರಕರನ್ನು ಸ್ವಾಗತಿಸಿದ ನಂತರ ಆ ಯುದ್ಧ ಇನ್ನಷ್ಟು ಉಲ್ಬಣಗೊಂಡಿತ್ತು. ಆದರೆ ಉಮರು ಮಾತ್ರ ಹಿಂದುಳಿದೇ ಇತ್ತು ; ಈಗ ನಾಲ್ಕೈದು ವರ್ಷಗಳಲ್ಲಿ ಮಾತ್ರ ಅವರ ಮೇಲೂ ನಮ್ಮ ಛಾಯೆ ಬೀಳಲುತೊಡಗಿದೆ ; ಇದು ಸಾಧ್ಯವಾಗಿದ್ದು, ನಾನು ಅವರಲ್ಲಿನ ಫಿರಂಗಿಗಳನ್ನು ವಶಪಡಿಸಿಕೊಂಡ ನಂತರ ಎಂದು ವಿನಯಪೂರ್ವಕವಾಗಿ ಹೇಳಬಲ್ಲೆ". (The African Trilogy, P. 355-356).

ವಿಂಟರ್‌ಬಾಟಮ್‌ನ ಈ ಮಾತುಗಳು ಒಂದು ಸಾಮ್ರಾಜ್ಯಶಾಹಿ ಆಡಳಿತ ಕ್ರಮ ದೇಶೀ ಸಂಸ್ಕೃತಿಗಳಲ್ಲಿನ ಬಿರುಕುಗಳನ್ನೇ ಸಾಧನವನ್ನಾಗಿಟ್ಟುಕೊಂಡು ಆ ಸಂಸ್ಕೃತಿಯನ್ನು ನಿರ್ನಾಮ ಮಾಡುವುದರ ಮುಖಾಂತರ ತನ್ನ ಪ್ರಭುತ್ವವನ್ನು ಹೇಗೆ ಸ್ಥಾಪಿಸಬಲ್ಲದು ಎಂಬುದನ್ನು ಮತ್ತೊಮ್ಮೆ ಸಾಬೀತುಗೊಳಿಸುತ್ತದೆ. ಅಚೆಬೆ ಈ ಒಕ್‌ಪರಿ ಮತ್ತು ಉಮರುಗಳ ನಡುವಿನ ಸಂಘರ್ಷವನ್ನು ಒಂದು ಸಂಕೀರ್ಣವಾದ ಮತ್ತು ತಾತ್ವಿಕವಾದ ಡಯಲೆಕ್ಟಿಕ್ ಆಗಿ ಏರ್ಪಡಿಸಿಕೊಂಡು ಕಲೋನಿಯಲ್ ಆಡಳಿತ ಕ್ರಮದ ಧೋರಣೆಗಳನ್ನು ಒಂದು ರಾಜಕೀಯ ಸಂದರ್ಭದ ಹಿನ್ನೆಲೆಯಲ್ಲಿ ಚರ್ಚಿಸುವುದು ಇಡೀ ಕಾದಂಬರಿಯ ಪ್ರಧಾನ ಆಶಯವಾಗಿದೆ. ವಿಂಟರ್‌ಬಾಟಮ್ ಹೇಳುವಂತೆ ಉಮರು ಈಗ ಕಲೋನಿಯಲ್ ಆಡಳಿತಕ್ಕೆ ತನ್ನ ಸಂಸ್ಕೃತಿಯನ್ನು ಒಡ್ಡಿಕೊಳ್ಳುವ 'Mood' ವೊಂದನ್ನು ಸೃಷ್ಟಿಸಿಕೊಳ್ಳುತ್ತಿದೆ. ಈ ಬದಲಾವಣೆಗಳನ್ನು ಧರ್ಮನಿಷ್ಠನಾದ ಇಜೆಲುವಿನಲ್ಲಿಯೇ ಗುರುತಿಸಬಹುದು. ಆತ ತನ್ನ ಮಗನನ್ನು ಸ್ವಬುದ್ಧಿಯಿಂದ ಒಕ್‌ಪರಿಯಲ್ಲಿನ ಧರ್ಮಪ್ರಚಾರಕ ಸಭೆಗಳಿಗೆ ಹೋಗಲು ಪ್ರೇರೇಪಿಸುತ್ತಾನೆ. ಅವನಲ್ಲಿನ ಈ ವಿರೋಧಾಭಾಸವನ್ನು ಅವನ ಜನರು ಗುರುತಿಸಿ ಗಾಬರಿಗೊಂಡಿದ್ದಾರೆ. ಇಜೆಲು ತನ್ನ ಮಗ ಒಡುಚೆಯನ್ನು ಕರೆದು ಹೇಳುತ್ತಾನೆ :

"ಪ್ರಪಂಚ ಬದಲಾವಣೆಯ ಗತಿಯಲ್ಲಿದೆ. ಅದು ನನಗೆ ಇಷ್ಟವಿಲ್ಲ ; ನಾನು ಇನೆಕಿ ಪಕ್ಷಿಯಂಥರ ; 'ನೀನು ಯಾವಾಗಲೂ ಹಾರುತ್ತಿರುತ್ತಿ' ; ಅಂತ ಅದರ ಸ್ನೇಹಿತರು ಕೇಳಿದಾಗ, ಇನೆಕಿ ಹೇಳಿತಂತೆ : "ಜನರು ಗುರಿ ತಪ್ಪದೆ ಗುಂಡು ಹಾರಿಸುವುದನ್ನು ಕಲಿತಿದ್ದಾರೆ ಮತ್ತು ನಾನು ಎಲ್ಲೂ ಕೂರದೆ ಹಾರುವುದನ್ನು ಕಲಿತಿದ್ದೇನೆ" ಎಂದು. ಆದ್ದರಿಂದ ನನಗೆ ನನ್ನ ಒಬ್ಬ ಮಗ ಅವರ ಜೊತೆ ಇರಬೇಕೆಂಬ ಆಸೆ; ಆ ಜನರಲ್ಲಿ ನೀನು ಏನನ್ನೂ ಗುರುತಿಸಲು ಸಾಧ್ಯವಾಗದಿದ್ದರೆ ವಾಪಸ್ಸು ಬರಬಹುದು ; ಅವರು ಹೇಳುವುದರಲ್ಲಿ ಏನಾದರೂ ಇದೆ ಅಂತ ನಿನಗೆ ಅನ್ನಿಸಿದರೆ, ಆ ವಿಚಾರಗಳನ್ನು ನನಗೂ ಬಂದು ತಿಳಿಸಬಹುದು". (The African Trilogy, P. 365). ಹೀಗಾಗಿ ಇಜೆಲು ರಾಜಕೀಯ ಮತ್ತು ಧಾರ್ಮಿಕ ಕಾರಣಗಳಿಗಾಗಿ ತನ್ನ ಜವಾಬ್ದಾರಿಗಳನ್ನು ತೊರೆಯಬಲ್ಲ. ಎಂದಾದರೂ ಒಂದು ದಿನ ಈ ಕಲೋನಿಯಲ್ ಆಡಳಿತ ಕ್ರಮ ತನ್ನೂರಿಗೆ ಧಾಳಿ ಮಾಡುವ ಅನಿವಾರ್ಯತೆಯನ್ನು ಆತ ಚೆನ್ನಾಗಿ ಬಲ್ಲ. ಅಂತಹ ಸಾಧ್ಯತೆಗಳನ್ನು ಇಜೆಲು ರಾಜಕೀಯವಾಗಿ ಮತ್ತು ವ್ಯಾವಹಾರಿಕವಾಗಿ ನಿರ್ವಹಿಸಲು ತಯಾರಿ ನಡೆಸುತ್ತಿದ್ದಾನೆ. ಆದರೆ ಅಂತಹ ಆಡಳಿತ ಕ್ರಮವನ್ನು ಪ್ರತಿರೋಧ ಮಾಡದೆ ಒಪ್ಪಿಕೊಳ್ಳುವಂತಹ ಹೆಣ್ಣಿಗನು ಅವನಲ್ಲ ಮತ್ತು ತನ್ನ ಜನಾಂಗದಲ್ಲಿಯೇ ಶುರುವಾಗಬಹುದಾದ ವಿರೋಧವನ್ನು ಸಮರ್ಥವಾಗಿ ಆತ ನಿರ್ವಹಿಸಬಲ್ಲ.

ಒಂದು ಸಾರಿ ಇಜಿಲು ತನ್ನ ಮಗ ಉಡುಚೆ ಒಂದು ಹೆಬ್ಬಾವನ್ನು ಹಿಡಿದು ಪೆಟ್ಟಿಗೆಯಲ್ಲಿ ಸೆರೆಹಿಡಿದಿರುತ್ತಾನೆ. ಆಫ್ರಿಕಾದ ಸಂಸ್ಕೃತಿಯಲ್ಲಿ ಹೆಬ್ಬಾವನ್ನು ಕೊಲ್ಲುವುದಾಗಲೀ, ಹಿಂಸಿಸುವುದಾಗಲೀ ಸಲ್ಲದು. ಇಜಿಲು ಇದರಿಂದ ಧರ್ಮಸಂಕಟಕ್ಕೆ ಒಳಗಾಗುತ್ತಾನೆ. ಆದರೂ ತನ್ನ ಮಗ ಹೆಬ್ಬಾವನ್ನು ಕೊಂದಿಲ್ಲವೆಂಬ ಸಮಾಧಾನ ಆತನಿಗಿದೆ. ಹಾಗೇನಾದರೂ ಆಗಿದ್ದಲ್ಲಿ ಹೆಬ್ಬಾವಿನ ಅಂತ್ಯಸಂಸ್ಕಾರವನ್ನು ಮನುಷ್ಯರ ಅಂತ್ಯಸಂಸ್ಕಾರದ ರೀತಿಯಲ್ಲಿಯೇ ಏರ್ಪಡಿಸಬೇಕು. ಇದು ನಿಯಮ. ಉಮರುವಿನ ಜನ ಉಡುಚೆ ಬಗ್ಗೆ ಅವನು ಹಾವನ್ನು ಕೊಂದಿಲ್ಲದೇ ಇದ್ದರೂ ಕೋಪಗೊಳ್ಳುತ್ತಾರೆ. ಉಡುಚೆ ಕ್ರಿಶ್ಚಿಯನ್ ಧರ್ಮಬೋಧನೆ ಕೇಳಿ ಆ ರೀತಿ ಮಾಡಿರುತ್ತಾನೆ. ಕ್ರಿಶ್ಚಿಯನ್ ಧರ್ಮಬೋಧನೆಯ ಉದ್ದೇಶವೂ ಅದೆ ; ದೇಶೀ ಸಂಸ್ಕೃತಿಯಲ್ಲಿನ ನಂಬಿಕೆಗಳನ್ನು ಮೂಲೋಚ್ಚಾಟನೆಗೊಳಿಸುವುದು ಮತ್ತು ದೇಶೀ ಜನಾಂಗದಲ್ಲಿನ ಧಾರ್ಮಿಕ ಕ್ರೌರ್ಯಗಳನ್ನು ಬಯಲಿಗೆ ತರುವುದು. ಈ ಕಾರಣಕ್ಕಾಗಿ 'Things Fall Apart' ನಲ್ಲಿ ಕಾಣುವ 'demythification' ಈ ಕಾದಂಬರಿಯಲ್ಲಿಯೂ ಇರುವುದನ್ನು ನಾವು ಗಮನಿಸಬಹುದು.

ಈ ಮಧ್ಯೆ ಒಕ್‌ಪೆರಿ ಮತ್ತು ಉಮರುಗಳ ಮಧ್ಯೆ ಕಲೋನಿಯಲ್ ಆಡಳಿತ ಕ್ರಮ ಒಂದು ರಸ್ತೆಯನ್ನು ನಿರ್ಮಾಣ ಮಾಡಿ ಆ ಊರುಗಳ ಮಧ್ಯೆ ಸಂಪರ್ಕ ಕಲ್ಪಿಸಲು ಯತ್ನಿಸುತ್ತದೆ. ಒಂದು ರೀತಿಯಲ್ಲಿ ಬಹಳ ಇತ್ಯಾತ್ಮಕವಾಗಿ ಚಿತ್ರಿತವಾಗಿರುವ ಈ ಪ್ರಕ್ರಿಯೆ ಎರಡೂ ಜನಾಂಗಗಳ ಮಧ್ಯೆ ಸಾಮರಸ್ಯ ಸಹಬಾಳ್ವೆಯನ್ನು ಕಲ್ಪಿಸುವುದರೊಂದಿಗೆ ಆಧುನೀಕರಣದ ಪ್ರಜ್ಞೆಯನ್ನು, ನವ–ನಾಗರೀಕತೆಯ ಫಲಶ್ರುತಿಯನ್ನು ದೇಶೀ ಸಂಸ್ಕೃತಿಯ ಮೇಲೆ ಅವಿಚ್ಛಿನ್ನವಾಗಿ ಹೇರುತ್ತದೆ.

ಬಿಳಿಯರ ಆಡಳಿತ ಕ್ರಮವನ್ನು ಬಹಳ ಆತ್ಮೀಯತೆಯಿಂದ ಸ್ವೀಕರಿಸುತ್ತಿರುವ ಇಜಿಲು ತನ್ನ ಜನಾಂಗದವರಿಂದ ವ್ಯವಸ್ಥಿತವಾಗಿ ದೂರ ಸರಿಯುತ್ತಾನೆ. ಅಬೇಮ ನಾಶವಾಗಿದ್ದಕ್ಕೆ, ಒಕ್‌ಪೆರಿಯಲ್ಲಿ ಬಿಳಿಯರ ಪ್ರಭುತ್ವ ಏರ್ಪಟ್ಟಿದ್ದಕ್ಕೆ ತನ್ನ ಸಂಸ್ಕೃತಿ ಮತ್ತು ಜನಾಂಗೀಯ ಧೋರಣೆಗಳಲ್ಲಿನ ಮಿತಿಗಳು ಹಾಗೂ ವಿರೋಧಾಭಾಸಗಳೇ ಕಾರಣ ಎಂದು ಇಜಿಲು ತಿಳಿಯುತ್ತಾನೆ. ತಮಗೆ ಸೇರಿಲ್ಲದ ನೆಲಕ್ಕಾಗಿ ಉಮರು ಜನ ಒಕ್‌ಪೆರಿ ಜೊತೆ ಜಗಳ ಆಡಿದ್ದೇ ಬಿಳಿಯರ ಮಧ್ಯಸ್ಥಿಕೆಗೆ ಕಾರಣವಾಯಿತು ಎಂದು ಆತ ಭಾವಿಸುತ್ತಾನೆ. ತನ್ನ ಸ್ನೇಹಿತನಾದ ಅಕ್ಯೂಬ್ಯು ಜೊತೆ ವಾದಿಸುತ್ತ ಇಜಿಲು ಹೇಳುತ್ತಾನೆ :

"ಅಬೇಮ ನಾಶವಾದಾಗ ಅಲ್ಲಿಗೆ ಹೋದ ಬಿಳಿಯರ ಸಂಖ್ಯೆ ಎಷ್ಟು ? ಕೇವಲ ಐದು ಮಾತ್ರ ; ಆ ಐವರಿಂದ ಇಡೀ ಅಬೇಮ ನಾಶವಾಯಿತೆಂದರೆ, ಅದು ಹೇಗೆ ಸಾಧ್ಯ ? ಯಾರು ಬಿಳಿಯರಿಗೆ ಅಬೇಮದ ದಾರಿ ತೋರಿಸಿದ್ದು ? ಬಿಳಿಯರು ಅಲ್ಲಿಯೇನು ಹುಟ್ಟಲಿಲ್ಲ ?" (The African Trilogy, p. 454-455).

ಇದು ಒಂದು ರೀತಿಯಲ್ಲಿ ಇಜಿಲು ವ್ಯಕ್ತಿತ್ವದಲ್ಲೇ ಇರುವ ವೈದೃಶ್ಯ. ಏಕೆಂದರೆ ಇಜಿಲು ಬಿಳಿಯರ ಬಗ್ಗೆ ತಳೆದಿರುವ ನಿಲುವು ದ್ವಂದ್ವಾತ್ಮಕ. ಬಿಳಿಯರ ಆಡಳಿತ ವ್ಯವಸ್ಥೆ ನಿಧಾನವಾಗಿ ಉಮುರುಗೆ ಹಬ್ಬಲು ಇಜಿಲುವಿನಲ್ಲಿರುವ ಗೊಂದಲಗಳೇ ಕಾರಣ. ಇನ್ನೊಂದು ರೀತಿಯಲ್ಲಿ ಬದಲಾವಣೆಗೆ ಹಸಿದಿರುವ ಒಂದು ದೇಶೀ ಜನಾಂಗದ ಪ್ರಾತಿನಿಧಿಕ ಪಾತ್ರವಾಗಿ ಇಜಿಲು ನಮಗೆ ಕಾಣುತ್ತಾನೆ. ತಾನು ಉಮುರುವಿನ ಜನಕ್ಕೆ ದ್ರೋಹ ಬಗೆಯುತ್ತಿದ್ದೇನೆಂಬ ನೈತಿಕ ಪ್ರಜ್ಞೆ ಕೂಡ ಇಜಿಲುವಿನಲ್ಲಿಲ್ಲ. ತಾನು ಮಾಡುತ್ತಿರುವುದೆಲ್ಲ ಸರಿ ಎಂಬ ದೃಢತೆ ಮತ್ತು ಆತ್ಮವಿಶ್ವಾಸ ಅವನಲ್ಲಿದೆ. ಆದ್ದರಿಂದಲೇ ಆತ ವಿಂಟರ್‌ಬಾಟಮ್ ಅವನನ್ನು ಒಕ್‌ಪೆರಿಗೆ ಕರೆಸಿಕೊಳ್ಳಲು ನಿರ್ಧರಿಸಿದ್ದಾಗ ಅಲ್ಲಿಗೆ ಹೋಗಲು ಹಿಂಜರಿಯುವುದಿಲ್ಲ. ಇಜಿಲುವಿನನ್ನೆ ಕರೆಸಿಕೊಳ್ಳಲು ಮಿ. ವಿಂಟರ್‌ಬಾಟಮ್ ನಿರ್ಧರಿಸಿದ್ದು, 'ಅವರಿಬ್ಬರೂ ಸ್ನೇಹಿತರು' ಎಂಬ ಅನುಮಾನವನ್ನು ಉಮುರುವಿನ ಜನರಲ್ಲಿ ಹುಟ್ಟಿಸುತ್ತದೆ. ಇಜಿಲು ಒಕ್‌ಪೆರಿಗೆ ಬಂದಾಗ ಅನೇಕ ದಿನಗಳವರೆಗೆ ಅವನನ್ನು ಬಂಧನದಲ್ಲಿಡುತ್ತಾರೆ. ಉಮುರುವಿನಲ್ಲಿ ತಮ್ಮ ಆಡಳಿತ ವ್ಯವಸ್ಥೆಯ ಮುಖ್ಯಸ್ಥನನ್ನಾಗಿ ನೇಮಿಸುವ ಇಚ್ಛೆ ಅವರಿಗೆ. ಆದರೆ ಇಜಿಲು ಅದನ್ನು ಒಪ್ಪಿಕೊಳ್ಳುವ ಸ್ಥಿತಿಯಲ್ಲಿಲ್ಲ. ಏಕೆಂದರೆ ಇಜಿಲು ತನ್ನ ಸಮುದಾಯನಿಷ್ಠೆ ಮತ್ತು ಬ್ರಿಟಿಷರ ಬಗ್ಗೆ ತನಗಿರುವ ನಂಬಿಕೆ, ಇವುಗಳ ಮಧ್ಯದ ಸಂಘರ್ಷದಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆ. ಆದ್ದರಿಂದ ಆ ಹುದ್ದೆಯನ್ನು ಅವನಿಗೆ ಒಪ್ಪಿಕೊಳ್ಳಲೂ ಸಾಧ್ಯವಿಲ್ಲ, ನಿರಾಕರಿಸಲೂ ಸಾಧ್ಯವಿಲ್ಲ.

ತನ್ನ ಮಗ ಉಡುಚೆ ಜೊತೆ ಮಾತಾಡುತ್ತ ಹೇಳುತ್ತಾರೆ: ತಾನು ಒಕ್‌ಪೆರಿಯಲ್ಲಿದ್ದಾಗ ಒಬ್ಬ ಬಿಳಿಯ ಎಡಗೈಯಿಂದ ಬರೆಯುತ್ತಿದ್ದುದನ್ನು ನೋಡಿದೆ ಎಂದು ತನ್ನ ಮಗನಿಗೆ ತಿಳಿಸುತ್ತಾನೆ. ತನ್ನ ಮಗನು ಬಿಳಿಯರಲ್ಲಿನ ಅಶಕ್ತಿಯನ್ನು ಪಡೆದುಕೊಳ್ಳಬೇಕೆಂದು ಆತ ಇಚ್ಛಿಸುತ್ತಾನೆ. ಹೀಗಾಗಿ ಕಲೋನಿಯಲ್ ಆಡಳಿತ ಕ್ರಮದ ಬಗ್ಗೆ ಸಮಾಧಾನದಿಂದ ಯೋಚಿಸುವವರ ಮನಸ್ಸಿನಲ್ಲಿ ಆ ವ್ಯವಸ್ಥೆ ಸರ್ವಸ್ವ ಅನ್ನುವ ನಂಬಿಕೆಯಿಲ್ಲ. ಇಜಿಲುಗೆ ಅವರ ಆಡಳಿತ ಕ್ರಮದ ಬಗ್ಗೆ ಅನುಮಾನಗಳಿವೆ; ಆದರೆ ಅವರ ಹೊಸ ಸಂಸ್ಕೃತಿಯನ್ನು ಸ್ವೀಕರಿಸಬಲ್ಲ.

ಇಜಿಲು ತನ್ನ ಸಂಸ್ಕೃತಿಯ ಅನಿವಾರ್ಯ ಅಂಗಗಳಾದ ಹಬ್ಬಗಳ ದಿನವನ್ನು ನಿಗದಿ ಮಾಡುವ ಸಂದರ್ಭ ಬಂದಾಗ ಆ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಹವಣಿಸುತ್ತಾನೆ. ಜನರೆಲ್ಲ ಹಬ್ಬದ ದಿನಗಳಿಗೆ ತಯಾರಿ ನಡೆಸುತ್ತಿದ್ದಾಗ ಇಜಿಲು ಆ ದಿನಗಳನ್ನು ನಿಗದಿ ಮಾಡಲು ನಿರಾಕರಿಸುತ್ತಾನೆ. ಅಲ್ಲಿಯ ಜನ ಅವನನ್ನು ಒತ್ತಾಯಿಸಿದಾಗ ಇದು 'ಉಲು' ದೇವತೆಯ ಸಂಕಲ್ಪ ಎಂದು ಹೇಳುತ್ತಾನೆ. ಹೀಗಾಗಿ ಜನರ ಧಾರ್ಮಿಕ ಭಾವನೆಗಳನ್ನು ತನ್ನ ರಾಜಕೀಯ ಅಭಿಮತಕ್ಕೆ ಬಳಸಿಕೊಳ್ಳಲು ಇಜಿಲು ಯತ್ನಿಸುತ್ತಾನೆ. ಇದರಿಂದಾಗಿ ಉಮುರುವಿನಲ್ಲಿ ಒಂದು ರೀತಿಯ ಜನಾಂಗೀಯ ಅರಾಜಕತೆ ಉಂಟಾಗುತ್ತದೆ. ಜನರೆಲ್ಲ

ಹಬ್ಬದ ದಿನಗಳು ಯಾವಾಗ ಅಂತ ಗೊತ್ತಿಲ್ಲದೆ ಕಂಗಾಲಾಗುತ್ತಾರೆ. ಆಗ ಒಂದು ಸುದ್ದಿ ಹರಡುತ್ತದೆ: 'ಯಾರಿಗೆ ತಮ್ಮ ಹಬ್ಬವನ್ನು ಆಚರಿಸಲು, ಸುಗ್ಗಿ ಶುರುಮಾಡಲು 'ಉಲು' ದೇವತೆಯ ಸಂಕಲ್ಪಕ್ಕಾಗಿ ಕಾಯಲು ಸಾಧ್ಯವಿಲ್ಲವೋ ಅಂತಹವರು ಕ್ರಿಶ್ಚಿಯನ್ ದೇವರನ್ನು ಸಂಪರ್ಕಿಸಬಹುದು. ಆ ದೇವರಿಗೆ 'ಉಲು' ದೇವತೆಯ ಕೋಪವನ್ನು ಶಮನಮಾಡುವ ಶಕ್ತಿಯಿದೆ. ಈ ಸುದ್ದಿ ಜನರಿಗೆ ಒಂದು ವಿಮೋಚನೆಯ ಮಾರ್ಗವಾಗಿ ಕಾಣುತ್ತದೆ. ಇದರಿಂದಾಗಿ ಕಲೋನಿಯಲ್ ಆಡಳಿತ ವ್ಯವಸ್ಥೆ ಜನರ ಧಾರ್ಮಿಕ ಭಾವನೆಗಳ ಮುಖಾಂತರ ಮತ್ತಷ್ಟು ಸಕ್ರಮಗೊಳ್ಳುತ್ತದೆ.

ಹೀಗಾಗಿ ಜೆರಾಲ್ಡ್ ಮೂರ್ ಅಭಿಪ್ರಾಯಪಡುವ ಹಾಗೆ, 'Arrow of God' ಕಾದಂಬರಿ "ವಸಾಹತುಶಾಹಿ ಆಡಳಿತ ಕ್ರಮ ಮತ್ತು ಕ್ರಿಶ್ಚಿಯನ್ನರ ಮತಾಂತರ ನಿಷ್ಠ ಧಾರ್ಮಿಕತೆ ಸಂಪೂರ್ಣವಾಗಿ ಯಶಸ್ವಿಯಾಗುವುದರ ಪ್ರಕ್ರಿಯೆಯ ಪರಿಪೂರ್ಣವಾದ ಚಿತ್ರವನ್ನು ನೀಡುತ್ತದೆ." (Twelve African Writers by Gerald Moor, P. 134).

ಒಟ್ಟಾರೆಯಾಗಿ ಅಚಿಬೆಯ "ಆಫ್ರಿಕನ್ ತ್ರಿವಳಿ" ಆಫ್ರಿಕಾದ ಕಲೋನಿಯಲ್ ಮತ್ತು ಪ್ರಿ-ಕಲೋನಿಯಲ್ ಸಂಸ್ಕೃತಿಯ ಒಂದು ದಿವ್ಯ ದರ್ಶನವನ್ನೇ ನಮಗೆ ನೀಡುತ್ತದೆ.

ಕಡಲು ಮತ್ತು ಕಾಡು

ಕಡಲು ಕೇಳಿತು
ಹೇಗೆ ಆಳುವುದು ಜಗವನ್ನು
ಕಾಡು ನಸುನಗೆಯಲ್ಲಿ
ಹೇಳಿತು ಹೊಳೆಯುತ್ತ ಬೆಳೆದು ನಿಲ್ಲು
ಚಿಗುರು ಮುಗುಳಿಗೂ ಆಕಾಶಗಮನದಲಿ
ಹೂವಿಗೂ ನಕ್ಷತ್ರ ಛತ್ರದಾವರಣ
ಕೆಳಗೆ ಅಂಗುಲಂಗುಲದಲ್ಲಿ ಕಂಬ್ಳರು, ಕಡೆಗಣ್ಣ
ನೋಟದಲ್ಲಿ ನೀ ರಾಜ ನಿಂತಲ್ಲೆ
ರಾಜ ದರ್ಬಾರು

*

ಕಾಡು ಕೇಳಿತು
ಹೇಗೆ ಗೆಲ್ಲುವುದು ವೈರಿಯನ್ನು
ಹುಡುಗಿ ನಕ್ಕಂತೆ ಮೊದಲ ಮಳೆಗೂ
ನಕ್ಕು, ಕೊನೆಯ ಜಿನುಗಿಗೂ ಖುಷಿ

ಬಳಗುಳಿ ರವೀಂದ್ರ ಭಟ್, ಅಂಚೆ: ಕೋಲಸಿರ್ಸಿ, ಸಿದ್ದಾಪುರ ತಾ, ಉತ್ತರ ಕನ್ನಡ–581 355

ಪಟ್ಟೆ, ಬರಲಿರುವ ಚುರುಕು ಬಿಸಿಲನು ನೆನೆದು
ಕರಗಸದ ರಕ್ಕಸ ಕೂಗಿಗೂ ನಗಲೇನು ಗೆಳೆಯ
ಕಡಲು ಯೋಚಿಸಿತು
ಅಂತರಿಕ್ಷಕೆ ನೆಗೆಯುವುದ ಬಿಡು
ಬಿಟ್ಟುಬಿಡು. ರಕ್ತ ಚೆಲ್ಲುವ ಕೆಂದಾವರೆ
ಗೆಡ್ಡೆ ಬಿಳಿ ಬಿಳಿಪು–ಕತ್ತಿ ಮೊನೆಯಲಿ ಶಾಂತಿ
ಪ್ರೀತಿ ಹನಿ ಹನಿಸು. ಆವಾಗ
ಮೈಸುತ್ತ ಮುಳ್ಳುಗಳೆ ರಾಜದಂಡ
ರಕ್ತಲೇಪಿತ ಮೊನಚೆ ಮಾನದಂಡ

*

ಭೂಮಿಯನೆ ಅವಲಕ್ಕಿ ಕುಟ್ಟುವ ಹಾಗೆ
ಕಡಲೂ ಹೆದ್ದೆರೆಗಳ ಹಾರಿಸಿತು
ಕಾಡು ಚೆಲ್ಲಿತು ಹಸಿರು
ಸೈನಿಕರಂಥ ಬೇರುಗಳು ನೆಲದಲ್ಲಿ
ನೆಲದಾಳದಲ್ಲಿ ಬೆಳ್ಳಗೆ ಬೆಳ್ಳಕ್ಕಿ ಹಿಂಡಂತೆ.
ಕಪಿಮುಷ್ಟಿಯಲಿ ಕಾಡು
ಅಪ್ಪಿತು ಭೂಮಿಯನೆ ಪುಕ್ಕದಡಿಯಲ್ಲಿ
ಗಿಳಿ, ಮರಿಯ ಬಚ್ಚಿಟ್ಟಂತೆ

*

ಕಡಲು ಹಿಮ್ಮೆಟ್ಟಿ ತೀರವಿಲ್ಲದ ಕಡೆ
ಜೋರಾಗಿ ನಡೆದಂತೆ
ಕಾಡು ಉಪ್ಪುನೀರಿನ ಜಿನುಗಲ್ಲಿ
ಹಾಡು ಕುರುಕಿದ ಹಾಗೆ

*

ಕೆನ್ನೆಯಲಿ ಕತೆ ಮೂಡಿ
ಲಜ್ಜೆ ತುಂಬಿದ ಭೂಮಿಯು
ಕೊರಳಲ್ಲಿ ಮಿಂಚಿತು
ಕಾಡು ಕಟ್ಟಿದ ತಾಳಿ
ಕಡಲು ಕೊಟ್ಟ ಓಲೆ

— ಬಳಗುಳಿ ರವೀಂದ್ರಭಟ್

ಏಳನೆಯ ಅಧ್ಯಾಯ

—ನಾಗಣ್ಣ

(Things Fall Apart ಕಾದಂಬರಿಯ ಹೃದಯದಂತಿರುವ 'ಏಳನೆಯ ಅಧ್ಯಾಯ')

ಮೂರು ವರ್ಷಗಳ ಕಾಲ ಇಕೆಮೆಫೂನ ಒಕೊಂಕೋನ ಮನೆಯಲ್ಲಿ ಇದ್ದುಬಿಟ್ಟ; ಆ ಊರಿನ ಮುಖಂಡರು ಅವನನ್ನು ಮರೆತೇ ಬಿಟ್ಟರು. ಮಳೆಗಾಲದಲ್ಲಿ ರಭಸವಾಗಿ ಬೆಳೆಯುವ ಸುವರ್ಣಗಡ್ಡೆಯ ಬಳ್ಳಿಯ ಹಾಗೆ ಅವನು ರಸತುಂಬಿ ಬೆಳೆದಿದ್ದ. ಹೊಸ ಸಂಸಾರದಲ್ಲಿ ಸಂಪೂರ್ಣವಾಗಿ ಬೆರೆತುಹೋಗಿದ್ದ. ನೋಯೆಗೆ ಇವನೇ ಒಂದು ರೀತಿಯಲ್ಲಿ ಹಿರಿಯಣ್ಣ; ಮೇಲಾಗಿ ಪ್ರಾರಂಭದಿಂದಲೂ ನೋಯೆಯಲ್ಲಿ ಹೊಸ ಹುರುಪು ತುಂಬುವುದರಲ್ಲಿ ಯಶಸ್ವಿಯಾಗಿದ್ದ. ಇವನ ಸಹವಾಸದಲ್ಲಿ ನೋಯೆಗೆ ತಾನೂ ಕೂಡ ಬೆಳೆದು ದೊಡ್ಡವನಾದಂತೆ ಭಾಸವಾಗುತ್ತಿತ್ತು; ಅವನ ತಾಯಿ ಅಡುಗೆ ಮಾಡುವಾಗ ಸಂಜೆಯ ಹೊತ್ತು ಅವಳ ಸಮೀಪದಲ್ಲೇ ಸುಳಿದು ಕಾಲಕಳೆಯದೆ ತನ್ನ ತಂದೆಯ ಗುಡಿಸಲಲ್ಲೋ ಅಥವಾ ಇಕೆಮೆಫೂನಾ ರಾತ್ರಿಯ ಸೇವನೆಗೆ ಪಾಮ್‌ಮರದಿಂದ ಸೆರೆ ಇಳಿಸುವುದನ್ನು ಗಮನಿಸುತ್ತಲೋ ಇದ್ದ. ಇತ್ತೀಚೆಗಂತೂ ತನ್ನ ತಾಯಿ ಅಥವಾ ತಮ್ಮ ಅಪ್ಪನ ಇತರ ಹೆಂಡಂದಿರಲ್ಲಿ ಯಾರಾದರೂ ಹೇಳುವ ಹೆಚ್ಚು ಶ್ರಮದ ಕೆಲಸಗಳನ್ನು — ಉದಾಹರಣೆಗೆ, ಸೌದೆ ಸೀಳುವುದು, ಅಡುಗೆಗೆ ಕುಟ್ಟುವುದು – ಮಾಡುವುದರಲ್ಲಿ ಅವನಿಗೆ ಹೆಚ್ಚು ಹೆಚ್ಚು ಸಂತೋಷವೆನಿಸುವುದು. ತನ್ನ ತಮ್ಮನೋ ಅಥವಾ ತಂಗಿಯೋ ಅವನಿಗೆ ಕೆಲಸ ಹೇಳಲು ಬಂದರೆ ಹೆಂಗಸರ ತಾಪತ್ರಯಗಳನ್ನು ಕುರಿತು ಗೊಣಗುವುದು ರೂಢಿಯಾಗಿದೆ.

ನೋಯೆಯ ಪ್ರಗತಿ ಕಂಡು ಒಕೊಂಕೋಗೆ ಒಳಗೊಳಗೇ ಖುಷಿಯಾಯಿತು; ಇದೆಲ್ಲಾ ಆಗಿರುವುದು ಇಕೆಮೆಫೂನಾನ ಪ್ರಭಾವದಿಂದ ಅಂತಲೂ ಅವನಿಗೆ ಗೊತ್ತಿತ್ತು. ತಾನು ಸತ್ತು ತನ್ನ ಹಿರೀಕರನ್ನು ಸೇರಿಸಿಕೊಳ್ಳುವಾಗ ದರ್ಪದಿಂದ ಸಂಸಾರ ಮಾಡಿಕೊಂಡು ಹೋಗಬಹುದಾದ ಸಮರ್ಥ ತರುಣನಾಗಿ ನೋಯೆ ಬೆಳೆಯಬೇಕೆಂಬುದು ಒಕೊಂಕೋನ ಆಸೆಯಾಗಿತ್ತು. ತನ್ನ ಹೆತ್ತಮುತ್ತರಿಗೆ ಕಾಲಕಾಲಕ್ಕೆ ಅನ್ನ ಹಾಕಬಲ್ಲಂಥ ಶ್ರೀಮಂತಿಕೆಯನ್ನು ಅವನು ಗಳಿಸಬೇಕು. ಹಾಗಾಗಿ ಹೆಂಗಸರ ಬಗ್ಗೆ ನೋಯೆ ಗೊಣಗುವಾಗಲೆಲ್ಲ ಒಕೊಂಕೋ ಸಂತೋಷಪಡುವನು. ಕಾಲಾನಂತರದಲ್ಲಿ ತನ್ನ ಹೆಂಡಂದಿರನ್ನು ನಿಯಂತ್ರಿಸಬಲ್ಲವನಾಗುತ್ತಾನೆ ಎಂಬುದಕ್ಕೆ ಇದೇ ಸೂಚನೆಯಾಗಿತ್ತು. ವ್ಯಕ್ತಿ ಎಷ್ಟೇ ಶ್ರೀಮಂತಿಕೆ ಸಂಪಾದಿಸಿದರೂ ತನ್ನ ಹೆಂಡತಿ ಮಕ್ಕಳನ್ನು (ಅದರಲ್ಲೂ ತನ್ನ ಹೆಂಡಂದಿರನ್ನು) ಹದ್ದುಬಸ್ತಿನಲ್ಲಿಡಲು ಸಮರ್ಥನಾಗದಿದ್ದರೆ ಅವನು ನಿಜವಾಗಿ ಗಂಡಸಲ್ಲ,

---

ನಾಗಣ್ಣ, ಟಿ-೫೨, ಏಪಿ ನಿಲಯ ವಸತಿಗೃಹ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬

ಅಂಥ ವ್ಯಕ್ತಿ ಒಂದು ಹಾಡಿನಲ್ಲಿ ಬರುವ ಗಂಡಸಂತೆ ಹತ್ತು ಮತ್ತೊಂದು ಹೆಂಡಂದಿರನ್ನು ಹೊಂದಿದ್ದೂ ತನ್ನ ಊಟಕ್ಕೆ ಸಾರು ಇಲ್ಲ ಎನ್ನುವ ಅಸಹಾಯಕನಾಗುತ್ತಾನೆ.

ಹಾಗಾಗಿ ಒಕೊಂಕೋ ತನ್ನ ಓಬಿ (ಹಟ್ಟಿ)ಯಲ್ಲಿ ಹುಡುಗರು ಬಂದು ಕುಳಿತು ಕೊಂಡು ತನ್ನ ನಾಡಿನ ಕತೆಗಳನ್ನು–ಹಿಂಸೆ ಮತ್ತು ರಕ್ತಪಾತದ ಕತೆಗಳನ್ನು–ಹೇಳುವಾಗ ಅವರು ಗಮನವಿಟ್ಟು ಕೇಳುವಂತೆ ಪ್ರೋತ್ಸಾಹಿಸಿದ. ಪೌರುಷ ಮತ್ತು ಹಿಂಸೆಯನ್ನು ಪ್ರದರ್ಶಿಸುವುದು ಸರಿಯಾದ ಮಾರ್ಗವೆಂದು ನೋಯೆಗೆ ಅನ್ನಿಸತೊಡಗಿದರೂ ತನ್ನ ಅಮ್ಮ ಮೊದಲು ಹೇಳುತ್ತಿದ್ದ ಕತೆಗಳೇ ಹೆಚ್ಚು ನೆನಪಾಗಹತ್ತಿದವು; ಚಿಕ್ಕ ಹುಡುಗರಿಗೆ ಈಗಲೂ ಅವಳು ಅಂಥ ಕತೆಗಳನ್ನು ಹೇಳುತ್ತಾಳೆ. ಬಹಳ ಕುಯುಕ್ತಿಯಿಂದ ವ್ಯವಹಾರ ಮಾಡುವ ಆಮೆಯ ಕತೆ, ಇಡೀ ಜಗತ್ತನ್ನೆಲ್ಲ ತೊಡೆತಟ್ಟಿ ಕುಸ್ತಿಗೆ ಕರೆದಂಥ ಅಹಂಕಾರದ ಎನಿಕೆ–ತೀ–ಓಬ್ಬಾ ಎಂಬ ಹಕ್ಕಿ ಕಡೆಗೆ ಬೆಕ್ಕೊಂದರಿಂದ ತನ್ನ ಸೊಕ್ಕಡಗಿಸಿಕೊಂಡ ಕತೆ. ಅವಳು ಹೇಳಿದ್ದ ಭೂಮಿ ಮತ್ತು ಆಕಾಶದ ನಡುವೆ ನಡೆದ ಜಗಳದ ಕತೆ ಬಹಳ ಸ್ವಾರಸ್ಯಕರವಾದದ್ದು. ಹೀಗೆ ಒಂದು ಸಾರಿ ಭೂಮಿಗೂ ಆಕಾಶಕ್ಕೂ ಜಗಳ ಬಂದು ಆಕಾಶ ಏಳುವರ್ಷಗಳ ಕಾಲ ಮಳೆಯನ್ನು ತಡೆಹಿಡಿಯಲಾಗಿ ಭೂಮಿಯ ಮೇಲಿನ ಬೆಳೆಯೆಲ್ಲಾ ಒಣಗಿ, ಸತ್ತವರನ್ನು ಹೂಳಲು ಹಳ್ಳ ತೆಗೆಯಲು ನೆಲ ಅಗೆದರೆ ಗುದ್ದಲಿಯ ಮೊನೆಯೇ ಮುರಿದು ಹೋಗುವುದು. ಕಟ್ಟಕಡೆಗೆ ಜಗದ ಜನರ ಬವಣೆಯನ್ನು ಆಕಾಶದ ಮುಂದೆ ಹಾಡಾಗಿ ತೋಡಿಕೊಳ್ಳಲು ಅದರ ಮನಕರಗಿಸುವಂತೆ ಗಿಡುಗನನ್ನು ಕಳುಹಿಸಲಾಯಿತು. ಧರಣಿಯ ದೂತನಾಗಿ ಗಿಡುಗ ಆಕಾಶದ ಆಸುಪಾಸಿನಲ್ಲಿ ನಿಂತು ದುಗುಡವನ್ನು ಪ್ರಕಟಿಸುವಂಥ ಹಾಡನ್ನು ತನ್ನ ಅಮ್ಮನ ಬಾಯಲ್ಲಿ ಕೇಳುವಾಗ ನೋಯೆಗೆ ಆ ದೂರದ ಪ್ರಪಂಚವೇ ಕಣ್ಣೆದುರಿಗೆ ಮೈದಾಳಿದಂತೆ ಆಗುತ್ತಿತ್ತು. ಕಡೆಗೆ ಆಕಾಶಕ್ಕೆ ಕರುಣೆ ಬಂದು ಸುವರ್ಣಗಡ್ಡೆಯ ಎಲೆಯಲ್ಲಿ ಮಳೆಯನ್ನು ಕಟ್ಟಿ ಕಳುಹಿಸಿತು; ಆ ಪೊಟ್ಟಣವನ್ನು ತೆಗೆದುಕೊಂಡು ಭೂಮಿಯ ಕಡೆ ಹಾರಿ ಬರುವಾಗ ಗಿಡುಗದ ಕಾಲಿನ ಚೂಪಾದ ಉಗುರುಗಳಿಂದ ಪೊಟ್ಟಣವು ತೂತಾಗಿ ಎಂದೂ ಕಂಡು ಕೇಳರಿಯದ ಪ್ರಮಾಣದಲ್ಲಿ ಮಳೆ ಸುರಿಯಿತು. ಈ ಬಾರಿ ಮಳೆಯಲ್ಲಿ ತಾನೇ ಹೆಚ್ಚು ತೊಯ್ದುಹೋದ ಗಿಡುಗ ಜನರಿಗೆ ಸಂದೇಶ ತಿಳಿಸಲು ನೇರವಾಗಿ ವಾಪಸ್ಸಾಗಲಾಗದೆ ದೂರ ದೇಶಕ್ಕೆ ಹಾರುವಾಗ ಅಲ್ಲಿ ಬೆಂಕಿಯೊಂದು ಕಣ್ಣಿಗೆ ಬಿದ್ದಿತು. ಹತ್ತಿರ ಹೋಗಿ ನೋಡಲಾಗಿ ಅಲ್ಲೊಬ್ಬ ವ್ಯಕ್ತಿ ಬಲಿ ಕೊಡುತ್ತಿದ್ದ. ಬೆಂಕಿಯಲ್ಲಿ ಮೈ ಕಾಯಿಸಿಕೊಂಡು ಅಲ್ಲಿದ್ದ ಕರುಳು ಇತ್ಯಾದಿಯನ್ನು ಗಿಡುಗ ಗಡದ್ದಾಗಿ ತಿಂದಿತು.

ನೋಯೆ ಇಷ್ಟಪಡುತ್ತಿದ್ದುದು ಈ ಬಗೆಯಾದ ಕತೆಗಳನ್ನು; ಆದರೆ ಈಗ

ಶೂದ್ರ

ಅವನಿಗೆ ಅರ್ಥವಾಗದೆ ಅದೆಲ್ಲ ಮೂರ್ಖ ಹೆಂಗಸರಿಗೆ ಮತ್ತು ಮಕ್ಕಳಿಗೆ ಸಂಬಂಧಿಸಿದ ರಗಳೆ ಎಂದು, ಜೊತೆಗೆ ತಾನು ಶೂರನಾಗಬೇಕೆಂದು ತನ್ನ ಅಪ್ಪನ ಇಚ್ಛೆ ಎಂದು ಕೂಡ ಅವನಿಗೀಗ ಅರಿವಾಗಿದೆ. ಆದ್ದರಿಂದ ಹೆಂಗಸರ ಕತೆಗಳಿಗೆ ತಾನು ಇನ್ನು ಮೇಲೆ ತಲೆಕೆಡಿಸಿಕೊಳ್ಳುವುದಿಲ್ಲ ಎಂದು ನಟಿಸಿದ. ಈ ರೀತಿಯಾಗಿ ಅವನು ಅವುಗಳನ್ನು ತಿರಸ್ಕರಿಸಿದಾಗಲೇ ಅವರಪ್ಪನಿಗೆ ಖುಷಿಯಾಗುವುದು ಮತ್ತು ಇತ್ತೀಚೆಗೆತ್ತಲಾಗಿ ಅವನನ್ನು ಮೊದಲಿನ ಹಾಗೆ ಹೊಡೆಯುವುದು, ಬಡಿಯುವುದು ಕೂಡ ನಿಂತುಹೋಯಿತು. ಒಕೊಂಕೋ ಹೇಳುವ ಬುಡಕಟ್ಟು ಸಮರದ ಕತೆಗಳನ್ನೋ ಅಥವಾ ಅನೇಕ ವರ್ಷಗಳ ಹಿಂದೆ ತನ್ನ ಎದುರಾಳಿಯನ್ನು ಬೆನ್ನಟ್ಟಿಕೊಂಡು ಹೋಗಿ ಕೊಂದು ಹೇಗೆ ಮೊದಲ ಮಾನವ ತಲೆಯನ್ನು ತಂದ ಎಂಬ ಸಾಹಸದ ಕತೆಯನ್ನೋ ನೋಯೆ ಮತ್ತು ಇಕೆಮೆಫೂನಾ ಕೇಳುತ್ತಾ ಕೂರುವರು. ಒಕೊಂಕೋ ಈ ರೀತಿಯಾಗಿ ಭೂತಕಾಲದ ಬಗ್ಗೆ ಹೇಳುವಾಗ ಹೆಂಗಸರು ಮನೆಗೆಲಸವನ್ನು ಮುಗಿಸಲು ಕಾಯುತ್ತಾ ಕತ್ತಲಲ್ಲಿ ಅಥವಾ ಬೆಂಕಿಕೊಳ್ಳಿಯಿಂದ ಬರುವ ಮಂದ ಬೆಳಕಿನಲ್ಲಿ ಕೂರುವರು. ಅಡುಗೆ ಮುಗಿದ ಕೂಡಲೇ ಪ್ರತಿಯೊಬ್ಬರ ಗುಡಿಸಲಿನಿಂದಲೂ ಗಂಡಸಿಗೆ ಒಂದು ಬೋಸಿಯಲ್ಲಿ ಫೂಫೂ ಮತ್ತೊಂದು ಬೋಸಿಯಲ್ಲಿ ಸಾರು ಬರುವುದು. ಎಣ್ಣೆಬುಡ್ಡಿ ಹತ್ತಿಸಿದ ನಂತರ ಒಕೊಂಕೋ ಎಲ್ಲ ಬೋಸಿಗಳಿಂದ ರುಚಿ ನೋಡಿ ನೋಯೆ ಮತ್ತು ಇಕೆಮೆಫೂನಾರ ಮುಂದಕ್ಕೆ ಎರಡು ಭಾಗ ಕೊಡುವನು.

ಈ ರೀತಿಯಾಗಿ ಋತುಮಾನಗಳು ಉರುಳಿದವು. ಆ ನಂತರ ಮಿಡತೆಗಳ ಆಗಮನವಾಯಿತು. ಅನೇಕ ಸಂವತ್ಸರಗಳಿಂದ ಇದು ಸಂಭವಿಸಿರಲಿಲ್ಲ. ಒಂದು ತಲೆಮಾರಿನಲ್ಲಿ ಒಮ್ಮೆ ಬರುವ ಮಿಡತೆಗಳು ನಂತರ ಏಳು ವರ್ಷಗಳ ಕಾಲ ಪ್ರತಿ ವರ್ಷವೂ ಬಂದೆರಗುವುವು. ಇದಾದ ಬಳಿಕ ಇನ್ನೊಂದು ತಲೆಮಾರಿನ ತನಕ ಪತ್ತೆಯಿಲ್ಲದಾಗುವುವು ಎಂದು ಹಿರಿಯರು ಹೇಳುತ್ತಾರೆ. ದೂರ ದೇಶಕ್ಕೆ ಹೊರಟು ಹೋಗುವ ಅವು ಕುಬ್ಜರಾದ ಜನರು ಕಾವಲಿರುವ ಗುಹೆಯೊಂದ ರೊಳಗೆ ಸೇರಿಕೊಳ್ಳುವುವು. ಆ ನಂತರ ಇನ್ನೊಂದು ತಲೆಮಾರು ಕಳೆದ ಮೇಲೆ ಗುಹೆಯ ಬಾಗಿಲು ತೆರೆದಾಗ ಅವು ಉಮೋಫಿಯಾಕ್ಕೆ ಬರುವುವು.

ಕಟಾವೆಲ್ಲ ಮುಗಿದಿದ್ದ ತಣ್ಣಗಿನ ಹರ್ಮಟನ್‌ಗಾಳಿ ಕಾಲದಲ್ಲಿ ಬಂದ ಮಿಡತೆ ಗಳು ಹೊಲಗಳಲ್ಲಿನ ಹುಲ್ಲನ್ನೆಲ್ಲ ಹುರಿದು ಮುಕ್ಕಿದವು.

ಕೆಮ್ಮಣ್ಣಿನ ಗೋಡೆಯ ರಿಪೇರಿ ಕೆಲಸದಲ್ಲಿ ಒಕೊಂಕೋ ಮತ್ತು ಇಬ್ಬರು ಹುಡುಗರು ತೊಡಗಿದ್ದರು. ಕಟಾವಿನ ಕಾಲ ಮುಗಿಯುತ್ತಿದ್ದಂತೆಯೇ ಸಾಮಾನ್ಯ

ವಾಗಿ ಅವರು ಮಾಡುತ್ತಿದ್ದ ಹಗುರವಾದ ಕೆಲಸವಿದು. ಮುಂದೆ ಬರುವ ಮಳೆಗಾಲ ದಲ್ಲಿ ಗೋಡೆಯ ರಕ್ಷಣೆಗೆಂದು ಅವರ ಮೇಲ್ಭಾಗಕ್ಕೆ ಮುಟ್ಟಾಳೆಗರಿಯನ್ನು ಮಂದವಾಗಿ ಹೊದಿಸುವುದು ವಾಡಿಕೆ. ಒಕೊಂಕೋ ಹೊರಮೈ ರಿಪೇರಿಯಲ್ಲಿ ತೊಡಗಿದರೆ ಆ ಹುಡುಗರಿಬ್ಬರು ಗೋಡೆಯ ಒಳಭಾಗದಲ್ಲಿ ಕಾರ್ಯನಿರತರಾಗಿದ್ದರು. ಗೋಡೆಯ ಮೇಲ್ಭಾಗದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಅಲ್ಲಲ್ಲೆ ರಂಧ್ರಗಳಿದ್ದವು. ಆ ರಂಧ್ರಗಳ ಮೂಲಕ ಹುರಿಯನ್ನು ತೂರಿಸಿ ಆಚೆಕಡೆ ಕೊಟ್ಟರೆ ಒಕೊಂಕೋ ಬಲವಾಗಿ ಗಂಟು ಹಾಕಿ ಗರಿ ಭದ್ರವಾಗಿ ಕೂರುವಂತೆ ಮಾಡುತ್ತಿದ್ದ.

ಸೌದೆಗೆಂದು ಹೆಂಗಸರು ಹೊಲಗಳಿಗೆ ನಡೆದಿದ್ದರು, ಚಿಕ್ಕ ಚಿಕ್ಕ ಮಕ್ಕಳು ಆಟ ವಾಡಿಕೊಳ್ಳಲು ಅಕ್ಕಪಕ್ಕದ ಹಟ್ಟಿಗಳಿಗೆ ಹೋಗಿದ್ದರು. ವಾತಾವರಣದಲ್ಲಿದ್ದ ಹರ್ಮ ಟನ್ ಹವೆ ಇಡೀ ಜಗತ್ತಿನ ಮೇಲೆ ಒಂದು ಬಗೆಯ ಮಂಪರು ತರುವಂತೆ ಕಾಣು ತ್ತಿತ್ತು. ಒಕೊಂಕೋ ಮತ್ತು ಹುಡುಗರು ಮೌನವಾಗಿ ತಮ್ಮ ಕೆಲಸ ಮುಂದು ವರಿಸಿದ್ದರು. ಗೋಡೆಗೆ ಹೊದಿಸಲು ಹೊಸದಾಗಿ ಗರಿಯೊಂದನ್ನು ಮೇಲಕ್ಕೆತ್ತಿದಾಗ ಅಥವಾ ಕೋಳಿಯೊಂದು ತರಗೆಲೆಯ ಗುಪ್ಪೆಯನ್ನು ಕೆದಕಿ ನಿರಂತರವಾದ ಆಹಾರ ಶೋಧನೆಯಲ್ಲಿ ತೊಡಗುವಾಗ ಮಾತ್ರ ಹೆಪ್ಪುಗಟ್ಟಿದ್ದ ಮೌನ ಕಲಕುತ್ತಿತ್ತು.

ಇದ್ದಕ್ಕಿದ್ದಂತೆಯೇ ಧರೆಯ ಮೇಲೆ ದಟ್ಟವಾದ ನೆರಳು ಕವಿದುಕೊಂಡತಾಗಿ, ಕಪ್ಪು ಮೋಡಗಳ ಹಿಂದೆ ಸೂರ್ಯ ಮರೆಯಾದಂತಾಯಿತು. ಅಕಾಲದ ಮಳೆಯೇ ನಾದರೂ ಆಗಬಹುದೇ ಎಂದು ಒಕೊಂಕೋ ತಲೆ ಎತ್ತಿ ನೋಡಿದ. ಆ ಕ್ಷಣದಲ್ಲಿ ಹರ್ಷೋದ್ಗಾರ ಎಲ್ಲ ಕಡೆಯಿಂದ ಕೇಳಿ ಬಂದು ಮಧ್ಯಾಹ್ನದ ಮಂಪರಿನ ಮಡಿಲಿಗೆ ಜಾರಿದ್ದ ಊರಿಗೆ ಊರೇ ದಿಗ್ಗನೆ ಎಚ್ಚರವಾದಂತೆ ಮತ್ತೆ ಚುರುಕಾದ ಚಟುವಟಿಕೆ ಉಮೋಫಿಯಾದಲ್ಲಿ ಕಂಡು ಬಂದಿತು.

"ಮಿಡತೆಗಳು ಇಳೀತಾ ಇವೆ," ತಾವು ಮಾಡುತ್ತಿದ್ದ ಕೆಲಸಗಳನ್ನು ಅಲ್ಲಲ್ಲಿಯೇ ಬಿಟ್ಟು ದೊಡ್ಡವರು, ಚಿಕ್ಕವರು, ಹೆಂಗಸರು ಮಕ್ಕಳಾದಿಯಾಗಿ ತಾವು ಅದುವರೆಗೆ ಕಂಡರಿಯದ ಅಪೂರ್ವವಾದ ದೃಶ್ಯವನ್ನು ನೋಡಲು ಬಯಲಿಗೆ ಬಂದರು. ಅನೇಕ ವರ್ಷಗಳಿಂದ ಮಿಡತೆಗಳು ಬಂದಿರಲಿಲ್ಲ, ಮುದುಕರು ಮಾತ್ರ ಅವು ಮೊದಲು ಬಂದಿ ದ್ದನ್ನು ಕಂಡಿದ್ದರು.

ಮೊದಮೊದಲು ಒಂದು ಪುಟ್ಟ ಗುಂಪು ಬಂತು. ಕ್ಷೇತ್ರವನ್ನು ಅಜಮಾಯಿಶಿ ಮಾಡಲು ಬಂದಂಥ ಮುಂಚೂಣಿಯವರ ಗುಂಪದು. ತರುವಾಯ ದಿಗಂತದಲ್ಲಿ ದಟ್ಟ ವಾದ ಕಪ್ಪು ಮೋಡದೋಪಾದಿಯಲ್ಲಿ ಕಾಣಿಸಿಕೊಂಡ ತಂಡ ಉಮೋಫಿಯಾದ ಕಡೆ ನಿಧಾನವಾಗಿ ತೇಲುತ್ತಾ ಬಂತು. ಕ್ಷಣಾರ್ಧದಲ್ಲಿ ಇಡೀ ಆಕಾಶದ ಅರ್ಧಭಾಗವನ್ನು

ಆವರಿಸಿದ ಮಿಡತೆಗಳು ಎಡೆಯಿಲ್ಲದಂತೆ ಜಮಾಯಿಸಿದವು; ಮಧ್ಯೆ ಮಧ್ಯೆ ಸ್ವಲ್ಪ ಖಾಲಿ ಕಂಡ ಭಾಗಗಳು ನಕ್ಷತ್ರಗಳ ತುಣುಕುಗಳ ಹಾಗೆ ಮಿನುಗುತ್ತಿದ್ದವು. ಶಕ್ತಿ ಮತ್ತು ಸೌಂದರ್ಯದ ಸಂಗಮವಾದ ಆ ದೃಶ್ಯ ಅದ್ಭುತವಾಗಿತ್ತು.

ಉದ್ರೇಕಗೊಂಡು ಉತ್ಸಾಹದಲ್ಲಿ ಮಾತನಾಡುತ್ತಿದ್ದ ಜನರು ಆ ರಾತ್ರಿ ಮಿಡತೆಗಳು ಅಲ್ಲಿಯೇ ತಂಗಲಿ ಎಂದು ಪ್ರಾರ್ಥಿಸುತ್ತಿದ್ದರು. ಅನೇಕ ವರ್ಷಗಳಿಂದ ಮಿಡತೆಗಳು ಉಮೋಫಿಯಾದಲ್ಲಿ ಕಾಣಿಸಿಕೊಳ್ಳದಿದ್ದರೂ ತಿನ್ನಲು ಅವು ಬಹಳ ರುಚಿಕರ ವೆಂದು ಮಾತ್ರ ಎಲ್ಲರಿಗೂ ಗೊತ್ತಿತ್ತು. ಅಂತೂ ಮಿಡತೆಗಳು ಇಳಿದವು. ಮರಗಳ ಮೇಲೆ, ಹುಲ್ಲಿನ ದಳಗಳ ಮೇಲೆ ಕುಳಿತವು; ನೆಲವನ್ನೆಲ್ಲಾ ಮುಚ್ಚಿದವು; ಛಾವಣಿ ಏರಿದವು. ಅವುಗಳ ಭಾರಕ್ಕೆ ಭಾರಿ ಮರಗಳೂ ಮುರಿದು ಬಿದ್ದವು. ಹಸಿದ ಆ ಕೀಟ ಕೋಟಿಯಿಂದ ಆವೃತವಾದ ನಾಡೆಲ್ಲಾ ಕಣ್ಣು ಕಾಣುವವರೆಗೂ ಮಣ್ಣಿನ ಬಣ್ಣಕ್ಕೆ ತಿರುಗಿತು.

ಆಷ್ಟೊತ್ತಿಗಾಗಲೇ ಜನರು ಮಿಡತೆಗಳನ್ನು ಹಿಡಿಯಲು ಬುಟ್ಟಿ ತೆಗೆದುಕೊಂಡು ಹೊರಗೆ ಹೋಗಲು ಪ್ರಯತ್ನಿಸಿದರು, ಆದರೆ ಕತ್ತಲಾಗುವವರೆಗೆ ತಡೆಯಿರಿ ಎಂದು ವಯಸ್ಸಾದವರು ವಿವೇಕ ಹೇಳಿದರು. ಅವರ ಸೂಚನೆ ಸೂಕ್ತವಾದುದೇ ಆಗಿತ್ತು. ಪೊದೆಗಳ ಮೇಲೆ ಬೀಡುಬಿಟ್ಟ ಮಿಡತೆಗಳ ರೆಕ್ಕೆಗಳು ರಾತ್ರಿ ಹಿಮದಲ್ಲಿ ಒದ್ದೆಯಾಗಿ ದ್ದವು. ಹರ್ಮಟನ್ ಹವೆಯ ಕೊರೆಯುವ ಗಾಳಿಯನ್ನು ಲೆಕ್ಕಿಸದೆ ಊರಿಗೆ ಊರೇ ಹೊರಗೆ ಬಂತು. ಚೀಲಗಳಲ್ಲಿ, ಮಡಿಕೆಗಳಲ್ಲಿ ಮಿಡತೆಗಳನ್ನು ಗೋರಿ ಗೋರಿ ತುಂಬಿ ದರು. ಮರುದಿನ ಮಣ್ಣಿನ ಬಾಣಲಿಯಲ್ಲಿ ಅವನ್ನು ಹುರಿದು ಬಿಸಿಲಿಗೆ ಹಾಕಿ ಗರಿ ಗರಿಯಾಗಿ ಒಣಗಿಸಿದರು. ಅನೇಕ ದಿನಗಳ ಕಾಲ ಈ ಅಪರೂಪವಾದ ತಿನಿಸನ್ನು ಇಟ್ಟುಕೊಂಡು ತಾಳೆಎಣ್ಣೆಯಲ್ಲಿ ನಂಜಿಕೊಂಡು ಜನ ತಿಂದರು.

ಇಕೆಮೆಫೂನಾ ಮತ್ತು ನೋಯೆಯ ಜೊತೆ ಈ ತಿನಿಸನ್ನು ತಿನ್ನುತ್ತಾ ಮನಸ್ಸು ಪೂರ್ತಿ ಸೆರೆ ಕುಡಿಯುತ್ತಾ ಕುಳಿತಿದ್ದ ಒಕೊಂಕೋನನ್ನು ಕಾಣಲು ಒಗ್‌ಬಾಫಿ ಎಜಿ ಯುಡು ಬಂದ. ಉಮೋಫಿಯಾದ ತಾಕಿನಲ್ಲೆಲ್ಲಾ ಎಜಿಯುಡು ಬಹಳ ವಯಸ್ಸಾ ದವನು. ತನ್ನ ಹರೆಯದಲ್ಲಿ ಬಹಳ ಪರಾಕ್ರಮಶಾಲಿಯೆಂದೂ ಹೆಸರುವಾಸಿಯಾಗಿ ದ್ದವನು, ಹಾಗಾಗಿ ಜನ ಅವನನ್ನು ತುಂಬಾ ಗೌರವಿಸುತ್ತಾರೆ. ಊಟ ಗೀಟ ಒಲ್ಲೆ ಎಂದ ಆತ ನಿನ್ನ ಹತ್ತಿರ ಸ್ವಲ್ಪ ಮಾತನಾಡಬೇಕಾಗಿತ್ತು ಅಂತ ಹೇಳಿ ಒಕೊಂಕೋನನ್ನು ಹೊರಗೆ ಕರೆದೊಯ್ದ. ಇಬ್ಬರೂ ಹೊರಗೆ ನಡೆದರು; ಆಸರೆಗಾಗಿ ಮುದುಕ ಕೋಲೂರಿ ಕೊಂಡಿದ್ದ. ತಮ್ಮ ದನಿ ಅಜುಬಾಜುವಿನವರಿಗೆ ಕೇಳಿಸುವುದಿಲ್ಲವೆಂದು ಖಾತ್ರಿಯಾದ ಮೇಲೆ ಮುದುಕ ಒಕೊಂಕೋಗೆ ಹೇಳಿದ:

"ಆ ಹುಡುಗ ನಿನ್ನನ್ನ ಅಪ್ಪ ಅಂತ ಕರೀತಾನೆ. ಅವನ ಸಾವಿನಲ್ಲಿ ನೀನು ಭಾಗಿಯಾಗಬೇಡ." ಒಕೊಂಕೋಗೆ ಆಶ್ಚರ್ಯವಾಯಿತು; ಏನೋ ಹೇಳಬೇಕೆನ್ನುವಷ್ಟರಲ್ಲಿ ಆ ಮುದುಕನೇ ಮಾತು ಮುಂದುವರಿಸಿದ:

"ಹೌದು ಉಮೋಫಿಯಾ ಅವನನ್ನು ಕೊಲ್ಲಲು ತೀರ್ಮಾನಿಸಿದೆ. ಗಿರಿ ಮತ್ತು ಗುಹೆಗಳ ದೇವತೆ ಆ ತೀರ್ಮಾನ ಕೊಟ್ಟುಬಿಟ್ಟಾಗಿದೆ. ಪದ್ಧತಿಯ ಪ್ರಕಾರ ಉಮೋಫಿಯಾದ ಹೊರಗೆ ಆತನನ್ನು ಕರೆದುಕೊಂಡು ಹೋಗಿ ಕೊಲ್ಲುತ್ತಾರೆ. ಆದರೆ ನಾನು ಹೇಳುವುದಿಷ್ಟೆ. ನೀನು ಮಾತ್ರ ಆ ಕೊಲೆಯಲ್ಲಿ ಭಾಗಿಯಾಗಬೇಡ. ತನ್ನ ಅಪ್ಪ ಅಂತ ನಿನ್ನನ್ನು ಅವನು ಕರೀತಾನೆ."

ಮಾರನೆಯ ದಿನ ನಸುಕಿನಲ್ಲಿಯೇ ಉಮೋಫಿಯಾದ ಸುತ್ತಲ ಒಂಭತ್ತು ಗ್ರಾಮಗಳಿಂದ ಬಂದ ಮುಖಂಡರುಗಳು ಒಕೊಂಕೋನ ಮನೆಯಲ್ಲಿ ಸೇರಿದರು; ಮೆಲುದನಿಯಲ್ಲಿ ಅವರು ಮಾತಿಗಾರಂಭಿಸುವುದಕ್ಕೆ ಮೊದಲು ಇಕೆಮೆಫೂನಾ ಮತ್ತು ನ್ಯೋಯೆಯನ್ನು ಹೊರಗೆ ಕಳಿಸಿದರು. ಅವರೇನು ಹೆಚ್ಚು ಹೊತ್ತು ಉಳಿಯಲಿಲ್ಲ; ಅವರು ತೆರಳಿದ ನಂತರ ಬಹಳ ಹೊತ್ತಿನವರೆಗೆ ಒಕೊಂಕೋ ಕೆನ್ನೆಗೆ ಕೈಕೊಟ್ಟು ಸುಮ್ಮನೆ ಕುಳಿತುಬಿಟ್ಟ. ಸಂಜೆಯ ಹೊತ್ತಿಗೆ ಒಕೊಂಕೋ ಇಕೆಮೆಫೂನಾನನ್ನು ಕರೆದು ಮಾರನೇ ದಿನ ಅವನ ಊರಿಗೆ ಕರೆದೊಯ್ಯಬೇಕಾಗಿದೆ ಎಂದು ತಿಳಿಸಿದ. ಆ ಮಾತನ್ನು ಕದ್ದು ಕೇಳಿದ ನ್ಯೋಯೆ ಗೋಳೋ ಎಂದು ಅಳಲು ಪ್ರಾರಂಭಿಸಿದಾಗ, ಒಕೊಂಕೋ ಅವನನ್ನು ಯದ್ವಾತದ್ವಾ ಬಡಿದ. ಇಕೆಮೆಫೂನಾಗೆ ಮಾತ್ರ ಏನೂ ತಿಳಿಯದಾಗಿತ್ತು. ತನ್ನ ಮನೆ ಮಠವೆಲ್ಲ ಅವನಿಗೀಗ ಮರೆತೇ ಹೋಗಿತ್ತು. ತನ್ನ ತಾಯಿ ಮತ್ತು ತಂಗಿಯನ್ನು ಆಗಾಗ ನೆನಪಿಸಿಕೊಳ್ಳುವುದಿದೆ; ಮತ್ತೆ ಅವರನ್ನು ಭೇಟಿಯಾಗುವುದಾದರೆ ಬಹಳ ಸಂತೋಷ. ಹಿಂದೊಮ್ಮೆ ಹೀಗೆಯೇ ಜನರು ತನ್ನ ಅಪ್ಪನೊಡನೆ ಗುಸುಗುಸು ಎಂದು ಮಾತನಾಡಿದ್ದರು; ಈಗ ಮತ್ತೆ ಅದೆಲ್ಲ ಪುನರಾವರ್ತನೆಯಾಗುತ್ತಿರುವಂತೆ ಕಂಡಿತು.

ನಂತರ ನ್ಯೋಯೆ ತನ್ನ ಅಮ್ಮನ ಹಟ್ಟಿಗೆ ಹೋಗಿ ಇಕೆಮೆಫೂನಾ ಊರಿಗೆ ಹೋಗುತ್ತಿರುವ ಸಂಗತಿ ತಿಳಿಸಿದ. ಮೆಣಸು ಕುಟ್ಟುತ್ತಿದ್ದ ಆಕೆ ಒನಕೆಯನ್ನು ಅಲ್ಲಿಯೇ ಬಿಸಾಕಿ ತನ್ನ ಎದೆಯ ಮೇಲೆ ಅಡ್ಡಲಾಗಿ ಕೈಯಿಟ್ಟು 'ಅಯ್ಯೋ, ಕಂದಾ' ಎಂದಷ್ಟೇ ನಿಟ್ಟುಸಿರು ಬಿಟ್ಟಳು.

ಮಾರನೆಯ ದಿನ ಸೆರೆತುಂಬಿದ ಮಡಿಕೆಯ ಸಮೇತ ಜನರು ಬಂದರು. ಬುಡಕಟ್ಟಿನವರ ಸಭೆಗೆ ಪಕ್ಕದ ಗ್ರಾಮಕ್ಕೆ ಭೇಟಿ ನೀಡುವಾಗ ತೊಡುವ ವಿಶೇಷ ಉಡುಗೆಯನ್ನು ಅವರು ತೊಟ್ಟಿದ್ದರು. ಬಲಕಂಕುಳಿಂದ ವಸ್ತ್ರವನ್ನು ಇಳೀಬಿಟ್ಟು, ಆಡಿನ ಚರ್ಮದ ಚೀಲಗಳನ್ನು ಮತ್ತು ಮುಚ್ಚುಗತ್ತಿಯನ್ನು ಹೊರೆಯಲ್ಲಿ ಇಟ್ಟು ಎಡದ

ಶೂದ್ರ

ಭುಜಕ್ಕೆ ತೂಗುಹಾಕಿಕೊಂಡಿದ್ದರು. ಒಕೊಂಕೋ ಕೂಡಲೇ ಹೊರಡಲು ಸಿದ್ಧನಾದ. ಉಳಿದವರೂ ಹೊರಡಲು ಸಿದ್ಧರಾದಾಗ ಇಕೆಮೆಫೂನಾ ಸುರೆಯ ಮಡಕೆಯನ್ನು ಹೊತ್ತು ನಡೆದ. ಒಕೊಂಕೋನ ಮನೆಯ ಆವರಣದಲ್ಲಿ ಸ್ಮಶಾನಸದೃಶವಾದ ಮೌನ ಆವರಿಸಿತ್ತು. ಪುಟ್ಟ ಮಕ್ಕಳಿಗೂ ಎಲ್ಲ ಅರ್ಥವಾದಂತಿತ್ತು. ಇಡೀ ದಿನ ತನ್ನ ತಾಯಿಯ ಹಟ್ಟಿಯಲ್ಲಿ ಕುಳಿತ ನೋಯೆಯ ಕಣ್ಣಲ್ಲಿ ನೀರು ಬಟ್ಟಾಡುತ್ತಿತ್ತು. ತಮ್ಮ ಪ್ರಯಾಣದ ಆರಂಭದಲ್ಲಿ ಉಮೋಫಿಯಾದ ಜನರು ಕೇಕೆ ಹಾಕುತ್ತಾ, ಮಿಡತೆಗಳ ಬಗ್ಗೆ, ತಮ್ಮ ಹೆಂಗಸರ ಬಗ್ಗೆ ಮತ್ತು ತಮ್ಮೊಂದಿಗೆ ಬರದೇ ಹಿಂದೇಟು ಹೊಡೆದ ಕೆಲವರು ಹೆಣ್ಣಾಡಿ ಗಂಡಸರ ಬಗ್ಗೆ ಮಾತನಾಡಿಕೊಂಡರು. ಆದರೆ ಉಮೋಫಿಯಾದ ಗಡಿದಾಟುತ್ತಲೇ ಎಲ್ಲರೂ ಮೌನವಾದರು.

ಸೂರ್ಯ ನಿಧಾನವಾಗಿ ನೆತ್ತಿಯ ಮೇಲಕ್ಕೆ ಏರಿದಾಗ ಮರಳಿನ ಹಾದಿಯಲ್ಲಿ ಕಾವು ಹೆಚ್ಚಾಯಿತಲ್ಲದೆ, ಭೂಮಿಯ ಒಳಗಿನ ಉಷ್ಣ ಹೊರಬರತೊಡಗಿತು. ಕಾಡಿನಲ್ಲಿ ಅಲ್ಲಲ್ಲೇ ಕೆಲವು ಹಕ್ಕಿಗಳು ಚಿಲಿಪಿಲಿಗುಟ್ಟುತ್ತಿದ್ದವು. ಜನರು ತರಗೆಲೆಯ ಮೇಲೆ ನಡೆಯುತ್ತಿದ್ದರು. ಎಲ್ಲವೂ ಮೌನದಲ್ಲಿತ್ತು. ದೂರದಲ್ಲಿ ದಮಡಿಯ ಶಬ್ದ ಕೇಳಿ ಬರುತ್ತಿತ್ತು. ಸ್ವಲ್ಪ ಕಾಲ ಜೋರಾಗಿ ಕೇಳಿಸಿ ಮತ್ತೆ ಆ ಶಬ್ದ ಗಾಳಿಯಲ್ಲಿ ಐಕ್ಯ ವಾಯಿತು–ದೂರದ ಬುಡಕಟ್ಟಿನಲ್ಲಿ ಶಾಂತನೃತ್ಯ ನಡೆದಿತ್ತು.

"ಅದು ಓಜೋ ನೃತ್ಯ", ಜನ ತಮ್ಮತಮ್ಮಲ್ಲೇ ಅಂದುಕೊಂಡರು. ಆದರೆ ಆ ಶಬ್ದ ಯಾವ ದಿಕ್ಕಿನಿಂದ ಬರುತ್ತಿದೆ ಎಂದು ಯಾರಿಗೂ ತಿಳಿಯಲಿಲ್ಲ. ಕೆಲವರು ಎಜಿಮಿಲಿ ಅಂದರು, ಉಳಿದವರು ಅಬಾಮೆ ಅಥವಾ ಅನಿಂಟಾ ಎಂದರು. ಅವರು ತಮ್ಮತಮ್ಮಲ್ಲೇ ಸ್ವಲ್ಪ ಹೊತ್ತು ಚರ್ಚೆ ಮಾಡಿ ನಂತರ ಮೌನವಾದರು; ಪುನಃ ದೂರದ ನೃತ್ಯ ಲಯ ಜೋರಾಗಿ ಕೇಳಿಸಿ ಗಾಳಿಯಲ್ಲಿ ಮರೆಯಾಯಿತು. ಯಾರೋ ಒಬ್ಬ ವ್ಯಕ್ತಿ ತನ್ನ ಬುಡಕಟ್ಟಿನ ಬಿರುದೊಂದನ್ನು ತೆಗೆದುಕೊಳ್ಳುತ್ತಿದ್ದ, ನೃತ್ಯ ಮತ್ತು ಜೊತೆಗೆ ದೊಡ್ಡ ಔತಣ ನಡೆದಿತ್ತು.

ಕಾಡಿನ ಒಡಲಲ್ಲಿ ಕಾಲುದಾರಿ ಬರುಬರುತ್ತಾ ಕಿರಿದಾಗಿತ್ತು. ಗಿಡ್ಡ ಮರಗಳು ಮತ್ತು ತೆಳ್ಳಗೆ ಅಲ್ಲೊಂದು ಇಲ್ಲೊಂದು ಚೆಲ್ಲಿಕೊಂಡಿದ್ದ ಪೊದೆಗಳನ್ನು ದಾಟಿ ಮುನ್ನಡೆದಾಗ ಎತ್ತರದ ಮರಗಳು ಅವಕ್ಕಂಟಿದ ಬಳ್ಳಿಗಳು ದಟ್ಟವಾಗಿ ಗೋಚರಿಸಿದವು, ಪ್ರಾಯಶಃ ಕೊಡಲಿಗಾಗಲೀ, ಕಾಡ್ಗಿಚ್ಚಿಗಾಗಲೀ ಆಹುತಿಯಾಗದೆ ಇವು ಅನಾದಿ ಕಾಲದಿಂದಲೂ ಹೀಗೆಯೇ ಇದ್ದಿರಬಹುದೆಂದು ತೋರುತ್ತಿತ್ತು. ಎಲೆಗಳನ್ನು ತೂರಿ ಬರುವ ಸೂರ್ಯನ ಕಿರಣಗಳು ಮಣ್ಣು ದಾರಿಯ ಮೇಲೆ ಬೆಳಕು ನೆರಳಿನ ವಿನ್ಯಾಸವನ್ನು ರಚಿಸಿದ್ದವು.

ತನ್ನ ಬೆನ್ನ ಹಿಂದೆಯೇ ಏನೋ ಗುಸುಗುಸು ಮಾತು ಕೇಳಿದಾಗ ಇಕೆಮೆಫೂನಾ ಗರಕ್ಕನೆ ತಿರುಗಿದ್ದ. ಪಿಸಿಪಿಸಿ ಮಾತನಾಡುತ್ತಿದ್ದ ಆ ವ್ಯಕ್ತಿ ಸ್ವಲ್ಪ ಎತ್ತರದ ದನಿಯಲ್ಲಿ ಬೇಗಬೇಗ ಹೆಜ್ಜೆ ಹಾಕುವಂತೆ ಉಳಿದವರನ್ನು ಗದರಿಕೊಂಡ.

"ಇನ್ನೂ ನಡೀಬೇಕಾದ್ದು ಬಹಳ ಇದೆ", ಅಂದ. ಆ ನಂತರ ಅವನು ಜೊತೆಗೆ ಇನ್ನೊಬ್ಬ, ಇಬ್ಬರೂ ಇಕೆಮೆಫೂನಾನ ಮುಂದೆ ಬಂದು ಸರಸರ ದಾಪುಗಾಲಿಕ್ಕ ತೊಡಗಿದರು.

ಹೊರೆಯಲ್ಲಿಟ್ಟ ಮಚ್ಚುಗತ್ತಿಗಳನ್ನು ಧರಿಸಿದ್ದ ಉಮೋಫಿಯಾದ ಆ ಮಂದಿ ಮುಂದೆ ಮುಂದೆ ಹೆಜ್ಜೆ ಹಾಕಿದರು. ಅವರ ಮಧ್ಯೆ ತಲೆಯ ಮೇಲೆ ಸೆರೆಯ ಗಡಿಗೆಯನ್ನು ಹೊತ್ತುಕೊಂಡು ಇಕೆಮೆಫೂನಾ ಸಾಗಿದ. ಮೊದಮೊದಲು ಮುಂಜಗರವೆನಿಸಿದರೂ ಈಗ ಅವನಿಗೆ ಅಂಜಿಕೆಯಾಗಲಿಲ್ಲ. ಒಕೊಂಕೋ ಅವನ ಬೆನ್ನ ಹಿಂದೆಯೇ ಸಾಗುತ್ತಿದ್ದ. ಒಕೊಂಕೋ ತನ್ನ ನಿಜವಾದ ತಂದೆಯಲ್ಲ ವೆಂದು ಇಕೆಮೆಫೂನಾಗೆ ನಂಬುವುದಕ್ಕೆ ಆಗುತ್ತಿರಲಿಲ್ಲ. ತನ್ನ ನಿಜವಾದ ತಂದೆ ಯನ್ನು ಅವನು ಇಷ್ಟಪಟ್ಟವನೇ ಅಲ್ಲ, ಈ ಮೂರು ವರ್ಷಗಳು ಕಳೆದ ಬಳಿಕವಂತೂ ಅವನ ಬಗ್ಗೆ ಎಲ್ಲ ಮರೆತುಹೋಗಿತ್ತು. ಆದರೆ ಅವನ ಅಮ್ಮ ಮತ್ತು ಅವನ ಮೂರು ವರ್ಷದ ತಂಗಿ–ಈಗ ಅವಳಿಗೆ ಮೂರು ವರ್ಷ ಅಲ್ಲ, ಆರು ವರ್ಷವಾಗಿರುತ್ತದೆ. ಅವಳನ್ನು ತಾನು ಈಗ ಪತ್ತೆ ಹಚ್ಚಬಲ್ಲೆನೇ? ಅವಳು ದೊಡ್ಡವಳಾಗಿರಬಹುದು. ಅವನ ತಾಯಿ ಸಂತೋಷದ ಕಣ್ಣೀರು ಕರೆದು, ತನ್ನ ಮಗನನ್ನು ಅಷ್ಟು ದೊಡ್ಡವನನ್ನಾಗಿ ಮಾಡಿ ವಾಪಸ್ಸು ಕರೆದುಕೊಂಡು ಬಿಟ್ಟದಕ್ಕೆ ಒಕೊಂಕೋನನ್ನು ವಂದಿಸುವಳು. ಈ ಅವಧಿಯಲ್ಲಿ ತನಗೆ ಏನೆಲ್ಲಾ ಸಭವಿಸಿತು ಎಂಬುದನ್ನು ಆಲಿಸಲು ಅವಳು ಉತ್ಸುಕ ಳಾಗುವಳು. ಅದೆಲ್ಲ ಅವನಿಗೀಗ ನೆನಪಿದೆಯೇ? ನೋಯೆ ಮತ್ತು ಅವನ ತಾಯಿಯ ಬಗ್ಗೆ ಮತ್ತು ಮಿಡತೆಗಳ ಬಗ್ಗೆ ಹೇಳಬಹುದು....ನಂತರ ಇದ್ದ ಕ್ಕಿದ್ದಂತೆ ಆಲೋಚನೆಯೊಂದು ಹೊಳೆಯಿತು. ಈಗ ಅವನ ತಾಯಿ ಸತ್ತು ಹೋಗಿರಬಹುದು. ತನ್ನ ಮನಸ್ಸಿನಿಂದಾಚೆ ಈ ಆಲೋಚನೆಯನ್ನು ಬಲವಂತ ವಾಗಿ ಹೊಡೆದೋಡಿಸಲು ಪ್ರಯತ್ನಿಸುವನು. ತಾನು ಚಿಕ್ಕ ಹುಡುಗನಾಗಿ ದ್ದಾಗ ಇಂಥ ಆಲೋಚನೆಗಳನ್ನು ನಿವಾರಿಸಿಕೊಳ್ಳುತ್ತಿದ್ದ ರೀತಿಯಲ್ಲಿ ಮನಸ್ಸಿನ ಲ್ಲಿಯೇ ಇತ್ಯರ್ಥ ಮಾಡಿಕೊಂಡ. ಆಗ ಹೇಳಿಕೊಳ್ಳುತ್ತಿದ್ದ ಹಾಡು ಅವನಿಗೆ ಇನ್ನೂ ನೆನಪಿತ್ತು.

ಇಜೆ ಎಲೀನ, ಎಲೀನ !

ಸಾಲಾ

ಇಜೆ, ಇಲಿಕ್ವಾ ಯ
ಇಕ್ವಾಬ ಅಕ್ವಾ ಒಲಿಗೋಲಿ
ಇಬೆ ಡಂಡ ನೇಜಿ ಇಜೆ
ಇಬೆ ಉಜೂಜು ನೇಟೆ ಎಗ್ವ್ವ
ಸಾಲಾ!

ಇದನ್ನು ತನ್ನ ಮನಸ್ಸಿನಲ್ಲಿಯೇ ಹಾಡಿಕೊಂಡು, ಅದರ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕಿದ. ಹಾಡು ತನ್ನ ಬಲಗಾಲಿಗೆ ಮುಗಿದರೆ ಅವರಮ್ಮ ಬದುಕಿದ್ದಾಳೆ ಅಂತ. ಎಡಗಾಲಿಗೆ ಮುಗಿದರೆ ಅವಳು ಸತ್ತಿದ್ದಾಳೆ ಅಂತ. ಅಲ್ಲ, ಸತ್ತಿದ್ದಾಳೆ ಅಂತ ಅಲ್ಲ, ಖಾಯಿಲೆ ಬಿದ್ದಿದ್ದಾಳೆ ಅಂತ. ಬಲಗಾಲಿಗೆ ಹಾಡು ಮುಗಿಯಿತು, ಆದ್ದರಿಂದ ಅವಳು ಬದುಕಿದ್ದಾಳೆ ಮತ್ತು ಕುಶಲವಾಗಿದ್ದಾಳೆ. ಮತ್ತೊಮ್ಮೆ ಹಾಡಿದ, ಈ ಬಾರಿ ಎಡಗಾಲಿಗೆ ಮುಗಿಯಿತು. ಆದರೆ ಎರಡನೇ ಬಾರಿ ಲೆಕ್ಕಕ್ಕಿಲ್ಲವಲ್ಲ. ಮೊದಲನೇದು ಚುಕ್ವು ಅಥವಾ ದೇವರಿಗೆ ಬಿಟ್ಟದ್ದು. ಮಕ್ಕಳಿಗೆಲ್ಲಾ ಬಹಳ ಪ್ರಿಯವಾದ ಗಾದೆ ಮಾತಿದು. ಇಕೆಮೆಫೂನಾ ತಾನು ಮತ್ತೆ ಮಗುವಾದಂತೆ ಅಂದುಕೊಂಡ. ಪುನಃ ತನ್ನ ತಾಯಿಯ ಬಳಿ ಹೋಗುತ್ತಿರುವೆನೆಂಬ ಕಾರಣಕ್ಕಾಗಿ ಪ್ರಾಯಶಃ ಹೀಗಾಗಿರಬಹುದು.

ಅವನ ಹಿಂದೆಯೇ ಬರುತ್ತಿದ್ದ ಆಸಾಮಿಯೊಬ್ಬ ತನ್ನ ಗಂಟಲನ್ನು ಸರಿಮಾಡಿಕೊಂಡ. ಇಕೆಮೆಫೂನಾ ಹಿಂದಕ್ಕೆ ತಿರುಗಿ ನೋಡಿದಾಗ ಆ ವ್ಯಕ್ತಿ ಅವನನ್ನು ಗದರಿಸಿ 'ಮುಂದೆ ನೋಡಿಕೊಂಡು ನಡಿ, ಹಿಂದಕ್ಕೆ ತಿರುಗಬೇಡ' ಎಂದ. ಅವನು ಹೇಳಿದ ದರ್ಪಕ್ಕೆ ಇಕೆಮೆಫೂನಾನ ಜಂಘಾಬಲ ಉಡುಗಿಹೋಯಿತು. ತಾನು ಹೊತ್ತಿದ್ದ ಕರಿ ಮಡಕೆಯ ಮೇಲಿಟ್ಟ ಕೈಗಳು ಕಂಪಿಸುತ್ತಿದ್ದವು. ಒಕೊಂಕೋ ಹಿಂದೆ ಸರಿದದ್ದು ಏಕೆ? ಇಕೆಮೆಫೂನಾನ ಕಾಲುಗಳು ಕರಗಿ ನೀರಾದಂತೆ ಭಾಸವಾಯಿತು. ಹಿಂದಕ್ಕೆ ತಿರುಗಿ ನೋಡಲು ಅವನಿಗೆ ಭಯವಾಗಿತ್ತು.

ಗಂಟಲು ಸರಿ ಮಾಡಿಕೊಂಡಿದ್ದ ಆ ಮನುಷ್ಯ ತನ್ನ ಮಚ್ಚುಗತ್ತಿಯನ್ನು ಮೇಲೆತ್ತುವ ಸಮಯಕ್ಕೆ ಒಕೊಂಕೋ ಬೇರೆಕಡೆಗೆ ಮುಖ ಮಾಡಿಕೊಂಡ. ಏಟು ಬಿದ್ದದ್ದು ಅವನಿಗೆ ಕೇಳಿಸಿತು. ಮಡಕೆ ಒಡೆದು ಚೂರಾಗಿ ಮರಳಲ್ಲಿ ಸೇರಿತು.

"ನನ್ನ ತಂದೆಯೇ, ಅವರು ನನ್ನನ್ನು ಕೊಂದರು!" ಎಂದು ಚೀರುತ್ತ ಇಕೆಮೆಫೂನಾ ತನ್ನೆಡೆಗೆ ಓಡಿ ಬರುವುದೂ ಕಂಡಿತು. ಭಯದಲ್ಲಿ ದಿಗ್ಭ್ರಾಂತನಾದ ಒಕೊಂಕೋ ತನ್ನ ಮಚ್ಚು ಹಿರಿದು ಅವನನ್ನು ಎರಡು ತುಂಡು ಮಾಡಿದ. ಅವರು ತನ್ನನ್ನು ಹೆಣ್ಣಾಡಿಯೆಂದು ಕರೆದುಬಿಡುವರು ಎಂದು ಹೆದರಿದ್ದ.

ಆ ರಾತ್ರಿ ತಮ್ಮಪ್ಪ ವಾಪಸ್ಸು ಮನೆಗೆ ಬಂದಾಗ ಇಕೆಮೆಫೂನಾನ ಕೊಲೆಯಾಗಿದೆ

ಎಂದು ನೋಯೆಗೆ ಅರಿವಾಗಿತ್ತು; ಎಳೆದು ಕಟ್ಟಿದ ಬಿಲ್ಲಿನ ಹೆದೆ ತುಂಡಾಗುವ ಹಾಗೆ ಅವನ ಅಂತರಂಗದಲ್ಲಿ ಏನೋ ಭಗ್ನವಾಗಿತ್ತು. ಅವನು ಅಳಲಿಲ್ಲ. ಸಪ್ಪಗಾಗಿದ್ದ. ಕಳೆದ ಕಟಾವಿನ ಕಾಲದಲ್ಲಿ ಅವನಲ್ಲಿ ಇದೇ ರೀತಿಯ ಅನುಭವವಾಗಿತ್ತು. ಪ್ರತಿಯೊಂದು ಪುಟ್ಟ ಮಗುವಿಗೂ ಕಟಾವಿನ ಕಾಲವೆಂದರೆ ಬಹಳ ಇಷ್ಟ. ತಮ್ಮ ಕೈಯಲ್ಲಿ ಸುವರ್ಣಗಡ್ಡೆಯನ್ನು ಅಗೆದು ತೆಗೆಯಲು ಆಗದಿದ್ದರೂ ಹೊಲದಲ್ಲಿ ದೊಡ್ಡವರು ಅಗೆದು ತೆಗೆದದ್ದನ್ನು ಬೇಯಿಸಲು ಅನುಕೂಲವಾಗುವಂತೆ ಸೌದೆ ಆಯಲು ತೊಡಗುತ್ತಿದ್ದರು ಮಕ್ಕಳು. ಈ ರೀತಿಯಾಗಿ ಸುಟ್ಟ ಸುವರ್ಣಗಡ್ಡೆಯನ್ನು ಕೆಂಪನೆಯ ತಾಳೆ ಎಣ್ಣೆಯಲ್ಲಿ ಅದ್ದಿ ತಿನ್ನುವ ಬಯಲಿನ ಊಟಕ್ಕೆ ಮನೆಯ ಯಾವ ರುಚಿಕರವಾದ ಊಟವೂ ಸರಿಸಾಟಿಯಾಗಲಾರದು. ಹೋದ ಕಟಾವಿನ ಕಾಲದ ಇಂಥದೇ ಒಂದು ದಿನ ತನ್ನ ಅಂತರಂಗದಲ್ಲಿ ತಂತು ಕಡಿದು ಹೋಗಿದ್ದ ಈಗಿನ ಮಾದರಿಯ ನೋವನ್ನೇ ನೋಯೆ ಅನುಭವಿಸಿದ್ದ. ಸುವರ್ಣಗಡ್ಡೆಯನ್ನು ಬುಟ್ಟಿಯಲ್ಲಿ ಹೊತ್ತುಕೊಂಡು ಸಂಜೆಯ ವೇಳೆ ಝುರಿ ಆಚೆಯ ಹೊಲದಿಂದ ವಾಪಸ್ಸು ಬರುವಾಗ ದಟ್ಟ ಕಾಡಿನ ಮಧ್ಯದಿಂದ ಹಸುಗೂಸೊಂದು ರೋದಿಸುವ ದನಿ ಕೇಳಿ ಬಂದಿತ್ತು. ಮಾತನಾಡುತ್ತಿದ್ದ ಹೆಂಗಸರು ಗಪ್ಪನೆ ಮಾತು ನಿಲ್ಲಿಸಿ ತಮ್ಮ ನಡಿಗೆಯನ್ನು ವೇಗಗೊಳಿಸಿದ್ದರು. ಅವಳಿ ಜವಳಿ ಮಕ್ಕಳನ್ನು ಮಣ್ಣಿನ ಮಡಕೆಯಲ್ಲಿಟ್ಟು ಕಾಡಿಗೆ ಎಸೆದು ಬಿಡುವರೆಂದು ನೋಯೆ ಕೇಳಿದ್ದನೇ ಹೊರತು ಕಣ್ಣಾರೆ ಕಂಡಿರಲಿಲ್ಲ. ಮೈಯಾದ ಮೈಗೆ ಚಳಿ ಇಳಿದಂತಾಗಿ ರಾತ್ರಿವೇಳೆ ಒಬ್ಬನೇ ನಡೆಯುವ ವ್ಯಕ್ತಿಗೆ ಗಾಳಿ ಕಾಣಿಸಿಕೊಂಡರೆ ಆಗುವ ಅನುಭವವೇ ಇವನಿಗೂ ಆಗಿತ್ತು. ತರುಣದಲ್ಲಿ ತನ್ನೊಳಗೆ ತಂತು ಒಂದು ಕಡಿದಂತೆ ಭಾಸವಾಗಿತ್ತು. ಇಕೆಮೆಫೂನಾನ ಕೊಲೆ ಮಾಡಿ ಆ ರಾತ್ರಿ ತಮ್ಮ ಅಪ್ಪ ವಾಪಸ್ಸು ಮನೆಗೆ ಬಂದಾಗಲೂ ಇದೇ ರೀತಿ ನೋಯೆಯ ಅಂಗದೊಳಗೆ ಭಂಗವಾದ ಬಗೆಯಾಗಿತ್ತು. ●

ಒಳನೋಟ

ಪ್ರಿಯ ಶೂದ್ರ

ಮೊನ್ನೆ ಶೂದ್ರದಲ್ಲಿ ಬಿ.ಸಿ.ದೇಸಾಯರ ಬಗ್ಗೆ ಬರೆದ ನಿನ್ನ ಬರಹ ಓದಿ ಖಿನ್ನನಾದೆ. ಈ ಬದುಕೇ ಎಷ್ಟೊಂದು ವಿಚಿತ್ರಗಳನ್ನು, ಎಷ್ಟೊಂದು ನೋವುಗಳನ್ನು ಒಳಗೊಂಡಿದೆ. ಎಲ್ಲ ಇದ್ದೂ ಇಲ್ಲದಂತಾದ ಈ ದೇಸಾಯಿಯನ್ನು ನಾನು ನೋಡಿದ್ದರೆ ಎಷ್ಟು ಚೆನ್ನಾಗಿತ್ತು ಅನಿಸಿತು. ನಿನ್ನ ಆತ್ಮೀಯವಾದ ಆ ಬರಹ ನನ್ನ ಕಣ್ಣಾಲಿಗಳ ತುಂಬಿಸಿತು.

ಆದರೆ ಶೂದ್ರ ಈ ದೇಸಾಯಿ ಬದುಕಿದ್ದಾಗ ಈತನ ವ್ಯಕ್ತಿತ್ವದ ಒಂದಂಶವನ್ನೂ ಹೊರಜಗತ್ತಿಗೆ ತೋರಿಸದೆ ಆತನ ವೈಯಕ್ತಿಕ ಪರಿಚಯವಿದ್ದ ನಿನ್ನಂಥವರೂ ಯಾಕೆ ಸುಮ್ಮನಿದ್ದಿರೋ ನನಗೆ ಒಗಟಿನಂತೆ ಕಾಡುತ್ತಿದೆ. ಆ ವ್ಯಕ್ತಿಯ ಕತೆಗಳನ್ನು ಓದಿದ

ಮೇಲಂತೂ ಆ ಸಂಕಲನದ ಬಗ್ಗೆ ನಮ್ಮ ಕನ್ನಡ ವಿಮರ್ಶಕರು ಯಾಕೆ ಮೌನ ವಹಿಸಿದರೋ ಅವರ ಒಂದು ಒಗಟೇ. ವಿನಾಕಾರಣ ಉದಾಸೀನ ಎಂಥ ಕಲ್ಲೆದೆಯನ್ನೂ ನಡುಗಿಸಬಲ್ಲದು. ಸಾಹಿತ್ಯ ರಾಜಕಾರಣದಲ್ಲಿ ಮುಳಗದ ಎಂಥ ಗಟ್ಟಿ ಸಾಹಿತಿಯನ್ನೂ ಅಸಾಹಿತಿಯನ್ನಾಗಿ ಮಾಡುವ ಶಕ್ತಿ ನಮ್ಮ ಲೋಕದಲ್ಲಿ ಸಾಧ್ಯ ಎಂಬುದನ್ನು ನಮ್ಮ ದೇಸಾಯಿ ಘಟನೆ ಸ್ಪಷ್ಟಪಡಿಸುತ್ತಿದೆ. ಆದರೆ ನಿನ್ನ ಬರವಣಿಗೆ ನೋಡಿದರೆ ದೇಸಾಯಿ ವ್ಯಕ್ತಿತ್ವ ಇಂಥದಕ್ಕೆಲ್ಲ ಸೊಪ್ಪು ಹಾಕಿದ್ದಲ್ಲ ಎನಿಸುತ್ತಿದೆ. ಆದರೂ ಬದುಕಿಗೆ ಸಾವಿನ ಭೀಕರ ಅರ್ಥ ಪೋಣಿಸದಿದ್ದರೆ ಸತ್ತ ಮೇಲೆ ಕೊಂಡಾಡುವ ಸಣ್ಣತನಗಳು ನಮ್ಮಂಥವರನ್ನು ದೂರ ಮಾಡವು. ಇಬ್ಬನಿಯಷ್ಟು ಚಿಕ್ಕ ಜಗತ್ತು ತನ್ನೊಳಗೆ ಏನೆಲ್ಲವನ್ನೂ ಹುದುಗಿಸಿಕೊರಡಿರಬಹುದು. ಅದರ ಮೇಲೆ ಕಿರಣ ಚೆಲ್ಲುವುದು ಸೂರ್ಯನ ಬಾಬ್ತು. ದೇಸಾಯಿ ನನ್ನೊಳಗೆ ಉಳಿದು ಬಿಡುವಂತೆ ಮಾಡಿದ ನಿನ್ನ ಲೇಖನಕ್ಕೆ ನಾನು ಋಣಿ. ಸಾಧ್ಯವಾದರೆ ಕಾಗದ ಬರೆ.

ಚಂದ್ರಶೇಖರ ತಾಳ್ಯ, ಹೊಳಲ್ಕೆರೆ–577 526

ಮುಂಡಕೋಪನಿಷತ್ ಕುರಿತು

ಮಂಗಳೂರಿನ ಎಂ.ಪ್ರಭಾಕರ ಜೋಶಿಯವರು ನನ್ನ "ಮುಂಡಕೋಪನಿಷತ್ತಿನಲ್ಲಿ ಹಕ್ಕಿಗಳ ಸಂಭ್ರಮ" ಲೇಖನವನ್ನು ಓದಿ ಡಿಸೆಂಬರ್ 90ರ ಶೂದ್ರದ ಒಳನೋಟದಲ್ಲಿ "ಪ್ರವೃತ್ತಿಗೆ ವಿರೋಧವಾದ ಸ್ಥಿತಿಯೇ ಮುಂಡಕೋಪನಿಷತ್ತಿನಲ್ಲಿ ಕೀರ್ತಿಸಲ್ಪಟ್ಟಿದೆಯೇ" ಎನ್ನುವ ಸಂದೇಹವನ್ನೆತ್ತಿಕೊಂಡು "ಅಲ್ಲ" ಎಂದು ಸೂಚಿಸಿದ್ದಾರೆ.

ನನ್ನ ಲೇಖನದಲ್ಲಿ ಇಂತಹ ಸಂದೇಹಕ್ಕೆ ಆಸ್ಪದ ನೀಡದೆ ಸ್ಪಷ್ಟ ವಿವರಣೆ ನೀಡಿರುವೆ ಎಂದು ನಂಬುತ್ತೇನೆ. ಮುಂಡಕೋಪನಿಷತ್ತಿನ ಜೋಡಿ ಹಕ್ಕಿಗಳ ರೂಪಕವು "ಮನುಷ್ಯ ಬದುಕುವ ಮೋಹದ ದೆಸೆಯಿಂದ ದಣಿಯುತ್ತಾನೆ" ಎನ್ನುತ್ತದೆ. ಬದುಕಿನ ಮೋಹ ಕಷ್ಟಕ್ಕೆ ಎಡೆಗೊಡಬಾರದು. ಈ ಕಷ್ಟವನ್ನು ನೀಗಿಕೊಳ್ಳಲು ಸಾಧ್ಯವಾಗುವುದೇ ಆತ ತನ್ನೊಳಗೆ ಬಿಟ್ಟುಕೊಳ್ಳುವ ಶಾಂತಿಯಿಂದ. ಆ ಶಾಂತಿ ಆತನ ಜೊತೆಯಲ್ಲಿಯೇ ಇರುವಂಥಾದ್ದು. ಜೋಡಿ ಹಕ್ಕಿಗಳಲ್ಲಿ ಒಂದು ಮೋಹಿತ ಮನುಷ್ಯ ಮತ್ತೊಂದು, ಆತನ ಜೊತೆಯಲ್ಲಿ/ಒಳಗೆ ಇರುವ ಆದರೆ ಆತ ಇನ್ನೂ ಗುರುತಿಸಲಾಗದ ಶಾಂತಿಯ ಸಾಧ್ಯತೆ. ಮನುಷ್ಯನ ಶೋಧದ ಸಾಧ್ಯತೆಗಳೆಲ್ಲ ಆತನ ಜೊತೆಯೇ ಇರುವಾಗ ಆತನಿಗೆ ಬದುಕು ತ್ಯಾಜ್ಯವಲ್ಲ ಎನ್ನುವುದು ಇಲ್ಲಿ ಉಪನಿಷತ್ತಿನ ಋಷಿ ಬಗೆಹರಿಸಿಕೊಳ್ಳುವ ಸಂದೇಹ.

ಜೀವನವನ್ನು ಅನುಭವಿಸಬೇಕು ಮತ್ತು ಅನುಭವಿಸುವ ಸೆಳೆತದಿಂದಾಗಿ ಉದ್ವೇಗಕ್ಕೊಳಗಾಗದೆ ಶಾಂತಿಯಿಂದಿದ್ದು ತನ್ನ ಆಧ್ಯಾತ್ಮಿಕ ಸಾಧನೆಯನ್ನು ಅರ್ಥಪೂರ್ಣ ಮಾಡಿಕೊಳ್ಳಬೇಕು–ಇದು ಮುಂಡಕೋಪನಿಷತ್ತಿನ ಜೀವನದೃಷ್ಟಿ.

ಆರ್.ಡಿ. ಹೆಗಡೆ, ಕೆ.ಆರ್. ನಗರ–571 602

ವಿಮರ್ಶೆಗೆ ಬಂದ ಪುಸ್ತಕಗಳು–ವಿಮರ್ಶೆಗೆ ಮುನ್ನ

ಪುಣ್ಯಕೋಟಿ : ಒಂದು ಸಾಂಸ್ಕೃತಿಕ ಅಧ್ಯಯನ, ಲೇಖಕರು : ಮಹೇಶ ತಿಪ್ಪಶೆಟ್ಟಿ, ಪ್ರಕಾಶಕರು : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಬೆಲೆ: 1 ರೂ.

ಪುಣ್ಯಕೋಟಿ ಗೋವಿನ ಹಾಡಿನ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆ ನಡೆದಿದೆ. ಒಂದರ್ಥದಲ್ಲಿ ಮರೆತು ಹೋದ ಚರ್ಚೆ. ಈ ಜಾನಪದ ಸ್ಮರಣೀಯ ವಸ್ತುವನ್ನು ಸಮಾಜಶಾಸ್ತ್ರಜ್ಞ ಮಹೇಶ ತಿಪ್ಪಶೆಟ್ಟಿ ಅವರು ವಿವಿಧ ಪ್ರಾದೇಶಿಕ ಸಂದರ್ಭದ ಸಾಂಸ್ಕೃತಿಕ ಚೌಕಟ್ಟಿನಲ್ಲಿ ಅದರ ಮಹತ್ವವನ್ನು ಅರ್ಥೈಸಿದ್ದಾರೆ.

ಸೋಗಿನ ಚಂದ್ರ (ಕವನ ಸಂಕಲನ) : ಆಶಾ ಕಡಪಟ್ಟಿ, ಪ್ಯಾಂಥರ್ ಪ್ರಕಾಶನ, ಹುಬ್ಬಳ್ಳಿ, ಬೆಲೆ : 10ರೂ. ಈ ಸಂಕಲನ ಆಶಾ ಕಡಪಟ್ಟಿ ಅವರ ಮೊದಲ ಸಂಕಲನ. ಅತ್ಯಂತ ಸಾಮಾನ್ಯ ಕವನಗಳು, ಚೆನ್ನಾಗಿಯಾದರೂ ಮುದ್ರಿಸಬಹುದಾಗಿತ್ತು.

ವರ್ತುಲದ ಹೊರಗೆ (ಕವನ ಸಂಕಲನ) : ಲಕ್ಷ್ಮೀಶ ಚೊಕ್ಕಾಡಿ ಸುಮನಸಾ ವಿಚಾರ ವೇದಿಕೆ, ಚೊಕ್ಕಾಡಿ, ಸುಳ್ಯ(ತಾ), ದ.ಕ; ಬೆಲೆ: 15ರೂ. ಒಟ್ಟು ನಲವತ್ತಾರು ಕವನಗಳಿರುವ ಸಂಕಲನ. ಚೊಕ್ಕಾಡಿಯವರು ಈಗಾಗಲೇ ಪತ್ರಿಕೆಗಳ ಮೂಲಕ ತಮ್ಮ ಕಾವ್ಯವನ್ನು ಪರಿಚಯಿಸಿದ್ದಾರೆ. ಒಂದಷ್ಟು ಧ್ವನಿಪೂರ್ಣವಾದ ಕವನಗಳಿವೆ.

ತಿರುವಳ್ಳುವರ್ (ಜೀವನ ಚಿತ್ರ) : ಎಸ್. ಮಹಾರಾಜನ್, ಕೇಂದ್ರ ಸಾಹಿತ್ಯ ಅಕಾಡೆಮಿ, ಅನು : ಪಾ. ಶ. ಶ್ರೀನಿವಾಸ, ಮದ್ರಾಸ್ – 600018. ಓದಬಹುದಾದ ಪುಸ್ತಕ.

ವಿದ್ಯಾರ್ಥಿ ಕಾವ್ಯ–90 (ಬೆಳ್ಳಿಹಬ್ಬದ ಪ್ರಕಟಣೆ): ಕರ್ನಾಟಕ ಸಂಘ, ವಿಜಯ ನಗರ ಕಾಲೇಜ್, ಹೊಸಪೇಟೆ, ಇಲ್ಲಿ 41 ವಿದ್ಯಾರ್ಥಿ ಕವಿಗಳಿದ್ದಾರೆ. ಮುಂದಿನ ಪೀಳಿಗೆಗೆ ನಮ್ಮಲ್ಲಿ ಕೆಲವರಾದರೂ ಕವಿಗಳಾಗಿ ಉಳಿಯಬಲ್ಲೆವು ಎಂಬ ಆತ್ಮವಿಶ್ವಾಸವನ್ನು ಇಲ್ಲಿಯ ಕೆಲವು ಕವನಗಳಲ್ಲಿ ನೋಡಬಹುದು. ಓದುವ ರೀತಿಯಲ್ಲಿ ಪ್ರಕಟಿಸಿದ್ದಾರೆ.

ಚುಕ್ಕಿಗಳು (ಕವನ ಸಂಕಲನ) : ಪ್ರೇಮಾ ಸಿರ್ಸೆ, ಆನಂದ ಪ್ರಕಾಶನ, ಬೀದರ್, ಬೆಲೆ : 10ರೂ. ಪ್ರೇಮಾ ಸಿರ್ಸೆಯವರ ಮೂರನೆಯ ಸಂಕಲನ ಇದು. 'ನೂರೊಂದು ನೆನಪು ಎದೆಯಾಳದಲ್ಲಿ' ಸಂಕಲನ ಹೆಣ್ಣೊಬ್ಬಳ ನಾನಾ ರೀತಿಯ ವಿಷಾದಗಳನ್ನು ಆತ್ಮೀಯವಾಗಿ ಹೇಳಿತ್ತು. ಈ ಸಂಕಲನದ ಕವನಗಳು ಅದೇ ದಾಟಿಯಲ್ಲಿ ಸಾಗುತ್ತವೆ. ಆದರೆ 'ನೂರೊಂದು ನೆನಪು ಎದೆಯಾಳದಲ್ಲಿ'ಯ ಕಾವ್ಯದಂತೆ ಇದರಲ್ಲಿ ಊನವಾಗಿದೆ.

—ಸಿದ್ಧಾರ್ಥ



ಕನಸಿಗೊಂದು ಕಣ್ಣು

ಆ ಚಿಕ್ಕ ಒಂದು ನೆನಪು

> "Wipe your hand across your mouth, and laugh ;
> The worlds revolve like ancient women
> Gathering fuel in vacant lots."
>
> — T. S. Eliot

ಅದೊಂದು ದಿನ ಸಂಜೆ ನಾಲ್ಕೂವರೆಯಾಗಿತ್ತು. ಅರ್ಧ ಚಳಿ, ಅರ್ಧ ಬಿಸಿಲು. ಸುತ್ತಲೂ ಗಿಡ ಮರ ಬಳ್ಳಿಗಳು. ಏರುತಗ್ಗುಗಳಿಂದ ಆವೃತ್ತವಾದ ಪ್ರದೇಶ. ಅದರ ಮಧ್ಯದಲ್ಲಿ ಒಂದು ಕೆರೆ. ಜನರಿಗೆ ಜೀವಕೊಟ್ಟು ಸಂಸ್ಕಾದ ಕೆರೆ. ನಿಸರ್ಗದ ವೈಪರೀತ್ಯಗಳಿಂದ ಬರಡಾಗಿ ಮಲಗಿದೆ. ತಮಗಿರುವ ನೆಲವನ್ನು ಅಚ್ಚುಕಟ್ಟಾಗಿ ಮಾಡದೆ ಕೆರೆಯನ್ನು ಸುತ್ತಲೂ ಕಬಳಿಸಿದ್ದಾರೆ. ತಕ್ಷಣ ನನ್ನ ಕೆರೆ ನೆನಪಿಗೆ ಬಂತು. ಗೊತ್ತಿಲ್ಲದೆ ಕಣ್ಣಲ್ಲಿ ನೀರು ತುಂಬಿಕೊಂಡಿತು. ನನ್ನ ಭಾವುಕತೆಗಾಗಿ ನಗು ಬಂತು. ಆ ಕೆರೆಯೂ ಇಂದು ಬರಡಾಗಿದೆ. ತಟ್ಟೆಯಾಗಿದೆ. ಹತ್ತಾರು ಹಳ್ಳಿಗಳನ್ನು ಸಾಕುತ್ತಿದ್ದುದು ಮುದಿ ತಾಯಿಯಂತೆ ಕೊರಗುತ್ತಾ ಮಲಗಿದೆ. ಮತ್ತೊಂದು ಅರ್ಥದಲ್ಲಿ ಬಾಲ್ಯ ನೆನಪಿಗೆ ಬಂತು. ಅಲ್ಲಿ ಒಬ್ಬ ಹುಡುಗ ನಿಂತಿದ್ದ. ಅವನು ನಿಂತಿದ್ದ ವೈಖರಿ ಚೆನ್ನಾಗಿತ್ತು. ತನ್ನ ಕೈಯಲ್ಲಿದ್ದ ಕೋಲನ್ನು ಗಲ್ಲಕ್ಕೆ ಕೊಟ್ಟು ನಿಂತಿದ್ದ. ಏನು ಯೋಚನೆ ಮಾಡುತ್ತಿದ್ದ ಎಂಬುದು ಗೊತ್ತಿಲ್ಲ. ಸ್ವಲ್ಪ ದೂರದಲ್ಲಿ ಆರೇಳು ಆಡು ಮೇಯುತ್ತಿದ್ದವು. ಅವನ ಹತ್ತಿರ ಹೋದೆ. ಹೆಸರು ಕೇಳಿದೆ. ಚಿಕ್ಕ ಎಂದ, ರಕ್ತಮಾಂಸದ ಕೊರತೆಯಿಂದ ಕಡ್ಡಿಯಂತಿದ್ದ. ಕಲ್ಲು ಮುಳ್ಳು ಪೊದೆಗಳ ನಡುವೆ ಓಡಾಡಿ ಕಾಲಿನ ಬೆರಳುಗಳು ರಕ್ತ ಸೋರಿಸಿ ಗಂಟು ಕಟ್ಟಿದ್ದುವು. ಡಿಸೆಂಬರ್‌ನ ಚಳಿಗೆ ಮೈಕೈ ಮುರಿದು ಧೂಳು ಕೂತು ಇಡೀ ಮೈಯಲ್ಲಿ ಬೆಳ್ಳನೆಯ ಗೆರೆಗಳು ಎದ್ದು ಕಾಣುತ್ತಿದ್ದವು. ಎಲ್ಲವನ್ನೂ ಮರೆತು ಮೇಯುತ್ತಿದ್ದ ಆಡುಗಳು ನನ್ನನ್ನು ನೋಡಿ ಭೀತಗೊಂಡಂತೆ ನಿಂತವು. ಅವುಗಳಲ್ಲಿ ಒಂದು ತಾಯಿಮೇಕೆ. ಅದರ ದೇಹವನ್ನು ಜಗ್ಗುವಂಥ ಕೆಚ್ಚಲು, ಹಾಲು ತುಂಬಿದ ಸಮೃದ್ಧ ಕೆಚ್ಚಲು. ಅಕ್ಕ ನೆನಪಿಗೆ ಬಂದಳು. ಅವಳ ಊರಿಗೆ ಹೋದಾಗ; ಕೊಟ್ಟಿಗೆಗೆ

ಕರೆದುಕೊಂಡು ಹೋಗಿ ಬಟ್ಟಲು ತುಂಬ ಮೇಕೆ ಹಾಲು ಒಳ್ಳೆಯದೆಂದು ಕೊಡುತ್ತಿದ್ದಳು. ಕುಡಿಯಲು ಮೂಗು ಸಿಂಡರಿಸಿದಾಗ ಒಳ್ಳೆಯದು ಕುಡಿ, ಏನೂ ಕಾಯಿಲೆ ಬರೋಲ್ಲ, ಮೂಳೆ ಚೆನ್ನಾಗಿ ಗಟ್ಟಿಯಾಗಿರುತ್ತವೆ ಎಂದು ಹೇಳಿದ್ದು ನೆನಪಿಗೆ ಬಂದು ಗಾಂಧೀಜಿಯ ಮೂಳೆ ತುಂಬಿದ ದೇಹ ನೆನಪಿಗೆ ಬಂತು. ಆದರೆ ನನ್ನ ಮುಂದೆ ನಿಂತಿದ್ದ ಹುಡುಗ ಗಾಂಧಿಯಂತೆ ನಿಂತಿದ್ದ. ಭಾರತದ ಬಡತನದ ಸಂಕೇತದಂತೆ ನಿಂತಿದ್ದ.

ಸೂರ್ಯ ಗುಂಡ್ನದ ಕೆಳಗೆ ಇಳಿಯಲು ಸಿದ್ಧತೆ ನಡೆಸಿದ್ದ. ಅವನ ಬೆಳ್ಳನೆಯ ದೇಹ ಕೆಂಪಾಗುತ್ತಿತ್ತು. ಚಿಕ್ಕನನ್ನು ಕುರಿತು ನಿನ್ನ ಮನೆಯಲ್ಲಿ ಕುರಿಯಿಲ್ಲವಾ? ಎಂದೆ. ಇಲ್ಲ, ತರಬೇಕು ಎಂದ ಯಜಮಾನನಂತೆ ಆ ಹದಿಮೂರು ಹದಿನಾಲ್ಕು ವರ್ಷದ ಹುಡುಗ. ಯಾಕೆ ಶಾಲೆಗೆ ಹೋಗುತ್ತಿಲ್ಲ ಎಂದೆ. ನನ್ನಣ್ಣ ಹೋಗುತ್ತಿದ್ದಾನೆ. ನನ್ನನ್ನು ಕೆಲಸ ಮಾಡಲು ಅಪ್ಪ ಶಾಲೆಗೆ ಕಳಿಸಲಿಲ್ಲ ಎಂದ. ಮನೆಯಲ್ಲಿ ಹಸು ಇಲ್ಲವಾ ಎಂದಿದ್ದಕ್ಕೆ : ಇಲ್ಲ ಮನೆ ಚಿಕ್ಕದು. ಹಸು ಕಟ್ಟಬೇಕು. ಮನೆ ಸ್ವಲ್ಪ ದೊಡ್ಡದು ಮಾಡಿದ ಮೇಲೆ ತರಬೇಕು. ಈಗ ಎರಡು ಹೋರಿಗಳು ಇವೆ ಎಂದ. ಅವುಗಳ ಬೆಲೆ ಕೇಳಿದ್ದಕ್ಕೆ ಮೂರು ಸಾವಿರ ಎಂದ. ದಿನಾ ಹಾಲಿಗೇನು ಮಾಡ್ತೀರಿ ಎಂದಿದ್ದಕ್ಕೆ ಅರ್ಧ ಲೀಟರ್ ಕೊಂಡುಕೊಳ್ತೀವಿ ಕಾಫಿಗೆ ಎಂದ. ಅರ್ಧ ಲೀಟರ್‌ನಲ್ಲಿ ಈ ಚಿಕ್ಕ ಕುಡಿಯುವುದೆಲ್ಲಿ ಅನ್ನಿಸಿತು. ಒಂದು ಕಾಲದಲ್ಲಿ ಸ್ವಲ್ಪಮಟ್ಟಿಗೆ ನಾನು ಹೀಗೆಯೇ ಇದ್ದವನಲ್ಲವೆ? ಆದರೆ ಶಾಲೆಗೆ ಹೋಗುತ್ತಿದ್ದೆನಲ್ಲವೆ? ಅಪರೂಪಕ್ಕೆ ಒಂದು ಬಟ್ಟಲು ಹಾಲು ಕುಡಿಯುತ್ತಿದ್ದೆನಲ್ಲವೆ; ದೊಡ್ಡಪ್ಪನಿಗೆ ಗೊತ್ತಿಲ್ಲದಂತೆ ಕೊಡುತ್ತಿದ್ದಾಗ. ಮನೆಯಲ್ಲಿ ಕೆಚ್ಚಲು ತುಂಬಿದ ಹಸುಗಳು ಕೊಟ್ಟಿಗೆಯಲ್ಲಿ ಸೊಂಪಾಗಿ ಮೆಲುಕು ಹಾಕುತ್ತಿದ್ದರೂ ಎಂಬ ಭೂತದ ಲಹರಿ ಹಾದುಹೋಯಿತು. ಚಿಕ್ಕ ದಿವಸಕ್ಕೆ ಎಷ್ಟು ಬಾರಿ ತಿನ್ನುತ್ತೀಯ ಎಂದಾಗ : ಯಾವ ಸಂಕೋಚವಿಲ್ಲದೆ ಬೆಳಗ್ಗೆ ಹತ್ತು ಗಂಟೆಗೆ ಊಟ, ಮತ್ತೆ ರಾತ್ರಿ ಒಂಭತ್ತು ಗಂಟೆಗೆ ಎಂದ. ಬಡ ರೈತನ ಮನೆಯಲ್ಲಿ ಅದೆಂಥ ಊಟವಿರಬಹುದೆಂದು ಯೋಚಿಸಿದೆ. ತರಕಾರಿ ಸೊಪ್ಪು ಅಪರೂಪಕ್ಕೆ ಸಾರಿನಲ್ಲಿ ಕಾಣಿಸಿಕೊಳ್ಳುವುದು.

ಚಿಕ್ಕ ನನ್ನ ಮಾತಿನ ಗೊಂದಲಗಳ ಆಳಕ್ಕೆ ಇಳಿಯಲಿಲ್ಲ. ತೊಟ್ಟಿಲಿನ ಮಗುವಿನಂತೆ ಕಾಣುತ್ತಿದ್ದ. ಈ ಜಗತ್ತಿನ ನಾನಾ ಸಮಸ್ಯೆಗಳಿಗೆ ಪಕ್ಕಾಗದೆ ನಿಂತಿದ್ದ. ಸೂರ್ಯ ಗುಂಡ್ನದ ಕೆಳಗೆ ಇಳಿದಿದ್ದ. ಹಕ್ಕಿಗಳ ಚಿಲಿಪಿಲಿ ನಾದ ಪೊದೆಯಿಂದ ಹೊರಹೊಮ್ಮುತ್ತಿತ್ತು. ಚಿಕ್ಕ ನಿನಗೆ ಪಕ್ಷಿಗಳು ಇಷ್ಟವಾ ಎಂದೆ. ನನ್ನ ಪ್ರಶ್ನೆಗೆ ನಗುತ್ತಾ ನಿಂತಿದ್ದ. ಗೆಳೆಯ ಬಂದ ತನ್ನ ಕೆಲಸ ಮುಗಿಸಿ, ಬೆಂಗಳೂರಿನ ರಾಕ್ಷಸೀ ದೇಹದ ಕಡೆಗೆ ಎಂದಿನಂತೆ ಹೊರಟು ಹಿಂದಿರುಗಿ ನೋಡಿದಾಗ; ಆ ಚಿಕ್ಕ ಪ್ರತಿಮೆಯಂತೆ ನಿಂತೇ ಇದ್ದ.

4–1–1991

— ಶೂದ್ರ ಶ್ರೀನಿವಾಸ್

ಜಾಗೃತ ಸಾಹಿತ್ಯ ವೇದಿಕೆ

ಸಾಮರಸ್ಯ – ಒಂದು ಸಾಂಸ್ಕೃತಿಕ ಸಂವಾದ

ಮತಾಂಧತೆ, ಮತೀಯ ಗಲಭೆ, ಸಾಮರಸ್ಯದ ತತ್ವ, ಪ್ರಯೋಗ ಇತ್ಯಾದಿಗಳನ್ನು ಕುರಿತಂತೆ ಹೆಚ್ಚು ಆಳವಾದ, ಸಮಗ್ರವಾದ ಚರ್ಚೆ ಈಗ ಎಂದಿಗಿಂತ ಹೆಚ್ಚಿನ ಅವಶ್ಯಕತೆಯಾಗಿಬಿಟ್ಟಿದೆ. ವಿವಿಧ ಧರ್ಮ, ರಾಜಕೀಯ ತತ್ವ ಪ್ರಣಾಲಿಗಳು ಸಾಮರಸ್ಯದ ಕಲ್ಪನೆಯನ್ನು ನೋಡುವ, ವಿಶ್ಲೇಷಿಸುವ ಕ್ರಮಗಳ ಅಧ್ಯಯನವೂ ಈಗ ದೊಡ್ಡ ಅಗತ್ಯ. ವಿಚಾರವಂತರ ಅಮೂರ್ತ ಚರ್ಚೆ, ಜನ ಸಾಮಾನ್ಯರ ಜೀವನದಿಂದಲೂ ಅನೇಕ ಸಂಗತಿಗಳನ್ನು ಕಲಿಯಬೇಕಾಗಿದೆ. ಈ ದಿಕ್ಕಿನಲ್ಲಿನ ಒಂದು ಪ್ರಯತ್ನ ಇದು.

ಕರ್ನಾಟಕದ ಎಲ್ಲಾ ಕಡೆ ಪ್ರಗತಿಪರ ಶಕ್ತಿಗಳು ಒಂದುಗೂಡಿ ಚರ್ಚಿಸಲು ದಯವಿಟ್ಟು ವೇದಿಕೆಯನ್ನು ಬಳಸಿಕೊಳ್ಳಿ

ಸಂಚಾಲಕರು :
ಕಿ. ರಂ. ನಾಗರಾಜ
ಶೂದ್ರ ಶ್ರೀನಿವಾಸ್

FNP/KRNU/72 No. M (2) PRB 211/73/74

SHOODRA Kannada Monthly

He who binds to himself a joy
Doth the winged life destroy
But he who kisses the joy as it flies
Lives in Eternitys sun rise

*

The look of love alarms
Because tis filld with fire
But the look of soft deceit
Shall Win the lovers hire

*

What is it men in women do require
The lineaments of Gratified Desire
What is it women do in men require
The lineaments of Gratified Desire

— **William Blake**

M. Srinivas, Editor for Shudra, Printed at :
Pallavi Printers, No. 1, 3rd Cross, Balaji Nagar,
Suddagunte Palya, D.R. College Post, Bangalore-29